ಲಂಕೇಶ್

ಅಕ್ಟೋಬರ್ 14, 2009 ರೂ. 12/-



ಹೊಳೆಗೆ ಹೊಸನೀರು
ಪೀರ್‌ಬಾಷ




ಆಪರೇಷನ್ ಗ್ರೀನ್ ಹಂಟ್

...ನರ ಮೇಲೆ ಸರ್ಕಾರದ ಸಮರ





ವೈದ್ಯರ ಮುಷ್ಕರ ರೌಡಿ ಮಂತ್ರಿ ರೋಗಗ್ರಸ್ತ ಸರ್ಕಾರ



ಹುಬ್ಬಳ್ಳಿ ಕಿಮ್ಸ್ ಡಾ. ಜಾನಕಿಯ ಝುಲಕ್ ಸಿ.ಡಿ.



ಶಿಕಾರಿಪುರ ಜಿಲ್ಲೆ ಶಿವಮೊಗ್ಗೆಗೆ ವಂಚನೆ

ಕೋಬಾಡ್ ಗಾಂಧಿಯನ್ನು ಟೆರರಿಸ್ಟ್ ಎನ್ನುವುದಾದರೆ...

ಕೋಬಾಡ್ ಗಾಂಧಿಯ ಶ್ರೀಮಂತ ಹಿನ್ನೆಲೆ, ಅಪಾರ ವಿದ್ವತ್ತು ಮತ್ತು ಆದಿವಾಸಿಗಳ ಹೋರಾಟಕ್ಕೆ ಸಾಥ್ ಕೊಡಲು ಎಲ್ಲ ಐಷಾರಾಮಗಳನ್ನೂ ತ್ಯಾಗ ಮಾಡಿ ನಾಗಪುರಕ್ಕೆ ಸ್ಥಳಾಂತರಗೊಂಡಿದ್ದ ಅವರ ಅಪಾರ ಜೀವನ ಪ್ರೇಮ, ಸರಳತೆ ಎಲ್ಲವೂ ಈಗಾಗಲೇ ಮಾಧ್ಯಮಗಳಲ್ಲಿ ಸಾಕಷ್ಟು ವರದಿಯಾಗಿದೆ. ಅವರ ಬದ್ಧತೆ, ಜನಪ್ರೀತಿ ಮತ್ತು ಹೋರಾಟಕ್ಕೆ ಮಾಡಿಕೊಂಡ ಸಮರ್ಪಣೆಗಳ ಇಂದಿನ ಯುಗದಲ್ಲಿ ಅಪರೂಪವಾದದ್ದು ಮತ್ತು ಮೇಲೆ ಹೇಳಿದ ಗಾಂಧೀವಾದಿಗಳ ಬದುಕಿಗೂ ಕೋಬಾಡ್ ಗಾಂಧಿಯ ಬದುಕಿಗೂ ಈ ನೆಲೆಯಲ್ಲಿ ಯಾವುದೇ ವ್ಯತ್ಯಾಸವಿಲ್ಲ, ದಾರಿಯ ಹೊರತುಪಡಿಸಿ! ಹೀಗಾಗಿ ಕರಮ್‌ಚಂದ್ ಗಾಂಧಿಯನ್ನು ಅವರ ತ್ಯಾಗ, ಬದ್ಧತೆಗಳಿಗೆ ನಾಯಕನೆಂದು ಒಪ್ಪಿಕೊಳ್ಳುವವರಿಗೆ ಕೋಬಾಡ್ ಗಾಂಧಿಯನ್ನು ಟೆರರಿಸ್ಟ್ ಎನ್ನಲು ಕಾರಣವೇ ಇ

"ನಕ್ಸಲ್ ಚಳವಳಿಯನ್ನು ಪ್ರಭುತ್ವ ಸಮಸ್ಯೆ ಎಂದು ಪರಿಗಣಿಸಿದರೆ ಸಾಮಾನ್ಯ ಜನರು ಪರಿಹಾರ ಎಂದು ಭಾವಿಸುತ್ತಾರೆ. ಈ ಒಗಟು ಬಿಡಿಸದೆ ನಕ್ಸಲ್ ಸಮಸ್ಯೆ ಪರಿಹಾರವಾಗದು."

- ಜಸ್ಟೀಸ್ ಎಂ.ಎನ್.ರಾವ್, ಆಂಧ್ರ ಹೈಕೋರ್ಟ್‌ನ ಮಾಜಿ ಮುಖ್ಯ ನ್ಯಾಯಾಧೀಶರು

2003ರ ನವಂಬರ್ 23 ಇರಬೇಕು. ಆಗಿನ್ನೂ ನಾಡು ಕಂಡ ಅಪ್ರತಿಮ ಗಾಂಧೀವಾದಿ ಪೊನ್ನಮ್ಮಾಳ್ ಇನ್ನೂ ಬದುಕಿದ್ದರು. ಕೇವಲ ಒಂದು ವಾರದ ಕೆಳಗಷ್ಟೇ (ನವಂಬರ್ 17ರಂದು) ಮಲೆನಾಡಿನಲ್ಲಿ ಪ್ರಪ್ರಥಮ ಸುಳ್ಳು ಎನ್‌ಕೌಂಟರ್ ನಡೆದು ಹಳ್ಳಿಯೊಂದರಲ್ಲಿ ನಿದ್ರಿಸುತ್ತಿದ್ದ ಹೋರಾಟಗಾರ್ತಿಯರಾದ ಪಾರ್ವತಿ ಮತ್ತು ಹಾಜಿಮಾರನ್ನು ಪೊಲೀಸರು ಗುಂಡಿಟ್ಟು ಕೊಲೆ ಮಾಡಿದ್ದರು. ಪಾರ್ವತಿ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ ಪ್ರತಿಭಾನ್ವಿತ ವಿದ್ಯಾರ್ಥಿನಿಯಾಗಿದ್ದು 90ರ ದಶಕದಲ್ಲಿ ನಡೆದ ಎಲ್ಲಾ ಜನಪರ ಹೋರಾಟಗಳಿಗೂ ನಾಯಕತ್ವ ನೀಡಿದ್ದಳು. ಬಡತನದ ಹಿನ್ನೆಲೆಯಿಂದ ಬಂದಿದ್ದ ಹೆಣ್ಣುಮಗಳೊಬ್ಬಳು ತನ್ನ ಸ್ವಾರ್ಥವನ್ನೂ ಮರೆತು ಸಮಾಜಕ್ಕಾಗಿ ಹಗಲು ಇರುಳು ಹೋರಾಡುತ್ತಿದ್ದದ್ದನ್ನು ಕಂಡು ಗಾಂಧೀವಾದಿ ಪೊನ್ನಮ್ಮಾಳ್‌ಗೆ ಹೃದಯ ತುಂಬಿ ಬರುತ್ತಿತ್ತು. ಪಾರ್ವತಿಯನ್ನು ನಕ್ಸಲೈಟೆಂದು ಎನ್‌ಕೌಂಟರ್ ಮಾಡಿ ಕೊಂದುಹಾಕಿದ ಪೊಲೀಸರ ಬಗ್ಗೆ ಪೊನ್ನಮ್ಮಾಳ್ ಅವರಿಗೆ ತೀವ್ರವಾದ ಆಕ್ರೋಶ ಉಂಟಾಗಿತ್ತು. ಅವರಿಗೆ ಈ ನಕ್ಸಲೈಟರೆಂದರೆ ಯಾರು? ಅವರ ಗೊತ್ತು ಗುರಿಗಳೇನು? ಇತ್ಯಾದಿಗಳೇನೂ ಗೊತ್ತಿರಲಿಲ್ಲ. ಪೊಲೀಸರು ಪೊನ್ನಮ್ಮಾಳ್ ಬಳಿ ಬಂದು ಪಾರ್ವತಿ ನಕ್ಸಲೈಟ್ ಆಗಿದ್ದಳೆಂದು, ನಕ್ಸಲೈಟರೆಂದರೆ ಭಯೋತ್ಪಾದಕರೆಂದು ಚಿತ್ರಣ ಕೊಡಲು ಪ್ರಯತ್ನಿಸಿದರು. ಆಗ ಗಾಂಧೀವಾದಿ ಪೊನ್ನಮ್ಮಾಳ್ ಪೊಲೀಸರಿಗೆ ಒಂದೇ ಒಂದು ಉತ್ತರ ಕೊಟ್ಟು ಕಳುಹಿಸಿದ್ದರು.

ಪಾರ್ವತಿ ನಕ್ಸಲೈಟ್ ಆಗಿದ್ದಳು ಎನ್ನುವುದಾದರೆ ನಕ್ಸಲೈಟರು ಒಳ್ಳೆಯವರೇ ಆಗಿರಬೇಕು.!

ಇದು ಗಾಂಧಿವಾದವನ್ನು ಜನಪ್ರೀತಿಯ ನೆಲೆಯಲ್ಲಿ ಅರ್ಥಮಾಡಿಕೊಂಡ ನಾಡಿನ ಹಿರಿಯ ಜೀವವೊಂದು ನಕ್ಸಲೈಟರನ್ನು ಅರ್ಥಮಾಡಿಕೊಂಡ ರೀತಿ. ಅಷ್ಟೇ ಏಕೆ ಇತ್ತೀಚೆಗೆ ಹಂಪಿ ವಿಶ್ವವಿದ್ಯಾಲಯಕ್ಕಾಗಿ ಕನ್ನಡದ ಯುವಕವಿ ಪೀರ್‌ಬಾಷಾ ಸಂಪಾದಿಸಿ ಕೊಟ್ಟಿರುವ 'ಸಮಾಜವಾದಿ ಹೋರಾಟಗಾರರ ಸಂದರ್ಶನ' ಎಂಬ ಪುಸ್ತಕದಲ್ಲಿ ನಾಡಿನ ಇತಿಹಾಸವನ್ನು ರೂಪಿಸಿದ ಎಂಟು ಹಿರಿಯ ಲೋಹಿಯಾ ವಾದಿ ಸಮಾಜವಾದಿಗಳು ನಕ್ಸಲರ ಬಗ್ಗೆ ತಮ್ಮ




ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವರಲ್ಲಿ ಹಲವರು ನಕ್ಸಲರ ಬಗ್ಗೆ ಹಲವು ಮತಭೇದಗಳನ್ನು, ಸೈದ್ಧಾಂತಿಕ ವಿರೋಧವನ್ನು ವ್ಯಕ್ತಪಡಿಸಿದರೂ ಯಾರೂ ನಕ್ಸಲರನ್ನು ಟೆರರಿಸ್ಟ್‌ಗಳೆಂದೋ, ಸಮಾಜ ದ್ರೋಹಿಗಳೆಂದೋ ಬಣ್ಣಿಸಿಲ್ಲ. ಅದಕ್ಕೆ ಕಾರಣವಿದೆ. ಹೆಚ್ಚುಕಡಿಮೆ 80ರ ಆಸುಪಾಸಿನಲ್ಲಿರುವ ಅವರೆಲ್ಲರೂ ಸ್ವಾತಂತ್ರ್ಯಾನಂತರದ ಭಾರತ ಈ ದೇಶದ ಬಡತನವನ್ನು ಜನರ ಕಷ್ಟಗಳನ್ನು ಹೋಗಲಾಡಿಸುತ್ತದೆಂದು ಕನಸು ಕಂಡಿದ್ದವರು. ಆದರೆ 47ರ ನಂತರದ ರಾಜಕಾರಣ ಮತ್ತು ಆರ್ಥಿಕತೆ ಕೆಲವರ ಸಮೃದ್ಧಿ ಮತ್ತು ಉಳಿದವರೆಲ್ಲರ ಬರ್ಬಾದಿಯನ್ನು ಮಾತ್ರ ಸಾಧಿಸಿರುವುದನ್ನು ಕಂಡು ಸಂಕಟಪಟ್ಟವರು. ಹೀಗಾಗಿಯೇ ಈ ಶೋಷಕ ಪ್ರಭುತ್ವದಿಂದ ದೂರ ಉಳಿದು ಜನರಿಗೆ ಹತ್ತಿರವಾಗಿ ಬದುಕಿದವರು. ಜನರ ಬದುಕು ಹಸನಾಗಲು ಈ ಇಳಿವಯಸ್ಸಿನಲ್ಲೂ ತಮ್ಮ ಕೈಲಾದಷ್ಟು ಪ್ರಯತ್ನ ನಡೆಸುತ್ತಿರುವವರು. ಹೀಗಾಗಿ ಅವರ ಜೀವನ ದೃಷ್ಟಿ ಹಾಗೂ ಅವರ "ತಾತ್ವಿಕ ಅಹಿಂಸಾವಾದಗಳು" ಜನರ ಒಳಿತು ಮತ್ತು ಬದಲಾವಣೆಯನ್ನು ಆಶಿಸುತ್ತವೆಯೇ ಹೊರತು ಸರ್ಕಾರಿ ಗಾಂಧೀವಾದಿಗಳ ತರ ಹೋರಾಟಗಾರರ ನಿಶ್ಶಸ್ತ್ರೀಕರಣ ಮಾಡುವ "ಭಂಡ ಅಹಿಂಸಾವಾದ"ದ ವ್ಯಸನವನ್ನು ಹೊಂದಿಲ್ಲ. ಹೀಗಾಗಿಯೇ ಈ ಗಾಂಧೀವಾದಿಗಳಿಗೆ ನಕ್ಸಲರಲ್ಲಿಯೂ ಒಬ್ಬ ಹೋರಾಟಗಾರ ಕಾಣುತ್ತಾನೆಯೇ ಹೊರತು ಭಯೋತ್ಪಾದಕ ಕಾಣುವುದಿಲ್ಲ. ಏಕೆಂದರೆ ಮೋಹನ್‌ದಾಸ್ ಕರಮ್‌ಚಂದ್ ಗಾಂಧಿಯ ಬದುಕು ಮತ್ತು ಹೋರಾಟಗಳ ಬಗ್ಗೆ ಬಗೆಬಗೆಯ ವ್ಯಾಖ್ಯಾನಗಳಿದ್ದರೂ ಈ ಜೀವಂತ ಗಾಂಧಿ ಗಳು ಕಟ್ಟಿಕೊಂಡಿರುವ ಗಾಂಧಿಗೆ ಮತ್ತು ಗಾಂಧೀವಾದಕ್ಕೆ ಮಾತ್ರ ಜನರ ಒಳಿತೇ ಅಂತಿಮವಾದದ್ದು.

ನಾಡಿನ ಮತ್ತೊಬ್ಬ ಹಿರಿಯ ಗಾಂಧೀವಾದಿ ದೊರೆಸ್ವಾಮಿಯವರು ಸಹ ಇತ್ತೀಚಿನ ಸಭೆಯೊಂದರಲ್ಲಿ ಸದುದ್ದೇಶ ಮತ್ತು ಜನರ ಒಳಿತನ್ನು ಗುರಿಯಾಗಿರಿಸಿ ಕೊಂಡಿರುವ ಹೋರಾಟಗಳು ಹಿಂಸಾತ್ಮಕ ದಾರಿಯನ್ನು ಹಿಡಿಯುವ ಬಗ್ಗೆ ತಾಂತ್ರಿಕ ಆಕ್ಷೇಪ ವ್ಯಕ್ತಪಡಿಸಿದ ವಿನಃ ತಾತ್ವಿಕ ಆಕ್ಷೇಪವನ್ನಲ್ಲ. ಅಹಿಂಸಾತ್ಮಕ ಹೋರಾ ಪ್ರತಿಯೊಬ್ಬನಿಗೂ ಸುಲಭ ಸಾಧ್ಯವಾದದ್ದು, ಹಿಂಸಾತ್ ಹೋರಾಟ ಎಲ್ಲರನ್ನೂ ಒಳಗೊಳ್ಳಲಾರದು ಎಂಬು ಅವರ ಆಕ್ಷೇಪದ ಸಾರಾಂಶ. ಗಣಪತಿಯಂ ಬಂದೀಗೌಡರಂಥ ನಾಡಿನ ಹಿರಿಯ ಗಾಂಧೀವಾದಿಗ ಜನರಿಂದ ದೂರ ಉಳಿದು, ಕಾಡುಗಳಲ್ಲಿ ಹೊಟ್ಟೆಪಾಡಿ ಕಾಯಕ ಮಾಡುವ ಪೊಲೀಸರ ವಿರುದ್ಧ ಹಿಂಸೆ ನಡೆಸಿದ ಸಮಾಜ ಬದಲಾವಣೆ ಹೇಗಾಗುತ್ತದೆ ಎಂಬ ಆಕ್ಷೇಪ ದೆಯೇ ವಿನಃ ಅವರು ಯಾರೂ ಅಹಿಂಸೆಯೆಂಬ ತಾ ಹಿನ್ನೆಲೆಯಲ್ಲೂ ನಕ್ಸಲೈಟ್ ಚಳವಳಿಯನ್ನು ಟೆರರಿ ಚಳವಳಿಯೆಂದೋ, ಸಮಾಜದ್ರೋಹಿ ಚಟುವಟ ಯೆಂದೋ ಕರೆದಿಲ್ಲ.

ಬರಲಿರುವ ಗಾಂಧೀ ಜಯಂತಿಯಂದು ಈ ಎ ಜೀವಂತ ಗಾಂಧಿಗಳು ನಕ್ಸಲರ ಬಗ್ಗೆ ಇಟ್ಟುಕೊಂಡಿರು ಅಭಿಪ್ರಾಯಗಳನ್ನು ಚರ್ಚಿಸುವುದು ಅತ್ಯಂ ಮುಖ್ಯವಾಗಿದೆ. ಏಕೆಂದರೆ ಮೊನ್ನೆ ನಕ್ಸಲರ ಹಿರಿ ನಾಯಕ ಕೋಬಾಡ್ ಗಾಂಧೀಯನ್ನು ದೆಹಲಿ ಪೊಲೀಸ ಬಂಧಿಸಿದ ಮೇಲೆ ಮಾಧ್ಯಮಗಳು ಈ ಹಿರಿಯ ನಕ್ಸ ಗಾಂಧೀಯನ್ನು ಭಯೋತ್ಪಾದಕನೆಂಬಂತೆ ಚಿತ್ರಿಸತೊಡಗಿ

ಕೋಬಾಡ್ ಗಾಂಧಿಯ ಶ್ರೀಮಂತ ಹಿನ್ನೆಲೆ, ಅಪಾ ವಿದ್ವತ್ತು ಮತ್ತು ಆದಿವಾಸಿಗಳ ಹೋರಾಟಕ್ಕೆ ಸಾಥ್ ಕೊಡಲು ಎಲ್ಲ ಐಷಾರಾಮಗಳನ್ನೂ ತ್ಯಾಗ ಮಾ ನಾಗಪುರಕ್ಕೆ ಸ್ಥಳಾಂತರಗೊಂಡಿದ್ದು ಅವರ ಅಪಾರ ಜೀವ ಪ್ರೇಮ, ಸರಳತೆ ಎಲ್ಲವೂ ಈಗಾಗಲೇ ಮಾಧ್ಯಮಗಳ ಸಾಕಷ್ಟು ವರದಿಯಾಗಿದೆ. ಅವರ ಬದ್ಧತೆ, ಜನಪ್ರೀ ಮತ್ತು ಹೋರಾಟಕ್ಕೆ ಮಾಡಿಕೊಂಡ ಸಮರ್ಪಣೆಗಳ ಇಂದಿನ ಯುಗದಲ್ಲಿ ಅಪರೂಪವಾದದ್ದು ಮತ್ತು ಮೇ ಹೇಳಿದ ಗಾಂಧೀವಾದಿಗಳ ಬದುಕಿಗೂ ಕೋಬಾ ಗಾಂಧಿಯ ಬದುಕಿಗೂ ಈ ನೆಲೆಯಲ್ಲಿ ಯಾವುದ ವ್ಯತ್ಯಾಸವಿಲ್ಲ, ದಾರಿಯನ್ನು ಹೊರತುಪಡಿಸಿ! ಹೀಗಾ ಕರಮ್‌ಚಂದ್ ಗಾಂಧಿಯನ್ನು ಅವರ ತ್ಯಾಗ, ಬದ್ಧತೆಗಳಿ ನಾಯಕನೆಂದು ಒಪ್ಪಿಕೊಳ್ಳುವವರಿಗೆ ಕೋಬಾಡ್ ಗಾಂ ಯನ್ನು ಟೆರರಿಸ್ಟ್ ಎನ್ನಲು ಕಾರಣವೇ ಇಲ್ಲ.

►►►12



ಚಾರ್ವಾಕ

» ಶಿವಸುಂದರ್

ನೋ ಕಾಮೆಂಟ್ಸ್

"ಅಬ್ದುಲ್ ಕಲಾಂಗೆ ಅಣುಶಕ್ತಿಯ ಬಗ್ಗೆ ಹೆಚ್ಚೇನೂ ಗೊತ್ತಿಲ್ಲ. ಆದ್ದರಿಂದಲೇ ಪೋಖ್ರಾನ್-2 ಒಂದು ವೈಫಲ್ಯ ಎಂದು ನಾನು ಸಾಬೀತುಪಡಿಸುತ್ತಿದ್ದಂತೆ ಎಲ್ಲಿ ಹೋಗಿ ತಲೆಮರೆಸಿಕೊಳ್ಳಬೇಕೆಂದು ಅವರಿಗೆ ಗೊತ್ತಾಗುತ್ತಿಲ್ಲ."

ಅಣು ವಿಜ್ಞಾನಿ ಕೆ. ಸಂತಾನಂ



"ನಕಲಿ ಎನ್ಕೌಂಟರ್ ಹೇಗೆ ನಡೆಸಬೇಕು, ಸರ್ಕಾರಿ ಭಯೋತ್ಪಾದನೆಯನ್ನ ಹೇಗೆ ನಡೆಸಬೇಕು ಎಂಬುದನ್ನು ನರೇಂದ್ರ ಮೋದಿಯಲ್ಲದೆ ಬೇರೆ ಯಾರು ಹೇಳಿಕೊಡಲು ಸಾಧ್ಯ?"

-ಬಿ.ಕೆ. ಹರಿಪ್ರಸಾದ್, ಕಾಂಗ್ರೆಸ್ ನಾಯಕ

"ರಾಹುಲ್ ಗಾಂಧಿ ಒಬ್ಬ ಪ್ರಭಾವಶಾಲಿ ನಾಯಕನಾಗಿ ಬೆಳೆಯುತ್ತಿದ್ದಾನೆ. ಆತ ತಳಮಟ್ಟದ ಜನರೊಡನೆ ಬೆರೆತು ಓಡಾಡುತ್ತಿರುವುದನ್ನು ನೋಡಿದರೆ ಆತನಿಗೆ ಉಜ್ವಲ ಭವಿಷ್ಯವಿದೆ ಎಂದು ನನಗೆ ಖಚಿತವಾಗಿ ಅನಿಸುತ್ತಿದೆ."

- ಶತ್ರುಘ್ನ ಸಿನ್ಹಾ, ನಟ ಮತ್ತು ಬಿಜೆಪಿ ನಾಯಕ

"ಭಾರತ-ಪಾಕಿಸ್ತಾನದ ನಡುವೆ ಅಣ್ವಸ್ತ್ರ ಯುದ್ಧ ನಡೆದರೆ ಭಾರತ ಪಾಕಿಸ್ತಾನವನ್ನು ಸರ್ವನಾಶ ಮಾಡುವುದಂತೂ ಖಚಿತ. ಆದರೆ ಅದೇ ಪ್ರಕ್ರಿಯೆಯಲ್ಲಿ ಭಾರತದ ಅರ್ಧದಷ್ಟು ಜನಸಂಖ್ಯೆಯೂ ನಾಶವಾಗುತ್ತದೆ."

- ಟೇಲರ್ ಬ್ರಾಂಚ್, ಕ್ಲಿಂಟನ್ ಕಥನ ಪುಸ್ತಕದಲ್ಲಿ

"ಇದೀ ಭಾರತವೇ ಈ ಚಾಂಪಿಯನ್ ಟ್ರೋಫಿಯ ಲೀಗ್ ಮ್ಯಾಚಿನ ಈ ಹಂತದಲ್ಲಿ ಪಾಕಿಸ್ತಾನ ಗೆಲ್ಲಲಿ ಎಂದು ಪ್ರಾರ್ಥಿಸುವ ಪರಿಸ್ಥಿತಿ ಎದುರಾಗಿದೆ. ಏಕೆಂದರೆ ಪಾಕಿಸ್ತಾನ ಆಸ್ಟ್ರೇಲಿಯಾ ವಿರುದ್ಧ ಗೆಲ್ಲದಿದ್ದಲ್ಲಿ ಭಾರತಕ್ಕೆ ಸೆಮಿಫೈನಲ್ ಹಂತಕ್ಕೆ ಹೋಗುವ ಅವಕಾಶ ಸಿಗುವುದಿಲ್ಲ. ಇದು ದೈವದತ್ತವಾದ ಅವಕಾಶ. ಇದನ್ನು ಬಳಸಿಕೊಂಡು ಎರಡೂ ದೇಶಗಳು ಹತ್ತಿರ ಬರಲಿ ಎಂದು ನಾನು ಹಾರೈಸುತ್ತೇನೆ."

- ರಮೀಜ್ ರಾಜ, ಪಾಕಿಸ್ತಾನದ ಮಾಜಿ ಕ್ರಿಕೆಟಿಗ

"RTI ಅರ್ಜಿಯನ್ನು ದಾಖಲು ಮಾಡುವಲ್ಲಿ ಪ್ರಮುಖವಾದ ಅಂಶ ಸಮಸ್ಯೆಗಳನ್ನು ಪಟ್ಟಿ ಮಾಡುವುದಲ್ಲ. ಬದಲಿಗೆ ನಿರ್ದಿಷ್ಟವಾದ ಮತ್ತು ನಿಖರವಾದ ಮಾಹಿತಿಗಳಿಗಾಗಿ ಆಗ್ರಹಿಸುವುದು."

- *RTI* ಕಾರ್ಯಕರ್ತ

"ನೀವು ನನ್ನನ್ನು ನಕ್ಸಲನೆನ್ನಿರಿ ಅಥವಾ ಬೇರೆ ಬೇಕಾದದ್ದೆನ್ನಿರಿ. ನಾನು ಗನ್ನು ಹಿಡಿದಿರುವುದು ನನ್ನ ಕುಟುಂಬಕ್ಕೆ ಮೂರು ಕೆಜಿ ಧಾನ್ಯವನ್ನು ಪಡೆದುಕೊಳ್ಳಲೆಂಬುದಂತೂ ಸತ್ಯ."

-ನಕ್ಸಲ್ ದಳದ ಸದಸ್ಯ (ತೆಹೆಲ್ಕಾ ವರದಿ)

ನಂಬಿದ್ರೆನಂಬಿ ಬಿಟ್ರೆಬಿಡಿ

"ಪೋಖ್ರಾನ್ ಪ್ರಯೋಗ ಆದಕೂಡಲೇ ಅದು ವಿಫಲವಾಯಿತೆಂಬುದು ಕಲಾಂರನ್ನೂ ಒಳಗೊಂಡಂತೆ ನಮಗೆಲ್ಲಾ ಮನವರಿಕೆಯಾಗಿತ್ತು."

- ಕೆ. ಸಂತಾನಂ, ಅಣು ವಿಜ್ಞಾನಿ

"ಸಿನಿ ನಟ ಶೈನಿ ಅಹೂಜ ಸಂತನೇನೂ ಅಲ್ಲ, ಅದೇ ರೀತಿ ರೇಪಿಸ್ಟನೂ ಅಲ್ಲ, ಆತನ ಕೆಲಸದಾಕೆ ಸಮ್ಮತಿಯ ಮೇರೆಗೆ ಅವರಿಬ್ಬರೂ ಕೂಡಿದ್ದರು. ಆದ್ದರಿಂದ ಅದು ರೇಪ್ ಅಲ್ಲ."


- ಶೈನಿ ಅಹೂಜನ ವಕೀಲರು

"ರಾಹುಲ ಗಾಂಧಿ ಭೇಟಿ ನೀಡಿದ ವಿದರ್ಭದ ಬಡ ವಿಧವೆ ಕಲಾವತಿ ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾಳೆ ಎಂಬುದು ಸುದ್ದಿಯಾದ ತಕ್ಷಣ ಆಕೆಯ ಗ್ರಾಮಸ್ಥರು ಆಕೆಯ ಬಗೆ ಅಸಭ್ಯವಾಗಿ ಮಾತಾಡಿಕೊಂಡು ಲೇವಡಿ ಮಾಡಲು ಪ್ರಾರಂಭಿಸಿದ್ದಾರೆ."

ಪತ್ರಿಕಾ ವರದಿ

ಸಾಮೂಹಿಕ ಹತ್ಯಾಕಾಂಡ ಎಂದು ಕರೆಯಬಹುದೇ?

"ನಕ್ಸಲೈಟರ ಮೇಲೆ ನಡೆಸುವ ಮಿಲಿಟರಿ ಕಾರ್ಯಾಚರಣೆಯನ್ನು ಯುದ್ಧ ಎಂದು ಕರೆಯುವುದನ್ನು ನಾನು ವಿರೋಧಿಸುತ್ತೇನೆ."



- ಪಿ. ಚಿದಂಬರಂ, ಗೃಹಮಂತ್ರಿ


ಮೌಢ್ಯವನ್ನು ಕಳೆಯದ ಭಾರತದ ಆಧುನಿಕತೆ!

"ಭಾರತದಲ್ಲಿ ಜಾಗತೀಕರಣದ ಪ್ರಕ್ರಿಯೆ ಪ್ರಾರಂಭವಾದ ಮೇಲೆ ನಗರ ಹಾಗೂ ಪಟ್ಟಣಗಳ ಸುಶಿಕ್ಷಿತ ಮಧ್ಯಮವರ್ಗದವರು ಅನಕ್ಷರಸ್ಥ ಗ್ರಾಮಸ್ಥರಿಗಿಂತ ಹೆಚ್ಚು ಮತಾಚಾರಿಗಳಾಗುತ್ತಿದ್ದಾರೆ. ಇಂದು ಭಾರತದಲ್ಲಿ ಕೇವಲ 15 ಲಕ್ಷ ಶಾಲೆಗಳು ಮತ್ತು 75000 ಆಸ್ಪತ್ರೆಗಳು ಮಾತ್ರ ಇದ್ದರೂ 25 ಲಕ್ಷ ಪ್ರಾರ್ಥನಾ ಮಂದಿರಗಳಿವೆ. ಪ್ರತಿ ವರ್ಷ ಭಾರತದಲ್ಲಿ 23 ಕೋಟಿ ಜನ ಪ್ರವಾಸ ಕೈಗೊಳ್ಳುತ್ತಿದ್ದರೆ ಅದರಲ್ಲಿ ಅರ್ಧಕ್ಕಿಂತಲೂ ಹೆಚ್ಚು ತೀರ್ಥಯಾತ್ರೆಗಳೇ!"

-ಮೀರಾ ನಂದಾ, ಸಮಾಜ ವಿಜ್ಞಾನಿ

ಪಕ್ಷ ಹಾಗೂ ಸರ್ಕಾರ ಎರಡು ಒಂದೇ ಆಗಿಬಿಟ್ಟರೆ?

"ಅಧಿಕಾರಕ್ಕೆ ಬಂದಾಗ ಪಕ್ಷವನ್ನು ಮರೆಯಬೇಡಿ. ಅಧಿಕಾರದಲ್ಲಿದ್ದಾಗ ಸರ್ಕಾರ ಎಷ್ಟು ಮುಖ್ಯವೋ ಪಕ್ಷವೂ ಅಷ್ಟೇ ಮುಖ್ಯ ಎಂಬ ಪ್ರಜ್ಞೆ ಸಚಿವರಲ್ಲಿದ್ದಾಗ ಅಧಿಕಾರ ಎಲ್ಲಿಗೂ ಹೋಗದು. ಇದೇ ಗುಜರಾತಿನ ನಮ್ಮ ಯಶಸ್ಸಿನ ಗುಟ್ಟು."



- ನರೇಂದ್ರ ಮೋದಿ

ಸ್ವಾಮೀಜಿಗಳ ಆತ್ಮವಿಮರ್ಶೆ

"ಈಗ ಎಲ್ಲವೂ ಬದಲಾಗಿ ಹೋಗಿದೆ. ಜನ ಸ್ವಾರ್ಥಕ್ಕಾಗಿ ಭಕ್ತಿ ಮತ್ತು ಧರ್ಮದ ಮೊರೆಹೋಗುತ್ತಾರೆ. ಭಕ್ತಿ ರಾಜಕಾರಣದ ಮೆಟ್ಟಿಲಾಗಿದೆ, ಬಿಸಿನೆಸ್ಸೂ ಆಗಿದೆ."

- ಕಂಚಿ ಶಂಕರಾಚಾರ್ಯ ಜಯೇಂದ್ರ ಸರಸ್ವತಿ

ಮಾಹಿತಿಯಿಂದ ಸಿಗುವುದು ಮಾಹಿತಿ ಮಾತ್ರ, ಅಧಿಕಾರವಲ್ಲ

"ಮೂರನೆ ಜನರೇಷನ್ ಮೊಬೈಲ್‌ನಿಂದ ದೇಶದಲ್ಲಿ ಕ್ರಾಂತಿಯೇ ಆಗಲಿದೆ. ಇದರಿಂದ ಗ್ರಾಮೀಣ ಜನತೆಗೆ ಅಧಿಕಾರಿಗಳನ್ನು ವಿಚಾರಿಸಿಕೊಳ್ಳಲು ಇನ್ನಷ್ಟು ಅಧಿಕಾರ ಸಿಗುತ್ತದೆ. ಅದರಿಂದಾಗಿ ಪ್ರಜಾತಂತ್ರವೂ ಮತ್ತಷ್ಟು ಸುಧಾರಿಸುತ್ತದೆ. ಒಟ್ಟಿನಲ್ಲಿ ದೇಶದಲ್ಲಿ ಬದಲಾವಣೆಯ ಬಿರುಗಾಳಿಯೇ ಬೀಸಲಿದೆ."

ಶಾಲಿನಿ ಸಿಂಗ್, ಟೈಮ್ಸ್ ಆಫ್ ಇಂಡಿಯಾದಲ್ಲಿ

...ಾಂಧಿವಾದಿಯ ಆಶ್ರಮವೂ ...ರ್ಕಾರದ ಸಮರವೂ...



ಕಂಡಹಾಗೆ

■ ಗೌರಿ ಲಂಕೇಶ್

...ನ್ನು ಕೆಲವೇ ದಿನಗಳಲ್ಲಿ ರಾಷ್ಟ್ರಪಿತ ಮಹಾತ್ಮಾ ...ಯವರ 140 ನೇ ಜನ್ಮದಿನವನ್ನು ಆಚರಿಸಲಿರುವ ...ಲ್ಲಿ ಬರುವ ವಾರ ಭಾರತೀಯರ ವಿರುದ್ಧವೇ ... ಬಾರಿಗೆ ಯುದ್ಧವನ್ನು ಸರ್ಕಾರ ಸಾರಲಿರುವ ...ಯಲ್ಲಿ ಹಿಮಾಂಶು ಕುಮಾರ್ ಎಂಬುವವರಿಗೆ ...ಂಗಳ ಹಿಂದೆ ಆದದ್ದನ್ನು ನೆನಪು ಮಾಡಿಕೊಳ್ಳು ... ಅತ್ಯಗತ್ಯ.


...ಮಾಂಶು ಕುಮಾರ್ ಅಪ್ಪಟ ಗಾಂಧಿವಾದಿ. ...ಯವರು ಯುವಜನತೆ ಈ ದೇಶದ ಬಡವ ...ಗೆ ವಾಸಿಸಬೇಕೆಂದೂ, ಅವರ ಏಳಿಗೆಗಾಗಿ ...ಬೇಕೆಂದೂ ಹೇಳಿದ್ದನ್ನೇ ತನ್ನ ಜೀವನದ ಆದರ್ಶ ...ಭಾವಿಸಿದ ಹಿಮಾಂಶು ಅವರು 17 ವರ್ಷಗಳ ... ಛತ್ತೀಸಗಡದ ದಾಂತೆವಾಡಕ್ಕೆ ಹೋದರು. ...ಕಾರಣ ದೇಶದ ಅತಿ ಹಿಂದುಳಿದ ಪ್ರದೇಶ ...ವಾಡವಾಗಿದ್ದು, ಅಲ್ಲಿಯ ಆದಿವಾಸಿಗಳಿಗೆ ...ವು ಮೂಲಭೂತ ಸೌಲಭ್ಯಗಳನ್ನೂ ನೀಡದಿ ...ಗಾಂಧಿಯಂತೆಯೇ ಸರಳ ಜೀವನ ಅನುಸರಿ ...ಮಾಂಶು ದಾಂತೆವಾಡದಲ್ಲಿ ಆದಿವಾಸಿಗಳ ...ಳ್ಗೆಂದು 'ವನವಾಸಿ ಚೇತನ ಆಶ್ರಮ' ಎಂಬ ...ತರ ಸಂಸ್ಥೆಯನ್ನು ಪ್ರಾರಂಭಿಸಿದರು.

...ಕ್ರಮೇಣ ಆ ಆಶ್ರಮವು ಸ್ಥಳೀಯ ...ಸಿಗಳಿಗೆ ಆಶಾಕಿರಣವಾಯಿತು. ಕಾಲರಾ, ...ಯಾದಂತಹ ಕಾಯಿಲೆಗಳಿಂದಾಗಿ ಸಾವನ್ನಪ್ಪು ...ದಿವಾಸಿಗಳಿಗೆ ಆಶ್ರಮದಲ್ಲಿ ಚಿಕಿತ್ಸೆ ನೀಡಲಾಗು ...ಜೊತೆಗೆ ಪ್ರಾಥಮಿಕ ಶಿಕ್ಷಣ ನೀಡುವುದು, ...ಯಗಳನ್ನು ಸ್ಥಾಪಿಸುವುದು, ಕುಡಿಯುವ ... ಸಂಗ್ರಹಿಸುವುದು, ತಮ್ಮ ಹಕ್ಕುಗಳ ಬಗ್ಗೆ ...ನ್ನು ಹೆಚ್ಚಿಸುವುದು, ಇಂತಹ ಸಮಾಜೋದ್ಧಾರ ...ಗಳಲ್ಲಿ ಹಿಮಾಂಶು ಮತ್ತವರ ಆಶ್ರಮ ...ವಾಗಿತ್ತು. ಸಾವಿರಾರು ಆದಿವಾಸಿಗಳ ನೆರವಿಗೆ ... ಈ ಆಶ್ರಮ ನಿರ್ಮಲಾ ದೇಶಪಾಂಡೆ ... ಹಿರಿಯ ಗಾಂಧಿವಾದಿಗಳ ಮೆಚ್ಚುಗೆಯನ್ನು ...ಖ್ಯಾತ ಲೇಖಕಿ ಮತ್ತು ಜನಪರ ಚಿಂತಕಿ ...ತಿ ರಾಯ್ ತರಹದ ಜನರಿಂದ ಪ್ರೋತ್ಸಾಹದ ...ಗಳನ್ನು ಗಳಿಸಿತ್ತು.

...ರ್ಕಾರ ಮಾಡಬೇಕಿದ್ದ ಕೆಲಸಗಳನ್ನು ನಿಸ್ವಾರ್ಥ ...ಮಾಡುತ್ತಿದ್ದ ಹಿಮಾಂಶು ಅವರ ಆಶ್ರಮವನ್ನು ...ಗಡದ ಸರ್ಕಾರವೂ ಬೆಂಬಲಿಸಬೇಕಿತ್ತು. ಆದರೆ ...ೇ ತಿಂಗಳು ಅಲ್ಲಿನ ರಾಜ್ಯ ಸರ್ಕಾರ ಮಾಡಿದ್ದೇನು ... ಸುಮಾರು ಒಂದು ಸಾವಿರ ಪೊಲೀಸರನ್ನು ...ಸಿಬಿ ಯಂತ್ರಗಳನ್ನು ಕಳುಹಿಸಿದ ರಾಜ್ಯ ಸರ್ಕಾರ ...ಆಶ್ರಮವನ್ನೇ ಧ್ವಂಸಗೊಳಿಸಿತು! ಈ ಧ್ವಂಸ ...ಎಷ್ಟು ವ್ಯವಸ್ಥಿತವಾಗಿ ನಡೆಯಿತೆಂದರೆ ಆಶ್ರಮದ ...ಮನೆ, ಔಷಧಾಲಯ, ಕಚೇರಿ, ಆದಿವಾಸಿಗಳು ...ದ್ದ ಮನೆ, ಶೌಚಾಲಯ, ಟೆಲಿಫೋನ್ ಟವರ್ ...ನ್ನು ನುಚ್ಚುನೂರು ಮಾಡಿತು. ಅಷ್ಟೇ ಅಲ್ಲ, ...ೇ ಕಾರಣಕ್ಕೂ ಯಾರೂ ಆಶ್ರಮದ ...ಪಗಳ ನಡುವೆಯೂ ವಾಸಿಸಬಾರದೆಂದು ...ಂದೇ ಒಂದು ಬೋರ್‌ವೆಲ್ ಅನ್ನೂ ಕಿತ್ತು

ಗಾಂಧಿವಾದಿ ಹಿಮಾಂಶು ಅವರಿಗೆ ಗಾಂಧಿ ನಾಡಾದ ಭಾರತದಲ್ಲಿ ನೀಡಲಾದ ಕೊಡುಗೆ ಇದು!

ಹಿಮಾಂಶು ಅವರ ವಿರುದ್ಧ ಛತ್ತೀಸಗಡದ ಸರ್ಕಾರ ಕೆಂಡಾಮಂಡಲವಾಗುವುದಕ್ಕೆ ಕಾರಣವಿದೆ. ಅದು ಛತ್ತೀಸಗಡದ ಆದಿವಾಸಿಗಳ ಬೆಂಬಲವನ್ನು ಪಡೆದಿರುವ ಮಾವೊವಾದಿಗಳನ್ನು ನಿಗ್ರಹಿಸುವ ನೆಪದಲ್ಲಿ ರಾಜ್ಯ ಪೊಲೀಸರು ಮತ್ತು ಅವರು ಸ್ಥಾಪಿಸಿರುವ ಸಂವಿಧಾನ ಬಾಹಿರ ಸಲ್ವಾಜುಡುಂ ಎಂಬ ಪಡೆಯ ಹಿಂಸಾಕೃತ್ಯಗಳನ್ನು ಹಿಮಾಂಶು ವಿರೋಧಿಸಿದ್ದು.





ಆ ರಾಜ್ಯದಲ್ಲಿ ಪೊಲೀಸರು ಮತ್ತು ಸಲ್ವಾಜುಡುಂನವರು ಎಂತೆಂತಹ ಕೃತ್ಯಗಳನ್ನು ಎಸಗುತ್ತಿದ್ದಾರೆ ಎಂಬುದಕ್ಕೆ ಈ ವರ್ಷ ವೈಚ್ಛಾಪಾಲ್ ಎಂಬ ಗ್ರಾಮದಲ್ಲಾದ್ದದ್ದನ್ನೇ ಒಂದು ಉದಾಹರಣೆಯಾಗಿ ತೆಗೆದುಕೊಳ್ಳಬಹುದು.


ಕಾಡಿನ ಮಧ್ಯದಲ್ಲಿರುವ ವೈಚ್ಛಾಪಾಲ್ ಗ್ರಾಮದಲ್ಲಿ ಸುಮಾರು 140 ಆದಿವಾಸಿ ಕುಟುಂಬಗಳು ವಾಸಿಸುತ್ತಿವೆ. ಈ ಗ್ರಾಮದ ಹತ್ತಿರವೇ ಕಬ್ಬಿನ ಅದಿರಿಗೆ ಅನ್ವೇಷಣೆ ನಡೆಸಲು ಟಾಟಾ ಮತ್ತು ಎಸ್ಸಾರ್ ಕಂಪನಿಗಳಿಗೆ ಸರ್ಕಾರ ಅನುಮತಿ ನೀಡಿದೆ. ಸಹಜವಾಗಿಯೇ ಗ್ರಾಮದ ಜನ ಅದನ್ನು ವಿರೋಧಿಸಿದರು. ಆಗ ಈ ಗ್ರಾಮದ ಮೇಲೆ ಪೊಲೀಸರು ಮತ್ತು ಸಲ್ವಾಜುಡುಂ ಪಡೆಗಳು ಮುಗಿಬಿದ್ದವು. ಕಳೆದ ನಾಲ್ಕು ವರ್ಷಗಳಲ್ಲಿ ಈ ಗ್ರಾಮವನ್ನು ಹಲವಾರು ಬಾರಿ ನೆಲಸಮ ಮಾಡಲಾಗಿದೆ.

ಆದರೂ ಧೃತಿಗೆಡದ ಆದಿವಾಸಿಗಳು ಮತ್ತೆಮತ್ತೆ ತಮ್ಮ ಹಳ್ಳಿಗೆ ವಾಪಸ್ ಬಂದು ತಮ್ಮ ಬದುಕನ್ನು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದಾರೆ.

ಟಾಟಾ ಮತ್ತು ಎಸ್ಸಾರ್ ಕಂಪನಿಗಳ ಕೈಗಳಿಗೆ ಈ ಭೂಮಿ ಸಿಗಬೇಕೆಂದರೆ ಆದಿವಾಸಿಗಳು ಆ ಜಾಗವನ್ನು ಬಿಟ್ಟು ತೊಲಗಬೇಕು. ಆದರೆ ಹಠ ಬಿಡದ ಆದಿವಾಸಿಗಳೋ ಕದಲುತ್ತಿಲ್ಲ, ಪೊಲೀಸರು ಮತ್ತಷ್ಟು ಕ್ರೂರಿಗಳಾದರು. ಕಳೆದ ಜೂನ್ ತಿಂಗಳಲ್ಲಿ ಆ ಗ್ರಾಮದ ಮೇಲೆ ಪೊಲೀಸರು ಮತ್ತು ಸಲ್ವಾಜುಡುಂ ಗೂಂಡಾಗಳು ಮತ್ತೆ ದಾಳಿ ಮಾಡಿ ಒಬ್ಬನನ್ನು ಕೊಂದು, ಓರ್ವ ಮಹಿಳೆಯ ಮೇಲೆ ಅತ್ಯಾಚಾರವೆಸಗಿ, ಸುಮಾರು ನಲವತ್ತು ಮನೆಗಳಿಗೆ ಬೆಂಕಿ ಇಟ್ಟು, ಹೊಲಗಳಲ್ಲಿ ಬೆಳೆದು ನಿಂತಿದ್ದ ಭತ್ತದ ಬೆಳೆಯನ್ನು ನಾಶ ಮಾಡಿದರು.

ಆಗ ಆ ಗ್ರಾಮದ ಜನರ ನೆರವಿಗೆ ಧಾವಿಸಿದ್ದು ಹಿಮಾಂಶು ಮತ್ತು ಅವರ ತಂಡ. ಗ್ರಾಮದ ಮೇಲಿನ ದಾಳಿ ಮತ್ತು ಅಮಾಯಕನ ಕೊಲೆಯನ್ನು ಖಂಡಿಸಿದ ಹಿಮಾಂಶು ಅಲ್ಲಿನ ಜನರಿಗೆ ಅಕ್ಕಿ ಬೇಳೆ ಕೊಟ್ಟರು. ಇದು ಸರ್ಕಾರವನ್ನು ಮತ್ತಷ್ಟು ಉಗ್ರವಾಗಿಸಿತು. ಆಗಸ್ಟ್ 9 ರಂದು ವೈಚ್ಛಾಪಾಲ್ ಮತ್ತು ಸುತ್ತಮುತ್ತಲಿನ ಗ್ರಾಮಗಳ ಮೇಲೆ ಮತ್ತೊಂದು ದಾಳಿ ನಡೆಯಿತು. ಆ ದಾಳಿ ಎರಡು ದಿನಗಳ ಕಾಲ ನಡೆದು, ಆರು ಆದಿವಾಸಿಗಳು ಕೊಲ್ಲಲ್ಪಟ್ಟಿದ್ದರು. ದಾಂತೆವಾಡದ ಎಸ್‌ಪಿ ಪ್ರಕಾರ ಆ ಆರು ಜನರೂ ನಕ್ಸಲರಾಗಿದ್ದು ಅವರೆಲ್ಲರನ್ನು 'ಎನ್‌ಕೌಂಟರ್'ನಲ್ಲಿ ಪೊಲೀಸರು ಕೊಂದಿದ್ದರು. ಆದರೆ ಪತ್ರಿಕೆಗಳಲ್ಲಿ ಪ್ರಕಟವಾದ ಫೋಟೋಗಳಲ್ಲಿ ಸತ್ತ ಐವರ ಕೈಕಾಲುಗಳನ್ನು ಹಗ್ಗದಲ್ಲಿ ಕಟ್ಟಿ ಹಾಕಿದ್ದು ಸ್ಪಷ್ಟವಾಗಿ ಕಾಣಿಸುತ್ತಿತ್ತು. ಅಂದು ಮಡಿದವರಲ್ಲಿ ಓರ್ವ ಮಹಿಳೆಯೂ ಇದ್ದು ಆಕೆಯ ಕೊರಳಿಗೆ ದೊಡ್ಡ ಕಲ್ಲನ್ನು ಕಟ್ಟಿಹಾಕಿದ್ದೂ ಆನಂತರದ ದಿನಗಳಲ್ಲಿ ಗೊತ್ತಾಯಿತು. "ಸರ್ಕಾರ ಯಾಕೆ ಹೀಗೆ ಅಮಾಯಕರನ್ನು ಕೊಲ್ಲುತ್ತಿದೆ?" ಎಂದು ಹಿಮಾಂಶು ಅವರು ಪ್ರಶ್ನಿಸಿದ್ದು ಸರ್ಕಾರಕ್ಕೆ ಮುಜುಗರದ ವಿಷಯವಾಗಿ ಪರಿಣಮಿಸಿತು.

ಇದು ಛತ್ತೀಸಗಡದ ಒಂದು ಗ್ರಾಮದ ಕತೆಯಷ್ಟೇ. ಇಂತಹದ್ದೇ ದೌರ್ಜನ್ಯ ಇತರೆ ಗ್ರಾಮಗಳಲ್ಲೂ ಪುನರಾವರ್ತನೆಯಾಗುತ್ತಿದೆ.



ಇನ್ನು ಅತ್ಯಾಚಾರಕ್ಕೊಳಗಾಗಿರುವ ಅಲ್ಲಿನ ಮಹಿಳೆಯರ ಪರಿಸ್ಥಿತಿಯಂತೂ ಕೇಳಲಸಾಧ್ಯ. ಪೊಲೀಸ್ ಮತ್ತು ಸಲ್ವಾಜುಡುಂನ ಗೂಂಡಾಗಳಿಂದ ಅತ್ಯಾಚಾರಕ್ಕೊಳಗಾಗಿದ್ದ ಆರು ಮಹಿಳೆಯರು ಹಿಮಾಂಶು ಅವರ ಆಶ್ರಮದಲ್ಲಿ ಆಶ್ರಯ ಪಡೆದಿದ್ದರು. ಹಿಮಾಂಶು ಅವರ ನೆರವಿನಿಂದ ಆ ಮಹಿಳೆಯರು ತಮ್ಮ ಮೇಲೆ ಅತ್ಯಾಚಾರವೆಸಗಿದ್ದವರ ವಿರುದ್ಧ ದೂರು ಕೊಡಲು ಯತ್ನಿಸಿದರು. ಕಾನೂನಿನ ಪ್ರಕಾರ ಮಹಿಳೆಯೊಬ್ಬಳು ತಮ್ಮ ಮೇಲೆ ಅತ್ಯಾಚಾರ ನಡೆದಿದೆ ಎಂದು ಹೇಳಿದರೂ ಸಾಕು ಕೇಸನ್ನು ದಾಖಲಿಸಿಕೊಳ್ಳಲು. ಆದರೆ ದಾಂತೆವಾಡದ ಎಸ್‌ಪಿ ಅವರ ದೂರನ್ನು ದಾಖಲಿಸಿಕೊಳ್ಳಲಿಲ್ಲ, ಅಷ್ಟೇ ಅಲ್ಲ, ಅಲ್ಲಿನ ಮ್ಯಾಜಿಸ್ಟ್ರೇಟ್, ಜಿಲ್ಲಾ ಜಡ್ಜ್ ಮತ್ತು ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟ್‌ಗಳು ಕೂಡ ಅವರ ದೂರನ್ನು ದಾಖಲಿಸಿಕೊಳ್ಳಲು ನಿರಾಕರಿಸಿದರು. ಹಿಮಾಂಶು ಇದನ್ನು ಪ್ರಶ್ನಿಸಿ ಸರ್ಕಾರಕ್ಕೆ ಇನ್ನಷ್ಟು ಮುಜುಗರ ಆಗುವಂತೆ ಮಾಡಿದರು.

ಹಿಮಾಂಶು ಗಾಂಧಿವಾದಿ. ಬಡವರ ಸೇವೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟಿರುವವರು. ಅಮಾಯಕರ ಮೇಲಾಗುತ್ತಿರುವ ದೌರ್ಜನ್ಯವನ್ನು ಯಾವ ಮುಲಾಜು ಇಲ್ಲದೆ ಪ್ರಶ್ನಿಸುವವರು. ಇಂತಹ ಮನುಷ್ಯನನ್ನು ಅದು ಹೇಗೆ ಸರ್ಕಾರವೊಂದು ಸಹಿಸುತ್ತದೆ? ಅದಕ್ಕೆ ಅವರ ಬಾಯನ್ನು ಮುಚ್ಚಿಸಲು, ಅಲ್ಲಿಂದ ಅವರನ್ನು ಒದ್ದೋಡಿಸಲು ಅವರ ಆಶ್ರಮವನ್ನೇ ನಾಶಗೊಳಿಸಿತು. ಅಷ್ಟೇ ಅಲ್ಲ, ಹಿರಿಯ ಪೊಲೀಸ್ ಅಧಿಕಾರಿಯೊಬ್ಬ ಅವರಿಗೆ ಉಚಿತ ಸಲಹೆಯನ್ನು ನೀಡಿದ. "ನೀನು ಈ ಆಶ್ರಮವನ್ನು ಮಾತ್ರವಲ್ಲ, ಈ ಜಿಲ್ಲೆಯನ್ನೇ ತೊರೆದರೇ ನಿನಗೆ ಕ್ಷೇಮ" ಎಂದ ಆ ಪೊಲೀಸ್.

ಆದರೆ ಹಿಮಾಂಶು ಅಲ್ಲಿಂದ ಹೊರಡಲಿಲ್ಲ, ಬದಲಾಗಿ "ನಾನು ಆದಿವಾಸಿ ಅಲ್ಲ, ಆದರೆ ಮಹಾತ್ಮಾ ಗಾಂಧಿ ಹೇಳಿದ್ದಂತೆ ಆದಿವಾಸಿಗಳೊಂದಿಗೆ ಬದುಕಲು ಇಲ್ಲಿಗೆ ಬಂದಿದ್ದೇನೆ. ಇಲ್ಲಿನ ಜನ ಹೇಗೆ ಇಲ್ಲೇ ಮಣ್ಣಾಗುತ್ತಾರೋ, ನಾನೂ ಅವರಂತೆಯೇ ಇಲ್ಲೇ ಸಾಯುತ್ತೇನೆ. ಅಷ್ಟೇ ಅಲ್ಲ, ನಾನು ಬದುಕಿರುವವರೆಗೂ ನಿರಾಯುಧ ಆದಿವಾಸಿಗಳ ಮೇಲೆ ಸರ್ಕಾರ ನಡೆಸುತ್ತಿರುವ ಈ ಅಮಾನುಷ ಯುದ್ಧವನ್ನು ವಿರೋಧಿಸುತ್ತಲೇ ಇರುತ್ತೇನೆ" ಎಂದು ಅವರು ಹೇಳುತ್ತಾರೆ.

ಸದ್ಯದಲ್ಲೇ ಪ್ರಾರಂಭವಾಗಲಿರುವ 'ಆಪರೇಷನ್ ಗ್ರೀನ್ ಹಂಟ್' ಬಗ್ಗೆ ಹಿಮಾಂಶು ಹೀಗೆ ಹೇಳುತ್ತಾರೆ: "ನಕ್ಸಲಿಸಂ ಒಂದು ಸಮಸ್ಯೆ ಎಂಬುದರ ಬಗ್ಗೆ ಯಾರಲ್ಲೂ ಭಿನ್ನಾಭಿಪ್ರಾಯವಿಲ್ಲ. ಆದರೆ ಸಾವಿನಲ್ಲಿ ಅಂತ್ಯಗೊಳ್ಳುವ ಅವರ ರಾಜಕೀಯದತ್ತ ಈ ಬಡಜನತೆ ಯಾಕೆ ಆಕರ್ಷಿತರಾಗುತ್ತಿದ್ದಾರೆ? ನಮ್ಮ ವ್ಯವಸ್ಥೆಯಿಂದಾಗುವ ಅವಮಾನ ಮತ್ತು ಅನ್ಯಾಯಗಳನ್ನು ಸಹಿಸುವುದಕ್ಕಿಂತ ಮರಣವೇ ಆಕರ್ಷಿಕವಾಗಿ ಕಾಣಿಸುವಂತಹ ಘೋರ ವ್ಯವಸ್ಥೆಯನ್ನು ಸೃಷ್ಟಿಸಿದ್ದೇವೆಯೇ? ಹಾಗಿದ್ದರೆ ಅಂತಹ ವ್ಯವಸ್ಥೆಯನ್ನು ಹೇಗೆ ಸಮರ್ಥಿಸಿಕೊಳ್ಳುವುದು? ಇಲ್ಲಿನ ಜನರಿಗೆ ಬೇಕಿರುವುದು ಆಹಾರ, ಆರೋಗ್ಯ ವ್ಯವಸ್ಥೆ ಶಾಲೆ, ಬಟ್ಟೆ ಮತ್ತು ತಮ್ಮ ಭೂಮಿಯ ಮೇಲಿನ ನ್ಯಾಯಬದ್ಧವಾದ ಹಕ್ಕು ಮಾತ್ರ. ಅದನ್ನು ನೀಡಿ ಅವರನ್ನೆಲ್ಲ ಮುಖ್ಯವಾಹಿನಿಗೆ ತರುವ ಬದಲು, ಬಂದೂಕುಗಳ ಮೂಲಕವೇ ಪ್ರಜಾಪ್ರಭುತ್ವವನ್ನು ನಡೆಸುತ್ತೇವೆ ಎಂದು ಭಾವಿಸಿದರೆ, ನಾವು ಭಯಾನಕ ಮತ್ತು ರಿಪೇರಿ ಮಾಡಲಾಗದಂತಹ ಸ್ಥಿತಿಯನ್ನು ಪ್ರವೇಶಿಸುತ್ತೇವೆ."

ಅವರ ಈ ಮಾತುಗಳು ಯಾರ ಕಿವಿಗೂ ಬೀಳುತ್ತಿಲ್ಲ.

ಗಾಂಧಿವಾದಿ ಹಿಮಾಂಶು ಅವರ ಆಶ್ರಮವನ್ನು ಕೆಡವಿದ ನಂತರದ ಒಂದು ವಿಡಿಯೋ ಅನ್ನು ಇಂಟರ್‌ನೆಟ್‌ನಲ್ಲಿ ನೋಡಿದೆ. ಅದರಲ್ಲಿನ ಒಂದು ದೃಶ್ಯ ನನ್ನ ಕಣ್ಣಿಗೆ ಈಗಲೂ ಕಟ್ಟಿದಂತಿದೆ. ಅದು ಹಾಳುಬಿದ್ದಿರುವ ಔಷಧಾಲಯ. ಔಷಧಿಗಳು, ಕಾಗದಪತ್ರಗಳು ನೆಲದ ಮೇಲೆ ಹರಡಿ ಬಿದ್ದಿವೆ. ಮಳೆ ಬಿದ್ದಿದ್ದರಿಂದ ಆ ಹಾಳೆಗಳಿಗೆ ಕೆಸರು ಅಂಟಿದೆ.

ಆ ಹಾಳೆಗಳ ನಡುವೆ ಕೆಸರು ಮೆತ್ತಿಕೊಂಡು ಬಿದ್ದಿತ್ತು ನಗುಮುಖದ ಬಾಪುವಿನ ಚಿತ್ರ.....

...ಸಿವು ಮತ್ತು ಬಂದೂಕು

...ಕೈಯಲ್ಲಿ ಬಂದೂಕು
...ಹೊಟ್ಟೆಯಲ್ಲಿ ಹಸಿವು

... ಹಸಿವಾಗುತ್ತಿದೆಯೆಂದೇ
...ಕೈಯಲ್ಲಿ ಬಂದೂಕು

...ಕೈಯಲ್ಲಿ ಬಂದೂಕಿರುವುದರಿಂದಲೇ
...ಹೊಟ್ಟೆಯಲ್ಲಿ ಹಸಿವು

...ಕೈಯಲ್ಲಿ ಬಂದೂಕಿರಬಹುದು
...ರಾದು ಕೋಟಾಗಳೂ ಇರಬಹುದು
...ನ್ನನ್ನೂ ಈ ಬಡಕಲು ದೇಹದೊಳಗೆ



ತೂರಿಬಿಡಲೂಬಹುದು
ನನ್ನನ್ನು ಒಂದಲ್ಲ,ಹತ್ತಲ್ಲ ಸಾವಿರ ಸಾರಿ
ಕೊಂದುಹಾಕಲೂ ಬಹುದು


ಆದರೆ ನಿನಗಿಂತ ನಾನೇ ಬಲಶಾಲಿ,
ಪ್ರಬಲ ಶಸ್ತ್ರಧಾರಿ
ಏಕೆಂದರೆ ನಿನ್ನ ಬಳಿ ಬಂದೂಕಿದ್ದರೆ
ನನ್ನ ಬಳಿ ಹಸಿವಿದೆ
ಕೇವಲ ಹಸಿವಿದೆ.


ಮೂಲ:ಒಟ್ಟೆ ರೀನೊ ಕ್ಯಾಸ್ಟಿಲ್ಲೋ
ಅನು: ಶಿವಸುಂದರ್





ಪೋಖ್ರಾನ್ ಎಂಬ ಠುಸ್ ಪಟಾಕಿ!





ಸಂತಾನಂ

ನಿಮಗೆ ನೆನಪಿರಬಹುದು. 1998ರ ಮೇ ತಿಂಗಳಿನಲ್ಲಿ ರಾಜಸ್ತಾನದ ಥಾರ್ ಮರುಭೂಮಿಯಲ್ಲಿರುವ ಪೋಖ್ರಾನ್ ಎಂಬಲ್ಲಿ ಎರಡನೇ ಬಾರಿಗೆ ಅಣ್ವಸ್ತ್ರ ಪರೀಕ್ಷೆ ಮಾಡಲಾಯಿತು. ಈ ಪರೀಕ್ಷೆ ನಡೆದ ಮರುಕ್ಷಣದಿಂದಲೇ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯಾದಿಯಾಗಿ ಬಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಮಂತ್ರಿ ಮಹೋದಯರು 'ಭಾರತವೀಗ ಅಣ್ವಸ್ತ್ರಗಳನ್ನು ಹೊಂದಿರುವ ಬಲಿಷ್ಠ ದೇಶವಾಗಿದೆ' ಎಂದು ಎದೆಯುಬ್ಬಿಸಿಕೊಂಡು ಮಾಧ್ಯಮಗಳಿಗೆ ಪೋಜು ನೀಡಿದರು. ತಮ್ಮ ಸರ್ಕಾರದ ಆಡಳಿತಾವಧಿಯಲ್ಲಿ ದೇಶದ ಭದ್ರತೆಯ ದೃಷ್ಟಿಯಿಂದ ಇಂಥ ಮಹತ್ವಪೂರ್ಣ ಸಾಧನೆಯನ್ನು ಮಾಡಿದ್ದಕ್ಕಾಗಿ ತಮ್ಮ ಬೆನ್ನುಗಳನ್ನು ತಾವೇ ತಟ್ಟಿಕೊಂಡರು. ಈಗ ಅದಾದ ಹನ್ನೊಂದು ವರ್ಷಗಳ ನಂತರ ಅಸಲೀಯತ್ತು ಹೊರಬಿದ್ದಿದೆ. ಪೋಖ್ರಾನ್ ಅಣ್ವಸ್ತ್ರ ಪರೀಕ್ಷೆ ನಿರೀಕ್ಷಿಸಿದಷ್ಟು ಫಲಿತಾಂಶಗಳನ್ನು ನೀಡಲಿಲ್ಲ ಎಂಬುದನ್ನು ಪರೀಕ್ಷೆಯ ಜವಾಬ್ದಾರಿ ಹೊತ್ತಿದ್ದ ದೇಶದ ಪ್ರಮುಖ ವಿಜ್ಞಾನಿಯೊಬ್ಬರು ಬಹಿರಂಗಪಡಿಸಿದ್ದಾರೆ.

ಸುಮಾರು 45 ಕಿಲೋಟನ್ ಫಲಿತಾಂಶವನ್ನು ನಿರೀಕ್ಷಿಸಿದ್ದರೆ, ಬಂದಿದ್ದು ಕೇವಲ 20 ರಿಂದ 25 ಕಿಲೋಟನ್‌ಗಳು ಮಾತ್ರ ಎಂದು ಕೆ.ಸಂತಾನಮ್ ಎಂಬ ಅಣುವಿಜ್ಞಾನಿ ದಾಖಲೆ ಸಮೇತವಾಗಿ ಬಿಚ್ಚಿಟ್ಟಿದ್ದಾರೆ. ತಕ್ಷಣವೇ, ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬಂತೆ ಆ ಹೊತ್ತು ಅಣ್ವಸ್ತ್ರ ಪರೀಕ್ಷೆಯ ವಿಜ್ಞಾನಿಗಳ ತಂಡದಲ್ಲಿದ್ದ ಎಪಿಜೆ ಅಬ್ದುಲ್ ಕಲಾಮ್ ಅವರನ್ನು ಭೇಟಿ ಮಾಡಿ "ನೀವು ಭಾರತ ರತ್ನ ಪುರಸ್ಕಾರ ಪಡೆದ ಮಹನೀಯರು, ಕ್ಷಿಪಣಿಗಳ ಮನುಷ್ಯ ಎಂಬ ಖ್ಯಾತಿಯಿರುವ ವಿಜ್ಞಾನಿಗಳು, ನಿಮ್ಮ ಮಾತಿಗೆ ಭಾರತದಾದ್ಯಂತ ತುಂಬಾ ಬೆಲೆಯಿದೆ. ಹಾಗಾಗಿ, ಪೋಖ್ರಾನ್ ಅಣ್ವಸ್ತ್ರ ಪರೀಕ್ಷೆ ನಿರೀಕ್ಷಿಸಿದಷ್ಟು ಫಲಿತಾಂಶ ಕೊಟ್ಟಿದೆ ಎಂಬ ಹೇಳಿಕೆಯನ್ನು ಕೊಡಿ. ಇದರಿಂದ ನಮ್ಮ ಘನತೆಯೂ ಉಳಿದುಕೊಳ್ಳುತ್ತದೆ" ಎಂದು ಬಜೆಪಿಯ ಹಿರಿಯ ರಾಜಕಾರಣಿಗಳು ಅವರನ್ನು ಒತ್ತಾಯಿಸಿ ತಮ್ಮ ಪರವಾದ ಹೇಳಿಕೆಯನ್ನು ಕಲಾಂ ಅವರಿಂದ ಪಡೆದುಕೊಂಡಿದ್ದಾರೆ.


ವಾಸ್ತವದಲ್ಲಿ 1998ರಲ್ಲಿ ಅಣ್ವಸ್ತ್ರ ಪರೀಕ್ಷೆ ಮಾಡುವುದಕ್ಕೆ ಭಾರತಕ್ಕೆ ತನ್ನದೇ ಆದ ಕಾರಣಗಳಿದ್ದವು. ಈ ಹಿಂದೆಯೇ 1974ರಲ್ಲಿ ಇಂದಿರಾ ಗಾಂಧಿ ಪ್ರಧಾನಿಯಾಗಿದ್ದಾಗಲೇ ಇದೇ ಪೋಖ್ರಾನ್‌ನಲ್ಲಿ ಒಮ್ಮೆ ಅಣ್ವಸ್ತ್ರ ಪರೀಕ್ಷೆ ಮಾಡಲಾಗಿತ್ತಾದರೂ ಅದು ತೀರಾ ಪ್ರಾಥಮಿಕವಾದ 'ಅಣು ವಿಘಟನೆ'ಯ ಸಿದ್ಧಾಂತವನ್ನು ಪ್ರಾಯೋಗಿಕವಾಗಿ ಮಾಡಿ ನೋಡುವುದಕ್ಕಷ್ಟೇ ಸೀಮಿತವಾಗಿತ್ತೇ ಹೊರತು ನಿಜಾರ್ಥದಲ್ಲಿ ಅದೊಂದು ಅಣ್ವಸ್ತ್ರ ಪರೀಕ್ಷೆಯಾಗಿರಲಿಲ್ಲ. ತೊಂಭತ್ತರ ದಶಕದ ಮಧ್ಯ ಭಾಗದ ಹೊತ್ತಿಗೆ ನಮ್ಮ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ ಮತ್ತು ಚೀನಾಗಳು ಅಣ್ವಸ್ತ್ರ ಹೊಂದುವ ನಿಟ್ಟಿನಲ್ಲಿ ತೀವ್ರವಾದ ಸಂಶೋಧನೆಗಳಲ್ಲಿ ತೊಡಗಿದಾಗ ಈ ಸಾಂಪ್ರದಾಯಿಕ ಶತ್ರುಗಳಿಂದ ದೇಶವನ್ನು ರಕ್ಷಿಸಿಕೊಳ್ಳುವುದಕ್ಕೆ ಭಾರತವೂ ಅಣ್ವಸ್ತ್ರ ಹೊಂದುವ ಅವಶ್ಯಕತೆ ಬಿತ್ತು. ನಮ್ಮಲ್ಲಿ ಆಗಲೇ ವಿಜ್ಞಾನಿಗಳು ಆಟಂ ಬಾಂಬ್ ತಯಾರಿಸಿದ್ದರು. ಆದರೆ, ಅವುಗಳ ಸಾಮರ್ಥ್ಯ ಕೇವಲ 20 ರಿಂದ 30 ಕಿಲೋಟನ್‌ಗಳಷ್ಟು ಮಾತ್ರ. ಅದೇ ಹೈಡ್ರೋಜನ್ ಬಾಂಬ್‌ಗಳನ್ನು ತಯಾರಿಸಿದರೆ ಅಷ್ಟೇ ತೂಕದಲ್ಲಿ ಸುಮಾರು 45 ಕಿಲೋಟನ್‌ಗಳ ಸಾಮರ್ಥ್ಯವನ್ನು ಪಡೆಯಬಹುದು. ಅಷ್ಟು ಹೊತ್ತಿಗಾಗಲೇ ನೂರಾರು, ಸಾವಿರಾರು ಕಿ.ಮೀ. ದೂರದವರೆಗೆ ಹಾರಬಲ್ಲ ನೆಲದಿಂದ ನೆಲಕ್ಕೆ ಹಾರುವ ಕ್ಷಿಪಣಿಗಳನ್ನು ಭಾರತೀಯ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದರಿಂದ ಈ ಕ್ಷಿಪಣಿಗಳನ್ನೇ ಅಣ್ವಸ್ತ್ರ ಹೊತ್ತೊಯ್ಯುವ ವಾಹಕಗಳನ್ನಾಗಿ ಬಳಸುವ ಸಾಧ್ಯತೆಯೊಂದು ತೆರೆದುಕೊಂಡಿತ್ತು, ಹೀಗಾಗಿ, ಕಡಿಮೆ ತೂಕದಲ್ಲಿ ಹೆಚ್ಚು ಫಲಿತಾಂಶ ಕೊಡಬಲ್ಲ ಅಣ್ವಸ್ತ್ರಗಳನ್ನು ತಯಾರಿಸುವ ಕಡೆ ಹೆಚ್ಚಿನ ಗಮನ ಕೊಡಲಾಯಿತು.

1995ರಿಂದಲೇ ಈ ನಿಟ್ಟಿನಲ್ಲಿ ಭಾರತೀಯ ಅಣು ವಿಜ್ಞಾನಿಗಳು ಪ್ರಯೋಗ ಪ್ರಾರಂಭಿಸಿದರು. ಈ ಪ್ರಯತ್ನದ ಭಾಗವಾಗಿಯೇ ಮೊದಲ ಅಣ್ವಸ್ತ್ರ ಪರೀಕ್ಷೆ ನಡೆದ 24 ವರ್ಷಗಳ ನಂತರ 1998ರ ಮೇ ತಿಂಗಳಿನಲ್ಲಿ ಅದೇ ಪೋಖ್ರಾನ್‌ನಲ್ಲಿ ಅಣ್ವಸ್ತ್ರ ಪರೀಕ್ಷೆ ನಡೆಯಿತು. ಈ ಪರೀಕ್ಷೆಯ ಜವಾಬ್ದಾರಿಯನ್ನು ಎ.ಪಿ.ಜೆ. ಅಬ್ದುಲ್ ಕಲಾಂ, ಕೆ. ಸಂತನಮ್ ಹಾಗೂ ಆರ್.ಚಿದಂಬರಂ ಎಂಬ ವಿಜ್ಞಾನಿಗಳೇ ಹೊತ್ತುಕೊಂಡಿದ್ದರು. ಸ್ಫೋಟದ ತೀವ್ರತೆಯನ್ನು ಅಳೆಯುವುದಕ್ಕಾಗಿ ಜೋಡಿಸಲಾಗಿದ್ದ ಸಲಕರಣೆಗಳ ಮೂಲಕ ತಕ್ಷಣವೇ ಗೊತ್ತಾಗಿದ್ದೇನೆಂದರೆ ನಿರೀಕ್ಷಿತ 45 ಕಿಲೋಟನ್ ತೀವ್ರತೆಯನ್ನು ಸಾಧಿಸುವಲ್ಲಿ ವಿಫಲವಾಗಿದ್ದುದು. ಈ ವಿಚಾರವನ್ನು ಅಂದು ಕೇಂದ್ರದಲ್ಲಿದ್ದ ಬಜೆಪಿ ಸರ್ಕಾರದ ಉನ್ನತ ಅಧಿಕಾರಿಗಳಿಗೆ, ಪ್ರಧಾನಿ ವಾಜಪೇಯಿಯವರಿಗೆ ತಿಳಿಸಲಾಯಿತು. ಸ್ಫೋಟದ ತೀವ್ರತೆಯನ್ನು ದಾಖಲಿಸಿಕೊಳ್ಳುವುದಕ್ಕಾಗಿ ಅಳವಡಿಸಲಾಗಿದ್ದ ಸಾಧನಗಳು ಸಂಗ್ರಹಿಸಿದ ದತ್ತಾಂಶವನ್ನು ಕೂಲಂಕಶವಾಗಿ ಅಧ್ಯಯನ ನಡೆಸಿದ ಮೇಲೆ ಈ ಕುರಿತ ಸುದೀರ್ಘ ವರದಿಯನ್ನೂ ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಯಿತು. ಆದರೆ, ಇಂಥ ಒಂದು ಚಾರಿತ್ರಿಕ ಅಣ್ವಸ್ತ್ರ ಪರೀಕ್ಷೆಯನ್ನೇ ತಮ್ಮ ಅತಿದೊಡ್ಡ ಸಾಧನೆ ಎಂದು ಬಿಂಬಿಸಿಕೊಳ್ಳುವುದಕ್ಕೆ ತಯಾರಿ ನಡೆಸಿದ್ದ ವಾಜಪೇಯಿಯ ಚೆಡ್ಡಿ ಸರ್ಕಾರ ಪರೀಕ್ಷೆ ವಿಫಲವಾದ ಈ ವಾಸ್ತವಾಂಶವನ್ನು ಮುಚ್ಚಿಟ್ಟು 'ಅಣ್ವಸ್ತ್ರ ಪರೀಕ್ಷೆ ಸಂಪೂರ್ಣ ಯಶಸ್ವಿಯಾಗಿದೆ. ಅಣ್ವಸ್ತ್ರ ಹೊಂದಿದ ವಿಶ್ವದ ಕೆಲವೇ ರಾಷ್ಟ್ರಗಳ ಸಾಲಿಗೆ ಈಗ ನಾವೂ ಸೇರಿದ್ದೇವೆ' ಎಂದೆಲ್ಲಾ ಮಂತ್ರಿಮಹೋದಯರು, ಅಧಿಕಾರಿಗಳು ಬೆನ್ನು ತಟ್ಟಿಕೊಂಡರು.

ಇದಾದ ಹನ್ನೊಂದು ವರ್ಷಗಳ ನಂತರ ಈ ಅಣ್ವಸ್ತ್ರ ಪರೀಕ್ಷೆಯ ನೇತೃತ್ವ ವಹಿಸಿದ್ದ ಕೆ.ಸಂತಾನಮ್ ಎಂಬ ಅಣುವಿಜ್ಞಾನಿ ಈಗ ಸತ್ಯವನ್ನು ಹೊರಬಿಟ್ಟು ದೇಶದ ಭದ್ರತೆಯ ದೃಷ್ಟಿಯಿಂದ ಮತ್ತೊಮ್ಮೆ ಅಣ್ವಸ್ತ್ರ ಪರೀಕ್ಷೆ ಮಾಡಬೇಕಾದ ಅವಶ್ಯಕತೆಯಿದೆ ಎಂದು ಹೇಳುತ್ತಿದ್ದರೆ ಅವರ ಮೇಲೆಯೇ ಅಳಿಗೊಂದು ಕಲ್ಲೆಸೆಯಲಾಗುತ್ತಿದೆ. ಕ್ಷಿಪಣಿಗಳ ಮನುಷ್ಯ ಹಾಗೂ ಭಾರತದ ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ ಆದರೂ ಕೆ.ಸಂತಾನಮ್ ಅವರ ಬೆಂಬಲಕ್ಕೆ ನಿಲ್ಲಬಹುದಿತ್ತು, ಆದರೆ, ಅವರೂ ತಮ್ಮನ್ನು ರಾಷ್ಟ್ರಪತಿ ಮಾಡಿದವರ ಹಾಗೂ ತಮಗೆ ಭಾರತ ರತ್ನ ಪ್ರಶಸ್ತಿ ಕೊಟ್ಟವರ ಹಿತ ಕಾಯುವುದಕ್ಕಾಗಿ ಸತ್ಯವನ್ನು ಬಾಯಿಬಿಡುತ್ತಿಲ್ಲ.



ಪೋಖ್ರಾನ್‌ನಲ್ಲಿ ಅಬ್ದುಲ್ ಕಲಾಂ ... ಸಂತಾನಂ...



ಸುತ್ತ ಮುತ್ತ

▸▸ಕುಮಾರ್ ಬುರಡಿಕಟ್ಟಿ




... ಮಾಡುತ್ತಿರುವ ತುಷಾರ್ ಗಾಂಧಿ

ಗಾಂಧಿ ಹೆಸರಿನಲ್ಲಿ ಖಜಾನೆ ತುಂಬಿಸಿಕೊಳ್ಳುವವರು

ಮಹಾತ್ಮಾ ಗಾಂಧಿ ತಮ್ಮ ಜೀವನದುದ್ದಕ್ಕೂ ಬಹಳ ಸರಳಜೀವನ ನಡೆಸಿದವರು. ಎಂದೂ ಆಡಂಬರದ ಜೀವನಕ್ಕೆ ಮಾರುಹೋಗದೇ ಮಿತವ್ಯಯದಿಂದಲೇ ಬದುಕಿದವರು. ಈಗ ಅವರ ಹೆಸರಿನಲ್ಲೇ ಅವರ ಈ ತತ್ವಕ್ಕೆ ತದ್ವಿರುದ್ಧವಾದ ಕೆಲವೊಂದು ನಡೆಯುತ್ತಿದೆ. ಅದಕ್ಕೆ ಬೆನ್ನಿಗೆ ನಿಂತವರು ಮತ್ತಾರೂ ಅಲ್ಲ, ಗಾಂಧಿಯವರ ಮೊಮ್ಮಗ ತುಷಾರ್ ಗಾಂಧಿ.

ಬ್ರಿಟಿಷರು ಉಪ್ಪಿನ ಮೇಲೆ ತೆರಿಗೆ ಹೇರಿ ಜನಸಾಮಾನ್ಯರನ್ನು ಗೋಳು ಹೊಯ್ದುಕೊಳ್ಳಲು ಪ್ರಾರಂಭಿಸಿದಾಗ ಮಹಾತ್ಮಾ ಗಾಂಧಿಯವರು ಉಪ್ಪಿನ ಸತ್ಯಾಗ್ರಹ ನಡೆಸಿದ್ದು ನಮಗೆಲ್ಲಾ ಗೊತ್ತೇ ಇದೆ. ಗುಜರಾತ್‌ನ ದಂಡಿಯ ತನಕ ಸುಮಾರು 241 ಮೈಲಿಗಳ ಪಾದಯಾತ್ರೆ ಮಾಡಿದ ಈ ಸತ್ಯಾಗ್ರಹ ಸ್ವಾತಂತ್ರ್ಯ ಚಳವಳಿಯಲ್ಲೇ ಒಂದು ತಿರುವು ಬಿಂದುವಾಗಿ ಪರಿಣಮಿಸಿತ್ತು. ಗಾಂಧಿಜಿಯವರ ಈ ಸತ್ಯಾಗ್ರಹ ಅಂದು ಜನಸಾಮಾನ್ಯರಿಗಾಗಿ ನಡೆದಿದ್ದರೆ ಇಂದು ಅದೇ ಸತ್ಯಾಗ್ರಹ ಬಂಡವಾಳಶಾಹಿಗಳಿಗೆ ಬಂಡವಾಳವಾಗಿ ಪರಿಣಮಿಸಿದೆ. ಮೌಂಟ್ ಬ್ಲಾಂಕ್ 'ಪೆನ್' ಎಂಬ ಕಂಪೆನಿಯು ಮಹಾತ್ಮಾ ಗಾಂಧಿ ಲಿಮಿಟೆಡ್ ಎಡಿಶನ್ (ಎಂಜಿಎಲ್‌ಇ) – 241 ಎಂಬ ಹೆಸರಿನ ಪೆನ್ನನ್ನು ತಯಾರಿಸಲು ಹೊರಟಿದೆ. ಗಾಂಧಿಯವರು 241 ಮೈಲಿ ಪಾದಯಾತ್ರೆ ಮಾಡಿದ್ದರ ನೆನಪಿನಲ್ಲಿ ಈ ಪೆನ್ನು ಉತ್ಪಾದಿಸಲಾಗುತ್ತಿದೆ ಎಂದಿರುವ ಕಂಪೆನಿಯು ಪೆನ್ನಿನ ಹೆಸರಿನಲ್ಲಿ 241 ನಂಬರನ್ನು ಇದೇ ಕಾರಣಕ್ಕಾಗಿ ಸೇರಿಸಲಾಗಿದೆ ಎಂದು ಹೇಳಿಕೊಂಡಿದೆ. ಅಲ್ಲದೇ, 241 ಪೆನ್ನುಗಳನ್ನು ಮಾತ್ರವೇ ಉತ್ಪಾದಿಸುತ್ತಿದೆಯಂತೆ. ಪ್ರತೀ ಪೆನ್ನನ್ನೂ ಬಿಳಿ ಬಂಗಾರದಿಂದ ತಯಾರಿಸಲಾಗುತ್ತದಂತೆ. ಅಂದಹಾಗೆ, ಈ ಪೆನ್ನಿನ ಬೆಲೆಯೆಷ್ಟು ಗೊತ್ತೆ? ಕೇವಲ 11.39 ಲಕ್ಷ ರೂಪಾಯಿಗಳು! ಇಂಥ ಅದ್ದೂರಿ ಪೆನ್ನನ್ನು ಮೊನ್ನೆ ಮುಂಬೈನಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಿದವರು ಯಾರು ಗೊತ್ತೆ? ಮಹಾತ್ಮಾ ಗಾಂಧಿಯ ಮೊಮ್ಮಗ ತುಷಾರ್ ಗಾಂಧಿ! ಎಂಥ ಅಜ್ಜನಿಗೆ ಎಂಥ ಮೊಮ್ಮಗ ಹುಟ್ಟಿದ್ದಾನೆ ನೋಡಿ.

ಈ ಪೆನ್ನು ತೀರಾ ದುಬಾರಿಯೆನಿಸಿದವರಿಗಾಗಿ ಇದೇ ಸಂಸ್ಥೆ ಇನ್ನೊಂದು ಮಾದರಿಯ ಪೆನ್ನನ್ನೂ ಮಾರುಕಟ್ಟೆಗೆ ಬಿಡುತ್ತಿದೆ. ಅದರ ಹೆಸರು ಮಹಾತ್ಮಾ ಗಾಂಧಿ ಲಿಮಿಟೆಡ್ ಎಡಿಷನ್ (ಎಂಜಿಎಲ್‌ಇ) – 3000. ಈ ಸರಣಿಯಲ್ಲಿ 3000 ಪೆನ್ನುಗಳನ್ನು ತಯಾರಿಸಲಾಗುತ್ತಿದ್ದು ಇದರ ಬೆಲೆ ಒಂದೂವರೆ ಲಕ್ಷ ರೂಪಾಯಿ ಅಷ್ಟೆ! ಗಾಂಧೀಜಿಯಂಥ ದೊಡ್ಡ ವ್ಯಕ್ತಿಗಳ ಚಪ್ಪಲಿ, ಪೆನ್ನು, ಅಂಗಿ, ಕೋಲು, ಚರಕ, ಕಪ್ಪು, ಪ್ಲೇಟು – ಎಲ್ಲಾ ವಸ್ತುಗಳನ್ನು ಕೋಟ್ಯಾಂತರ ರೂಪಾಯಿಗೆ ಮಾರಿಕೊಂಡದ್ದಾಯಿತು. ಈಗ ಮಾರುವುದಕ್ಕೆ ಏನೂ ಉಳಿದಿಲ್ಲ ಅಂತ ಕಾಣುತ್ತೆ, ಅದಕ್ಕೆ ಈಗ ಅವರ ಹೆಸರನ್ನು, ಅವರು ಮಾಡಿದ ಸಾಧನೆಗಳನ್ನು ಮಾರಿಕೊಳ್ಳುವ ದಂಧೆಗೆ ಕೈಹಾಕಿದ್ದಾರೆ. ಜನ ಮರುಳಾದಷ್ಟೂ ಇಂಥವರ ಜಾತ್ರೆ ನಡೆದೇ ಇರುತ್ತದೆಯಲ್ಲವೆ?



ಮೆಟ್ರೋ ರೈಲು
ಆಟೋಚಾಲಕರ ಮರಣ ಶಾಸನ



ಬೆಂಗಳೂರು ನಗರದ ಸರಿಸುಮಾರು ಒಂದೂ ವರೆ ಲಕ್ಷದಷ್ಟು ಆಟೋ ಚಾಲಕರ ಪಾಲಿನ ಮರಣ ಶಾಸನವೊಂದು ರೂಪುಗೊಳ್ಳುತ್ತಿದೆ.

ಅದರ ಹೆಸರು ಮೆಟ್ರೋ ರೈಲು!

ಯೋಜನೆಯಂತೆ 2012ನೇ ಇಸವಿಗೇನಾದರೂ ಬೆಂಗಳೂರು ನಗರದಲ್ಲಿ ಮೆಟ್ರೋ ಓಡಲು ಶುರುವಾಯಿತೆಂದರೆ ಬೆಂಗಳೂರಿನ ಒಂದೂವರೆ ಲಕ್ಷದಷ್ಟು ಆಟೋ ಚಾಲಕರಷ್ಟೇ ಅಲ್ಲ; ಸರಿಸುಮಾರು ಒಂದು ಲಕ್ಷದಷ್ಟು ಆಟೋರಿಕ್ಷಾಗಳೂ ನಗರದಿಂದ ಗಡಿಪಾರಾಗಲೇಬೇಕು!

ಅದು ಮೆಟ್ರೋ ರೈಲ್ ಕಾರ್ಪೋರೇಷನ್ ಮತ್ತು ರಾಜ್ಯ ಸರ್ಕಾರದ ನಡುವೆ ಏರ್ಪಟ್ಟಿರುವ ಒಪ್ಪಂದ. ಬಿಎಂಆರ್‌ಸಿಎಲ್ ಅರ್ಥಾತ್ ಬೆಂಗಳೂರು ಮೆಟ್ರೋ ರೈಲ್ ಕಾರ್ಪೋರೇಷನ್ ಮತ್ತು ಕರ್ನಾಟಕ ಸರ್ಕಾರದ ನಡುವೆ ನಡೆದ ಒಡಂಬಡಿಕೆಯಂತೆ ಬೆಂಗಳೂರಿನ ಯಾವುದೇ ಮೆಟ್ರೋ ರೈಲು ಸ್ಟೇಷನ್ನಿನ ಐದು ಕಿ.ಮೀ.ಗಳ ಪಾಸಲೆಯಲ್ಲಿ ಆಟೋರಿಕ್ಷಾಗಳು ಓಡಾಡುವಂತಿಲ್ಲ!

ಇದಕ್ಕೆ ರಾಜ್ಯ ಸರ್ಕಾರ ಸಮ್ಮತಿ ಕೊಟ್ಟಿರುವುದು ಹಾಲಿ ಮುಖ್ಯಮಂತ್ರಿ ಯಡಿಯೂರಪ್ಪ!

ಹಿಂದಿನ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣ ಧರ್ಮಸಿಂಗ್, ಕುಮಾರಸ್ವಾಮಿ ಎಲ್ಲರೂ ಇಂತಹದೊಂದು ಪಾಪಕಾರ್ಯದಲ್ಲಿ ಭಾಗಿದಾರರೆ. ಬೆಂಗಳೂರು ಮೆಟ್ರೋ ರೈಲಿನ ತಾಯಿ ಸಂಸ್ಥೆಯಾದ ದೆಹಲಿ ಮೆಟ್ರೋ ರೈಲ್ ಕಾರ್ಪೋರೇಷನ್ (DMRC) 2005ರಲ್ಲಿ ರಾಜ್ಯಸರ್ಕಾರಕ್ಕೆ ಸಲ್ಲಿಸಿದ ತನ್ನ (DPR) ಅಂದರೆ **Detailed Project Report** ನಲ್ಲಿ ಸ್ಪಷ್ಟವಾಗಿಯೇ ಈ ತರದ ಷರತ್ತೊಂದನ್ನು ವಿಧಿಸಿದೆ.

ಆ ಪ್ರಕಾರ ಬೆಂಗಳೂರಿನ ಪ್ರತಿ ಮೆಟ್ರೋ ರೈಲ್ವೇ ಸ್ಟೇಷನ್ನಿಗೂ ಬಿಎಂಆರ್‌ಸಿಎಲ್ ಕಂಪೆನಿಯೇ ತನ್ನ ಸ್ವಂತ ಬಸ್ಸುಗಳನ್ನು ಬಿಡುತ್ತದೆ. ಅದನ್ನು **Feeder** ಬಸ್ಸುಗಳೆಂದು ಬಿಎಂಆರ್‌ಸಿಎಲ್ ಕರೆಯುತ್ತದೆ. ಇಂಥ **Feeder** ಬಸ್ಸುಗಳೇ ಬೆಂಗಳೂರಿನ ನಾನಾ ಏರಿಯಾಗಳಿಗೆ ಮೆಟ್ರೋ ರೈಲ್ ಸ್ಟೇಷನ್ನಿಗೆ ಬರುವ ಪ್ರಯಾಣಿಕರನ್ನು ಹೊತ್ತು ತರಲಿವೆ. ಅಲ್ಲಿಗೆ ಬಿಎಂಟಿಸಿ ಬಸ್ಸುಗಳ ಪ್ರಯಾಣಿಕರ ಸಂಖ್ಯೆಗೂ ಮೆಟ್ರೋ ಕೈಹಾಕಲಿದೆ. ಇದು ಒತ್ತಟ್ಟಿಗಿರಲಿ, ಬೆಂಗಳೂರಿನ ಒಂದು ಲಕ್ಷದಷ್ಟು ಆಟೋರಿಕ್ಷಾಗಳು ಯಾವುದೇ ಮೆಟ್ರೋ ಸ್ಟೇಷನ್ನಿನ ಸುತ್ತಮುತ್ತ ಓಡಾಡಲೇ ಬಾರದು ಎಂದಾದರೆ ಅಷ್ಟೂ ಆಟೋರಿಕ್ಷಾಗಳನ್ನೇನು ಬೀದಿಗೆ ಹಾಕಬೇಕೆ?

ಬಿಎಂಆರ್‌ಸಿಎಲ್‌ನ **Detailed Project Report (DPR)**ನಲ್ಲಿದ್ದ ಇಂಥದ್ದೊಂದು ಷರತ್ತನ್ನು ಕೂಲಂಕಷವಾಗಿ ಪರಿಶೀಲಿಸುವಷ್ಟು ವ್ಯವಧಾನವಾದರೂ ಮುಖ್ಯಮಂತ್ರಿ ಯಡ್ಡಿಗೆಲ್ಲಿದೆ? ಮೆಟ್ರೋ ರೈಲು ಹೇಳಿಕೇಳಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ಜಂಟಿ ಪಾಲುದಾರಿಕೆಯ ಯೋಜನೆ. ಶೇ.50ರಷ್ಟು ರಾಜ್ಯ ಸರ್ಕಾರದ ಪಾಲಾದರೆ ಇನ್ನರ್ಧವನ್ನು ಕೇಂದ್ರ ಸರ್ಕಾರ ಭರಿಸುತ್ತದೆ. 2002ರಲ್ಲಿ ಪ್ರಸ್ತಾವನೆಗೊಂಡ ಮೆಟ್ರೋ ಯೋಜನೆ ಆಗ ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣರ ಮೂಲಕ ಚಾಲ್ತಿಗೆ ಬಂದು ಅದನ್ನು ಕಾರ್ಯಗತಗೊಳಿಸಲೆಂದೇ ದೆಹಲಿ ಮೆಟ್ರೋ ರೈಲ್ ಕಾರ್ಪೋರೇಷನ್ ನೇಮಕಗೊಂಡು, **RITES** ಎಂಬ ಖಾಸಗಿ ಕನ್ಸಲ್ಟನ್ಸಿಗೆ ಕೋಟ್ಯಾಂತರ ರೂಪಾಯಿ ಕೊಟ್ಟು ಪ್ರಾಜೆಕ್ಟ್ ರಿಪೋರ್ಟ್ ಬರೆಸಿ, 2003ರಲ್ಲಿ ಅದನ್ನು ಸರ್ಕಾರಕ್ಕೆ ಸಲ್ಲಿಸಿ ಅಂತಿಮವಾಗಿ ಸರ್ಕಾರ ಮೆಟ್ರೋ ರೈಲಿನ ಯೋಜನೆಗೆ ಮಂಜುರಾತಿ ನೀಡಿದ್ದು 2005ರಲ್ಲಿ.

ಎಸ್.ಎಂ.ಕೃಷ್ಣರಿಂದ ಹಿಡಿದು ಯಡ್ಡಿಯತನಕ ಪ್ರತಿ ಯೊಬ್ಬ ಮುಖ್ಯಮಂತ್ರಿಯೂ ಕಾಲಾನುಕಾಲಕ್ಕೆ ಮೆಟ್ರೋ ಯೋಜನೆಯನ್ನು ನಿಭಾಯಿಸುತ್ತಲೇ ಬಂದಿದ್ದಾರೆ. ಬೆಂಗಳೂರಿನ ಮೆಟ್ರೋ ರೈಲ್ವೆಗೆಂದು ಜಪಾನಿನ ಇಂಟರ್‌ನ್ಯಾಷನಲ್ ಕಾರ್ಪೋರೇಷನ್ಸ್ ಅಸೋಸಿಯೇಷನ್ (JICA) ಸಂಸ್ಥೆ ಇಡೀ ಯೋಜನಾ ವೆಚ್ಚವಾದ ಎಂಟು ಸಾವಿರ ಕೋಟಿರೂಪಾಯಿಗಳಷ್ಟನ್ನು ಸಾಲವಾಗಿ ಕೊಡುತ್ತಿದೆ. ಇಲ್ಲಿ ಕೇಂದ್ರ ಸರ್ಕಾರವಾಗಲಿ ರಾಜ್ಯ ಸರ್ಕಾರವಾಗಲಿ ಸಾಲ ಪಡೆದು ಯೋಜನೆಯನ್ನು ಜಾರಿಗೆ ತರುವ ಪಾತ್ರಧಾರಿಗಳೇ ಹೊರತು ಹೆಚ್ಚಿನ ಹೊಣೆಗಾರಿಕೆಯೇನಿಲ್ಲ.


ಸರ್ಕಾರವೊಂದು ಜನರ ಅನುಕೂಲಕ್ಕೆಂದು ಈ ತರಹದ ಯೋಜನೆಗೆ ಕೈಹಾಕುವಾಗ ಅದರಿಂದ ತನಗೇನು ಪ್ರಯೋಜನ ಎಂಬುದನ್ನು ಕೂಲಂಕಷವಾಗಿ ಪರಿಶೀಲಿಸಿಯೇ ಕೈಹಾಕಬೇಕಾಗುತ್ತದೆ. ವಿಚಿತ್ರವೆಂದರೆ ಬಿಎಂಆರ್‌ಸಿಎಲ್ ವಿಷಯದಲ್ಲಿ ರಾಜ್ಯ ಸರ್ಕಾರವೇ ಯಾಮಾರಿಬಿಟ್ಟದೆ. ರಾಜ್ಯದ ಮುಖ್ಯ ಕಾರ್ಯದರ್ಶಿ ಮತ್ತು ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಬ್ಬರೂ ಬಿಎಂಆರ್‌ಸಿಎಲ್‌ನ ಆಡಳಿತ ಮಂಡಳಿಯಲ್ಲಿ ನಾಮಕಾವಸ್ಥೆಯ ಡೈರೆಕ್ಟರುಗಳಷ್ಟೇ. ಮಿಕ್ಕಂತೆ ಬಿಎಂಆರ್‌ಸಿಎಲ್ ಚೇರ್ಮನ್ ಆಗಿರುವವನು ಮೂಲತಃ ತಮಿಳುನಾಡಿನ ಐಎಎಸ್ ಅಧಿಕಾರಿ ರಾಮಚಂದ್ರನ್. ಮ್ಯಾನೇಜಿಂಗ್ ಡೈರೆಕ್ಟರ್ ಶಿವಶೈಲಂ ಕೂಡ ತಮಿಳುನಾಡು ಮೂಲದವನೇ. ಕೇಂದ್ರ ರೈಲ್ವೇ ಇಲಾಖೆಯ ತಮಿಳು ಲಾಬಿ ವ್ಯವಸ್ಥಿತವಾಗಿಯೇ ಇವರಿಬ್ಬರು ಬಿಎಂಆರ್‌ಸಿಎಲ್ ಮುಖ್ಯಸ್ಥರನ್ನಾಗಿ ನೇಮಿಸಿದೆ. ಪ್ಲಾನಿಂಗ್ ಡೈರೆಕ್ಟರ್ ಸುಧೀರ್‌ಚಂದ್ರ, ಫಂಕ್ಷನಲ್ ಡೈರೆಕ್ಟರ್ ಟಿ.ಡಿ. ಪಹುಜಾ ಎಂಬ ಹಿಂದಿವಾಲಾಗಳೂ ಇದ್ದಾರೆ.



ಡಿ.ಡಿ.ಪಹುಜಾ



ಬಿ.ಎಸ್.ಸುಧೀಂದ್ರ



ಶಿವಶೈಲಂ



ರಾಮಚಂದ್ರನ್

ಹೆಚ್ಚುಕಮ್ಮಿ ಖಾಸಗಿ ಕಂಪೆನಿಯೊಂದರಂತೆ ನಿರಂಕುಶಾಧಿಕಾರವುಳ್ಳ ಬಿಎಂಆರ್‌ಸಿಎಲ್‌ನ ದೊರೆಗಳಿಗೆ ಯಾವುದೇ ಲಂಗುಲಗಾಮಿಲ್ಲ. ಇವರು ಹೇಳಿದ ಭೂಮಿಯನ್ನು ಸರ್ಕಾರ ಕಿತ್ತುಕೊಡಬೇಕು. ಭೂಸ್ವಾಧೀನಕ್ಕೆಂದು, ವಿದ್ಯುತ್ ಸಂಪರ್ಕಕ್ಕೆಂದು, ಕಾಮಗಾರಿಗೆಂದು ಏನೇನು ಬೇಕೋ ಎಲ್ಲವನ್ನೂ ಕಲ್ಪಿಸಿಕೊಡುವ ರಾಜ್ಯ ಸರ್ಕಾರ ಅದ್ಯಾವ ಆಮಿಷಕ್ಕೀಡಾಗಿ ಮೆಟ್ರೋ ಧಣಿಗಳಿಗೆ ಮಣಿದಿದ್ದಾರೋ ಗೊತ್ತಿಲ್ಲ.

ಆಡಳಿತದಲ್ಲಿ ಸಾಕಷ್ಟು ಅಧಿಕಾರವನ್ನಾಗಲೀ, ಉದ್ಯೋಗ ನೇಮಕಾತಿಯಲ್ಲಿ ಸ್ಥಳೀಯರ ಪಾಲಿಗಾಗಲಿ, ಬೆಂಗಳೂರಿನ ನಾಗರಿಕರ ಬೇಕು ಬೇಡದ ಕುರಿತಾಗಲಿ ಯಾವೊಂದು ಷರತ್ತನ್ನು ವಿಧಿಸದೇ ಯೋಜನಾ ಮಂಜೂರಾತಿಗೆ ಸಹಿ ಹಾಕಿದ ಕರ್ನಾಟಕದ ದೊರೆಗಳ ಮನೆಮುರುಕ ಬುದ್ಧಿಯೇ ಆಟೋ ಚಾಲಕರಿಗೂ ಮುಳುವಾಗಿದೆ.

ಯಾವುದೇ ಮೆಟ್ರೋ ಸ್ಟೇಷನ್ನಿನ ಸುತ್ತಮುತ್ತ ಆಟೋರಿಕ್ಷಾಗಳು ಸುಳಿಯುವಂತಿಲ್ಲ ಎಂಬ ಷರತ್ತನ್ನು ಯಾವ ಕಾರಣಕ್ಕೆ ಮೆಟ್ರೋ ದೊರೆಗಳು ವಿಧಿಸಿದ್ದಾರೆಂಬ ಬಗ್ಗೆ ಸರ್ಕಾರಕ್ಕೆ ತಿಳುವಳಿಕೆಯಿಲ್ಲ. ಬೆಂಗಳೂರಿನುದ್ದಕ್ಕೂ ನಾಲ್ಕು ದಿಕ್ಕುಗಳ ಪ್ರಮುಖ ಮಾರ್ಗಗಳಲ್ಲಿ ಓಡುವ ಮೆಟ್ರೋ ರೈಲಿನ ಉತ್ತರದ ಟರ್ಮಿನಲ್ ಉದ್ದಕ್ಕೂ ಯಶವಂತಪುರ, ಮಲ್ಲೇಶ್ವರ, ಚಿಕ್ಕಪೇಟೆ, ದೀಪಾಂಜಲಿನಗರ, ಮೈಸೂರು ರಸ್ತೆ, ವಿಜಯನಗರ ಹೊಸಹಳ್ಳಿ, ಟೋಲ್‌ಗೇಟ್ ಮಾಗಡಿ ರಸ್ತೆ... ಇತ್ಯಾದಿ ಸ್ಟೇಷನ್‌ಗಳು ಬರುತ್ತವೆ.

ಪುಟ್ಟೇನಹಳ್ಳಿ, ಜೆ.ಪಿ.ನಗರ, ಬನಶಂಕರಿ, ಜಯನಗರ ಸೌತ್‌ಎಂಡ್, ಲಾಲ್‌ಬಾಗ್, ಕೆ.ಆರ್.ರಸ್ತೆ ಕಲಾಸಿಪಾಳ್ಯ ಮೆಜೆಸ್ಟಿಕ್ ಸ್ಟೇಷನ್‌ಗಳುಳ್ಳ ಎರಡನೇ ರೂಟೊಂದನ್ನು ಮೆಟ್ರೋ ನಿರ್ವಹಿಸುತ್ತಿದೆ. ಹಾಗೇ ವಿಧಾನಸೌಧ ಎಂ.ಜಿ.ರಸ್ತೆ ಟ್ರಿನಿಟಿ ಸರ್ಕಲ್, ಹಲಸೂರು, ಇಂದಿರಾನಗರದ ಸಿಎಂಹೆಚ್ ರಸ್ತೆಗಳನ್ನು ದಾಟಿ ಬಯ್ಯಪ್ಪನಹಳ್ಳಿ ಟರ್ಮಿನಲ್‌ಗೆ ಮೂರನೇ ರೂಟಿದೆ. ನಾಲ್ಕನೇ ರೂಟೆಂದರೆ ಶೇಷಾದ್ರಿಪುರದ ಸ್ವಸ್ತಿಕ್, ಮಲ್ಲೇಶ್ವರ, ಕುವೆಂಪುರಸ್ತೆ, ರಾಜಾಜಿನಗರ, ಮಹಾಲಕ್ಷ್ಮಿಲೇಔಟ್, ಸೋಪ್‌ಫ್ಯಾಕ್ಟರಿ, ಪೀಣ್ಯಾ ಕೈಗಾರಿಕಾ ಪ್ರದೇಶ ಮತ್ತು ದಾಸರಹಳ್ಳಿ ಹೆಸರುಘಟ್ಟದ ಮಾರ್ಗ. ಇಷ್ಟೂ ಮೆಟ್ರೋ ಸ್ಟೇಷನ್ನುಗಳ ಸುತ್ತಮುತ್ತ ಆಟೋರಿಕ್ಷಾಗಳೇ ಸುಳಿಯಬಾರದೆಂದರೆ ಬೆಂಗಳೂರಿನುದ್ದಕ್ಕೂ ಆಟೋಗಳೇ ಇರಕೂಡದು ಎಂದಾಯ್ತು. ಇದರರ್ಥ ಮುಂದೊಮ್ಮೆ ಬೆಂಗಳೂರಿನಲ್ಲಿ ಆಟೋಗಳೇ ಕಾಣಿಸಕೂಡದು?

ಯಾವ ಪುರುಷಾರ್ಥಕ್ಕೆ ಈ ಷರತ್ತಿಗೆ ಸರ್ಕಾರ ಸಮ್ಮತಿಸಿದೆ? ಆಟೋಗಳಿಂದಾಗಿ ಬೆಂಗಳೂರು ರಸ್ತೆಗಳು ಕಿಕ್ಕಿರಿಯುತ್ತವೆ ಎಂದೇ? ಅಥವಾ ಮೆಟ್ರೋ ಸ್ಟೇಷನ್ನುಗಳಿಗೆ ಬರುವ ಫೀಡರ್ ಬಸ್ಸುಗಳಿಗೆ ಗಿರಾಕಿ ಸಿಗುವುದಿಲ್ಲ ಎಂದೇ? ಬಹುಶಃ ಮೆಟ್ರೋಗೆ ಪ್ರಯಾಣಿಕರ ಕೊರತೆಯಾಗದಿರಲಿ ಎಂಬ ಉದ್ದೇಶವೂ ಇದೆಯೇ?

ಈ ಎಲ್ಲಾ ಕಾರಣಗಳೂ ಮೆಟ್ರೋ ಹುನ್ನಾರದ ಹಿಂದಿವೆ. ಒಬ್ಬ ಆಟೋ ಚಾಲಕನನ್ನು ನಂಬಿಕೊಂಡು ಕಮ್ಮಿಯೆಂದರೂ ಐದು ಮಂದಿಯ ಬದುಕು ಸಾಗುತ್ತದೆ. ಮನೆ ಬಾಡಿಗೆ ಮಕ್ಕಳ ಓದು, ವೃದ್ಧ ತಂದೆ ತಾಯಂದಿರ ಪಾಲನೆ ಎಲ್ಲಕ್ಕೂ ಆಟೋರಿಕ್ಷಾಗಳನ್ನೇ ನಂಬಿಕೊಂಡ ಒಂದೂವರೆ ಲಕ್ಷದಷ್ಟು ಆಟೋ ಚಾಲಕರು ಏನು ಮಾಡಬೇಕು? ಅಧಿಕೃತವಾಗಿ 80 ಸಾವಿರ ಆಟೋಗಳಿದ್ದರೂ ಅಕ್ಕಪಕ್ಕದ ಹೊಸಕೋಟೆ, ನೆಲಮಂಗಲ, ದೊಡ್ಡಬಳ್ಳಾಪುರ, ರಾಮನಗರ ಮುಂತಾದ ತಾಲ್ಲೂಕು ಪ್ರದೇಶಗಳ ಸರಿಸುಮಾರು ಇಪ್ಪತ್ತು ಸಾವಿರದಷ್ಟು ಆಟೋರಿಕ್ಷಾಗಳಿಗೆ ಬೆಂಗಳೂರೇ ಜೀವನಾಧಾರ. ಒಂದೇ ರಿಕ್ಷಾವನ್ನು ಪಾಳಿಗಳಲ್ಲಿ ಇಬ್ಬರು ಚಾಲಕರು ಓಡಿಸುವುದುಂಟು. ಸಿಪಿಎಂ, ಜಯಕರ್ನಾಟಕ ರಕ್ಷಣಾ ವೇದಿಕೆ, ಕಾಂಗ್ರೆಸ್, ಜೆಡಿಎಸ್, ಬಿಜೆಪಿಯಷ್ಟೇ ಅಲ್ಲದೇ ಇತ್ಯಾದಿ ಆಟೋಚಾಲಕರ ಥರೇವಾರಿ ಸಂಘಟನೆಗಳೂ ಅಸ್ತಿತ್ವದಲ್ಲಿವೆ. ಇಲ್ಲಿಗೆ ಎರಡು ವರ್ಷದ ಹಿಂದೆ ಮೆಟ್ರೋ ಮುಖ್ಯಸ್ಥನಾಗಿದ್ದ ಶ್ರೀವಾಸ್ತವ ಎಂಬಾತ ಆಟೋ ಚಾಲಕರ ಸಭೆ ಕರೆದು ಯಾವುದೇ ಕಾರಣಕ್ಕೂ ಮೆಟ್ರೋ ಯೋಜನೆಯಿಂದಾಗಿ ಆಟೋಗಳಿಗೆ ತೊಂದರೆಯಿಲ್ಲ ಎಂಬ ಭರವಸೆ ಕೊಟ್ಟಿದ್ದ.

ಈಗ ಮೆಟ್ರೋ ಚೇರ್ಮನ್ ಆಗಿರುವವನು ರಾಮಚಂದ್ರನ್. ಎಂ.ಡಿ. ಶಿವಶೈಲಂ ಎಂಬ ದುರಹಂಕಾರಿ ಐಎಎಸ್‌ಗೆ ಆಟೋ ಚಾಲಕರೆಂದರೇನೇ ಅಸಹ್ಯ. 2012ರ ಹೊತ್ತಿಗೆ ಆಟೋರಿಕ್ಷಾಗಳೇ ಬೆಂಗಳೂರಿನಲ್ಲಿರಕೂಡದೆಂಬ ಹುನ್ನಾರಕ್ಕೆ ಇವರಿಬ್ಬರಷ್ಟೇ ಅಲ್ಲ, ಮೆಟ್ರೋದ ಪ್ಲಾನಿಂಗ್ ಡೈರೆಕ್ಟರ್ ಸುಧೀರ್‌ಚಂದ್ರ ಕೂಡ ಮುತುವರ್ಜಿ ವಹಿಸಿದ್ದಾನೆ.

ಇದು ಎಂತಹ ಹುಚ್ಚಾಟವೆಂದರೆ, ಮೆಟ್ರೋ ಬಂದ ಮೇಲೆ ಬೆಂಗಳೂರಿನ ಟ್ರಾಫಿಕ್ ಜಾಮ್ ಕಾಯಂಆಗಿ ನಿವಾರಣೆಯಾಗುತ್ತದೆಯೆಂದು ಸರ್ಕಾರ ನಂಬಿಕೊಂಡಿದೆ. ಜನ ಕೂಡ ಅದನ್ನು ನಂಬಿದ್ದಾರೆ. ಆದರೆ ಮೆಟ್ರೋ ಕಂಪೆನಿಯೇ ನೂರಾರು ಫೀಡರ್ ಬಸ್‌ಗಳನ್ನು ರಸ್ತೆಗೆ ಬಿಟ್ಟಿತ್ತೆಂದರೆ; ಒಂದೆಡೆ ಬಿಎಂಟಿಸಿ ಬಸ್ಸುಗಳು ಮತ್ತೊಂದೆಡೆ ಮೆಟ್ರೋ ಬಸ್ಸುಗಳೂ ಸೇರಿ ಬೆಂಗಳೂರಿನ ರಸ್ತೆಗಳ ಪಾಡು ಏನಾಗಬೇಡ?




ಈ ಪುರುಷಾರ್ಥಕ್ಕೆ ಆಟೋಗಳು ಬಲಿಯಾಗಬೇಕೆ? ಮೆಟ್ರೋ ಕಂಪೆನಿಯೇ ಬಸ್ಸುಗಳನ್ನು ಬಿಡುವ ಬದಲು ಆಟೋಗಳೇ ಉಳಿಯಬಹುದಲ್ಲ? ಹೋಗಲಿ, ಬೀದಿಗೆ ಬಿದ್ದ ಆಟೋ ಚಾಲಕರ ಮಕ್ಕಳಿಗಾದರೂ ಮೆಟ್ರೋ ಕೆಲಸ ಕೊಡುತ್ತದೆಯಾ? ನಿರಾಶ್ರಿತ ಆಟೋ ಚಾಲಕರಿಗಾಗಿ ಸರ್ಕಾರ ಯಾವ ಪರ್ಯಾಯ ಯೋಜನೆಯನ್ನು ರೂಪಿಸಿದೆ? ಮೆಟ್ರೋ ಕಂಪೆನಿಯ ಸ್ವಾರ್ಥಕ್ಕೆ ಬಲಿಯಾಗುವ ಆಟೋ ಚಾಲಕರ ಸಂಕಷ್ಟವೆಂದರೆ ಸರ್ಕಾರಕ್ಕದು ಲೆಕ್ಕಕ್ಕೇ ಇಲ್ಲವೇ?

● ರಾ. ಸೋಮನಾಥ್




ವೈದ್ಯರ ಮುಷ್ಕರ ರೌಡಿ ಮಂತ್ರಿ ರೋಗಗ್ರಸ್ತ ಸರ್ಕಾರ





ಯಡ್ಡಿ ಸಂಪುಟದ ಮಂತ್ರಿಗಳು ಮೋದಿ ಇತ್ಯಾದಿ ಆರೆಸ್ಸೆಸ್ ದೈತ್ಯರಿಂದ ಪಾಠ ಹೇಳಿಸಿಕೊಳ್ಳುತ್ತಿರುವುದು ಉತ್ತಮ ಆಡಳಿತಕ್ಕಾಗಿ ಮತ್ತು ರಾಜ್ಯದ ಅಭಿವೃದ್ಧಿಗೆ ಆಗಿದ್ದರೆ ಲಕ್ಷಾಂತರ ಬಡರೋಗಿಗಳ ರೋದನೆ ಕಂಡೂ ಹಿಂದೂತ್ವದ ಪಾಠಕ್ಕೇಕೆ ತಲೆಕೊಡುತ್ತಿದ್ದರು? ವೈದ್ಯರುಗಳ ಮುಷ್ಕರದಿಂದ ಅನಾಥರಾದ ಲಕ್ಷಾಂತರ ಬಡರೋಗಿಗಳಲ್ಲಿ ಹೆಚ್ಚಿನವರು ಹಿಂದೂಗಳೇ! ನೆರೆಬಂದು ಜನ ಸಾಯುತ್ತಿದ್ದರೆ, ವೈದ್ಯರುಗಳು ಬೀದಿಗಿಳಿದು ಬಾಯಿಬಡಕೊಳ್ಳುತ್ತಿದ್ದರೆ, ಬಡರೋಗಿಗಳು ವೈದ್ಯರಿಲ್ಲದೇ ನರಳುತ್ತಿದ್ದರೂ ಲೆಕ್ಕಿಸದೇ ಆರೆಸ್ಸೆಸ್ ಪಾಠಕ್ಕೆ ಕುಂತ ಯಡ್ಡಿ ಸಂಪುಟದ ಮಂತ್ರಿಗಳಿಗೆ ಮನುಷ್ಯತ್ವದ ಪಾಠ ಕಲಿಸುವರ್‍ಯಾರು?



ರೋಗಗ್ರಸ್ತ ಸರ್ಕಾರವೊಂದಕ್ಕೆ ಪ್ರಜೆಗಳ ಆರೋಗ್ಯದ ಬಗ್ಗೆ ಇನ್ನೆಂಥ ಕಾಳಜಿ ಸಾಧ್ಯ?

ರಾಜ್ಯಾದ್ಯಂತ ಸಹಸ್ರಾರು ಸರ್ಕಾರಿ ವೈದ್ಯರುಗಳು ಮುಷ್ಕರಕ್ಕಿಳಿದಿದ್ದಾರೆ. ಸರ್ಕಾರಿ ಆಸ್ಪತ್ರೆಗಳೆಂಬುದು ಬಡರೋಗಿಗಳ ಪಾಲಿನ ಯಾತನಾ ಶಿಬಿರಗಳಾಗಿ ಮಾರ್ಪಟ್ಟಿವೆ. ಒಂದೆಡೆ ಸಾರಾಸಗಟಾಗಿ ರಾಜೀನಾಮೆ ಬಿಸಾಕಿದ ಸರ್ಕಾರಿ ಡಾಕ್ಟರುಗಳ ಆಕ್ರೋಶವಾದರೆ ಮತ್ತೊಂದೆಡೆ ಡಾಕ್ಟರುಗಳೇ ಇಲ್ಲದ ಆಸ್ಪತ್ರೆಗಳ ಮುಂದೆ ಬಿದ್ದು ನರಳಾಡುತ್ತಿರುವ ನಿರ್ಗತಿಕ ರೋಗಿಗಳ ಚಿತ್ರ. ಇಂಥ ಸ್ಥಿತಿಯಲ್ಲಿ ಯಡ್ಡಿ ಸರ್ಕಾರದ ಮಂತ್ರಿಗಳು ಸುತ್ತೂರು ಮಠ ಸೇರಿಕೊಂಡು ಆರೆಸ್ಸೆಸ್ ವಿಷಬುದ್ಧಿಯ ಪಾಠವನ್ನು ನರಹಂತಕ ನರೇಂದ್ರ ಮೋದಿಯಿಂದ ಕಲಿಯುತ್ತಿದ್ದಾರೆ!

ರೋಮ್ ನಗರಕ್ಕೆ ಬೆಂಕಿ ಬಿದ್ದರೆ ಪಿಟೀಲು ಕುಯ್ಯುತ್ತಿದ್ದ ನೀರೋ ದೊರೆಗೂ ವೈದ್ಯರೇ ಇಲ್ಲದ ಸರ್ಕಾರಿ ಆಸ್ಪತ್ರೆಗಳೆದುರು ಬಿದ್ದು ಒದ್ದಾಡುತ್ತಿರುವ ಲಕ್ಷಾಂತರ ರೋಗಿಗಳ ಆಕ್ರಂದನ ಕಂಡೂ ಸುತ್ತೂರು ಮಠದಲ್ಲಿ ಯೋಗಾಸನ ಹಾಕುತ್ತಿರುವ ಬಜೆಪಿ ಮಂತ್ರಿವರ್ಯರಿಗೂ ಏನು ವ್ಯತ್ಯಾಸ ಬಂತು?

ಅಷ್ಟಕ್ಕೂ ಯಡ್ಡಿ ಸಂಪುಟದ ಮಂತ್ರಿಗಳು ಮೋದಿ ಇತ್ಯಾದಿ ಆರೆಸ್ಸೆಸ್ ದೈತ್ಯರಿಂದ ಪಾಠ ಹೇಳಿಸಿಕೊಳ್ಳುತ್ತಿರುವುದು ಉತ್ತಮ ಆಡಳಿತಕ್ಕಾಗಿ ಮತ್ತು ರಾಜ್ಯದ ಅಭಿವೃದ್ಧಿಗೆ ಆಗಿದ್ದರೆ ಲಕ್ಷಾಂತರ ಬಡರೋಗಿಗಳ ರೋದನೆ ಕಂಡೂ ಹಿಂದೂತ್ವದ ಪಾಠಕ್ಕೇಕೆ ತಲೆಕೊಡುತ್ತಿದ್ದರು? ಯಾರೇ ಮಂತ್ರಿಯೊಬ್ಬನಿಗೆ ಯಾವುದೇ ಸರ್ಕಾರಿ ಆಸ್ಪತ್ರೆಯೆದುರು ಒಂದು ದಿನ ಕಳೆದಿದ್ದರೂ ನರೇಂದ್ರ ಮೋದಿಯ ಪಾಠಕ್ಕಿಂತ ಲಕ್ಷಪಟ್ಟು ಶ್ರೇಷ್ಠವಾದ ಮನುಷ್ಯತ್ವದ ಪಾಠ ಕಲಿಯುವ ಅವಕಾಶವಿತ್ತು.

ಆದರೆ ಯಡ್ಡಿ ಸರ್ಕಾರದ ಆದ್ಯತೆಯೇನಿದ್ದರೂ ಅದು ಆರೆಸ್ಸೆಸ್ ಹೇಳಿಕೊಡುವ ಕೋಮು ವೈಷಮ್ಯದ ಪಾಠದತ್ತಲೇ ಹೊರತು ಬಡರೋಗಿಗಳ ಸೇವೆಯ ಪಾಠ ಬೇಕಿಲ್ಲ. ಹಾಗೊಮ್ಮೆ ಆರೆಸ್ಸೆಸ್ ವರಿಷ್ಠರೇನಾದರೂ ಹಿಂದೂ ಓಟ್‌ಬ್ಯಾಂಕ್ ಪಾಲಿಟಿಕ್ಸ್‌ನ್ನೇ ಕಲಿಸಿದರೆಂದಿಟ್ಟುಕೊಂಡರೂ ಅದು ಮುಸ್ಲಿಂ ದ್ವೇಷವೇ ಹೊರತು ಹಿಂದೂ ಕಾಳಜಿಯಾಗಿದ್ದರೆ ಸರ್ಕಾರಿ ವೈದ್ಯರುಗಳ ಬೇಡಿಕೆಯಾಗಲಿ, ವೈದ್ಯರಿಲ್ಲದೇ ನರಳಿದ ಬಡರೋಗಿಗಳ ಕಣ್ಣೀರಾಗಲಿ ಬಜೆಪಿ ಮಂತ್ರಿಗಳಿಗೆ ಮುಖ್ಯವಾಗಬೇಕಿತ್ತು.

ಏಕೆಂದರೆ ವೈದ್ಯರುಗಳ ಮುಷ್ಕರದಿಂದ ಅನಾಥರಾದ ಲಕ್ಷಾಂತರ ಬಡರೋಗಿಗಳಲ್ಲಿ ಹೆಚ್ಚಿನವರು ಹಿಂದೂಗಳೇ!

ಸರ್ಕಾರಿ ಡಾಕ್ಟರುಗಳಾದರೂ ಕೇಳುತ್ತಿರುವುದೇನು? ಯಾಕೆ ತಮಗೆ ಹೆಚ್ಚಿಗೆ ಸಂಬಳ ಕೊಡಿ ಎನ್ನುತ್ತಿದ್ದಾರೆ, ಏಕೆ ಸಾಮೂಹಿಕ ರಾಜೀನಾಮೆಗೆ ಮುಂದಾಗಿದ್ದಾರೆ ಇತ್ಯಾದಿ ಪ್ರಶ್ನೆಗಳಿಗೆಲ್ಲ ತಲೆ ಕೆಡಿಸಿಕೊಳ್ಳುವಷ್ಟು ವ್ಯವಧಾನವಾಗಲಿ, ಸಮಯವಾಗಲಿ ಮುಖ್ಯಮಂತ್ರಿ ಯಡ್ಡಿಗಿರಲಿ, ಸ್ವತಃ ಆರೋಗ್ಯ ಮಂತ್ರಿಗೇ ಇದ್ದಂತಿಲ್ಲ. ಮೊದಲನೆಯದಾಗಿ ಕನ್ನಡಿಗರ ಆರೋಗ್ಯದ ಬಗ್ಗೆ ಕಿಂಚಿತ್ತಾದರೂ ಕಾಳಜಿ ಇವತ್ತು ಪಾಠ ಕಲಿಸುತ್ತಿರುವ ಆರೆಸ್ಸೆಸ್ ಕೂಟಕ್ಕೆ ಇದ್ದಿದ್ದೇ ಆಗಿದ್ದರೆ ಶ್ರೀರಾಮುಲುನಂಥ ಪಕ್ಕಾ ಅದಿರು ಕಳ್ಳ ರೌಡಿಯೊಬ್ಬನನ್ನು ಆರೋಗ್ಯ ಮಂತ್ರಿ ಹುದ್ದೆಯಲ್ಲಿರಲು ಸಂಘ ಪರಿವಾರಗಳು ಬಿಡುತ್ತಿರಲಿಲ್ಲ.

ಯಡ್ಡಿ ಸರ್ಕಾರ ಅಧಿಕಾರಕ್ಕೆ ಬಂದು ಹೆಚ್ಚೂಕಮ್ಮಿ ಒಂದೂವರೆ ವರ್ಷದ ಅವಧಿಯಲ್ಲಿ ಶ್ರೀರಾಮುಲು ತನ್ನ ಮಂತ್ರಿ ಛೇಂಬರಿಗೆ ಬಂದದ್ದು ಕೇವಲ ಇಪ್ಪತ್ತು ದಿನ ಮಾತ್ರ!

ಅದರರ್ಥ ಶ್ರೀರಾಮುಲು ತಿಂಗಳಿಗೊಮ್ಮೆಯಂತೆ ಮಂತ್ರಿ ಛೇಂಬರಿಗೆ ಬಂದಿದ್ದಾನೆ. ಕೆಲ ದಿನಗಳ ಹಿಂದೆ ಸಂಜಯ್‌ಖಾನ್ ಒಡೆತನದ ಗೋಲ್ಡನ್ ಫಾಮ್ ರೆಸಾರ್ಟಿನಲ್ಲಿ ಯಡ್ಡಿ ಸಂಪುಟದ ಮಂತ್ರಿಗಳ ಮಂಥನ ಕಾರ್ಯಕ್ರಮವೊಂದು ನಡೆಯಿತಲ್ಲ; ಯಡ್ಡಿ ಸಂಪುಟದ

ತುಕ್ಕು ಬಿದ್ದ ಯಂತ್ರಗಳು ಹಸಿವೆಗೆ ಬಿದ್ದ ವೈದ್ಯರು

660 ಕೋಟಿ ಖರೀದಿ ಸ್ಕ್ಯಾಂಡಲ್

ಇವತ್ತು ಕರ್ನಾಟಕದ ಸರ್ಕಾರಿ ಆಸ್ಪತ್ರೆಗಳ ದುರವಸ್ಥೆ ಹೇಗಿದೆಯೆಂಬುದಕ್ಕೆ ಬೀದರ್ ಜಿಲ್ಲಾ ಆಸ್ಪತ್ರೆಯೊಂದೇ ಸಾಕು. ಅಲ್ಲಿ ವೆಂಟಿಲೇಟರ್ಸ್ ಇದ್ದರೂ ಅದನ್ನು ಆಪರೇಟ್ ಮಾಡಲು ಸಿಬ್ಬಂದಿಗಳೇ ಇಲ್ಲ, ಸ್ಕ್ಯಾನಿಂಗ್ ಮಿಷಿನ್‌ಗೆ ತುಕ್ಕು ಹಿಡಿಯುತ್ತಿದೆ. ಅದನ್ನು ನಿಭಾಯಿಸಬೇಕಾದ ಸಿಬ್ಬಂದಿಯಿಲ್ಲ, ಬಿಜಾಪುರದಂಥ ಜಿಲ್ಲಾ ಕೇಂದ್ರಕ್ಕೆ ಒಬ್ಬನೇ ಒಬ್ಬ ಫಿಜಿಷಿಯನ್ ಇಲ್ಲ. ಕೆಲವರ್ಷಗಳ ಹಿಂದೆ ಕರ್ನಾಟಕದ ಎಲ್ಲಾ ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲೆಂದು 660 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಬೇಕಾಬಿಟ್ಟಿ ವೆಂಟಿಲೇಟರ್‌ಗಳು, ಸ್ಕ್ಯಾನಿಂಗ್ ಯಂತ್ರಗಳು, ಎಕ್ಸ್‌ರೇ, ಡಯಾಲಿಸಿಸ್ ಯಂತ್ರಗಳನ್ನು ಖರೀದಿಸಲಾಯ್ತು.

ಹೀಗೆ ಖರೀದಿಸಿದ ಯಂತ್ರಗಳಿಗೆ ಕಂಪೆನಿಗಳಿಂದ ಬಂದ ಕಮೀಷನ್ನು ಮಂತ್ರಿ ಜೇಬು ಸೇರಿತು. ವಿಚಿತ್ರವೆಂದರೆ ಇಂಥ ಬಹುತೇಕ ಯಂತ್ರೋಪಕರಣಗಳೆಲ್ಲ ಇವತ್ತು ತುಕ್ಕು ಹಿಡಿಯುತ್ತಿವೆ. ಏಕೆಂದರೆ ಇಂಥ ಸೂಕ್ಷ್ಮ ಯಂತ್ರಗಳನ್ನು ನಿಭಾಯಿಸಲು ಬೇಕಾದ ಸಿಬ್ಬಂದಿಗಳನ್ನೇ ಸರ್ಕಾರ ನೇಮಿಸಿಕೊಂಡಿಲ್ಲ.

KHSDRP ಯೋಜನೆಯಡಿ ವಿಶ್ವ ಆರೋಗ್ಯ ಸಂಸ್ಥೆಯಿಂದ (WHO) 660 ಕೋಟಿ ರೂಪಾಯಿಗಳ ಸಾಲ ಪಡೆದು ಖರೀದಿಸಿದ ಇಂಥ ಸೂಕ್ಷ್ಮ ಉಪಕರಣಗಳನ್ನೇನಾದರೂ ಸಾರ್ಥಕವಾಗಿ ಬಳಸಿದ್ದರೆ ಬಡರೋಗಿಗಳ್ಯಾರೂ ಖಾಸಗಿ ಆಸ್ಪತ್ರೆ ಪಾಲಾಗಿ ತಲೆ ಬೋಳಿಸಿಕೊಳ್ಳಬೇಕಾಗಿರಲಿಲ್ಲ.

ಇನ್ನು ಪ್ರತಿಭಾವಂತ ಡಾಕ್ಟರುಗಳಾದರೂ ಹೇಗೆ ಬಡವರ ಸೇವೆ ಮಾಡಲು ಸಾಧ್ಯ? ಕಳೆದ ವರ್ಷ ಲೋಕಸೇವಾ ಆಯೋಗವೇ 815 ವೈದ್ಯಾಧಿಕಾರಿ ಹುದ್ದೆಗೆ ಅಭ್ಯರ್ಥಿಗಳನ್ನು ಆಹ್ವಾನಿಸಿತ್ತು. ದಾರುಣವೆಂದರೆ ಖಾಲಿಯಿದ್ದ ಹುದ್ದೆಗಳ ಅರ್ಧಕ್ಕೂ ಅರ್ಜಿಗಳೇ ಬರಲಿಲ್ಲ. ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡಿದ್ದ 460 ಮಂದಿ ಡಾಕ್ಟರುಗಳನ್ನೇ ಈ ಹುದ್ದೆಗೆಂದು ಆಯ್ದುಕೊಂಡರೆ, ಉಳಿದಂತೆ ನೇಮಕಗೊಂಡಿದ್ದ 150 ಮಂದಿ ಡಾಕ್ಟರುಗಳ ಪೈಕಿ 70 ಮಂದಿ ಕೆಲಸಕ್ಕೇ ಗುಡ್‌ಬೈ ಹೇಳಿ ಎಂ.ಡಿ. ಕೋರ್ಸಿಗೆ ಸೇರಿಕೊಂಡರು.

ಸರ್ಕಾರವೇ ಮೇಲೆ ಬಿದ್ದು ಕೆಲಸ ಕೊಡುತ್ತೇನೆಂದರೂ ಯಾವ ಡಾಕ್ಟರ್‌ಗೂ ಸರ್ಕಾರಿ ವೈದ್ಯನ ಕೆಲಸ ಬೇಕಿಲ್ಲ. ಸಿಬ್ಬಂದಿಗಳೇ ಇಲ್ಲದಿದ್ದರೂ ವಿದೇಶಿ ಕಂಪೆನಿಗಳ ದುಬಾರಿ ಯಂತ್ರಗಳನ್ನು ಅನಗತ್ಯವಾಗಿ ಖರೀದಿಸಿ ಕಮಿಷನ್ ಹೊಡೆಯುವಲ್ಲಿ ಇರುವ ಆಸಕ್ತಿ ಬಡರೋಗಿಗಳಿಗೆ ಸೇವೆ ಕಲ್ಪಿಸುವಲ್ಲಿ ಬಜೆಪಿ ಸರ್ಕಾರಕ್ಕಿಲ್ಲ.

ಪ್ರಾಣ ಕೊಟ್ಟ ಯೋಧನಷ್ಟೇ ಪ್ರಾಣ ಕಾಯೋ ಡಾಕ್ಟರ್ ಮುಖ್ಯವಲ್ಲವೆ?

–ಡಾ. ರವೀಂದ

ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷ ಡಾ. ಎಚ್.ಎನ್. ರವೀಂದ್ರರ ಪ್ರಕಾ ಮುಷ್ಕರದ ನಿರ್ಧಾರ ರಾತ್ರೋರಾತ್ರಿಯೇನೂ ಕೈಗೊಂಡಿದ್ದಲ್ಲ–

2007 ರಿಂದ ಪದೇಪದೇ ಮನವಿ ಮಾಡ್ತಾನೇ ಬಂದಿದ್ದೀವಿ. ನನಗೇ ಗೊತ್ತಿರೋ ಹಾಗೆ ಈತನ ಸುಮಾರು ಹದಿನೇಳು ಮಂದಿ ಸರ್ಕಾರಿ ಡಾಕ್ಟರ್‌ಗಳು ಹೆಪಿಟೈಟಿಸ್ 'ಬಿ' ಸೋಂಕಿನಿಂದ ಸತ್ತಿದ್ದಾರೆ. ಅದ ಕೂಡ ಬಡರೋಗಿಗಳಿಗೆ ಚಿಕಿತ್ಸೆ ಕೊಡಲು ಹೋಗಿ. ಯಾವುದೇ ರಿಸ್ಕ್ ಅಲೋವೆನ್ಸ್ ಇಲ್ಲದೆ ಬಡರೋಗಿಗ ಸೇವೆ ಮಾಡಲು ಹೋಗಿ ಅವರ ರೋಗ ನಮಗಂಟಿ ಸತ್ತರೆ ಸರ್ಕಾರಕ್ಕಿದು ಸಂಬಂಧವೇ ಇಲ್ಲವೇ ದೇಶಕ್ಕಾಗಿ ಪ್ರಾಣ ಕೊಟ್ಟ ಮಿಲ್ಟ್ರಿಯವರಿಗೆ ಏನೆಲ್ಲಾ ಸೌಲಭ್ಯವಿಲ್ಲ? ಅದೇ ಕೆಲಸವನ್ನು ಮಾಡುವ ಸರ್ಕಾ ಡಾಕ್ಟರ್‌ನನ್ನು ಈ ರೀತೀನಾ ನಡೆಸಿಕೊಳ್ಳೋದು?

ಮೊನ್ನೆಯಷ್ಟೇ H1N1 ರೋಗಿಗಳ ಸೋಂಕು ತಗುಲಿ ಇಬ್ಬರು ಸರ್ಕಾರಿ ಡಾಕ್ಟರುಗಳು ಬಲಿಯಾಗಿದ್ದಾ ಖಾಸಗಿ ಆಸ್ಪತ್ರೆಯವರು ಇಂಥ ರೋಗಿಗಳನ್ನು ಮುಟ್ಟಿಯೂ ನೋಡಲ್ಲ. ಅಂಥಾದ್ದರಲ್ಲಿ ಇಷ್ಟೆಲ್ಲಾ ಅಪಾಯ ತಲೆ ಕೊಡುವ ಸರ್ಕಾರಿ ಡಾಕ್ಟರ್‌ಗಳಿಗೆ ಇಷ್ಟೊಂದು ಕಮ್ಮಿ ಸಂಬಳ ಕೊಡೋದಾ? ನಾವೇನು ಮುಷ್ ಮಾಡ್ತಾ ಇದೀವಿ ಅದು ನಿನ್ನೆ ಮೊನ್ನೆ ಇಟ್ಟ ಬೇಡಿಕೆಯೇನಲ್ಲ. ಪದೇಪದೇ ಮುಷ್ಕರ ಮಾಡೋದು ರಾಜೀನಾಮೆ ಕೊಡ್ತೀವಿ ಅನ್ನೋದರಲ್ಲಿ ಯಾವುದೇ ಅರ್ಥವಿಲ್ಲ. ಈ ಸಾರ್ತಿ ಗಟ್ಟಿ ನಿರ್ಧಾರ ಮಾಡಿಬಿಟ್ಟಿದ್ದೀವಿ ಸರ್ಕಾರಕ್ಕೆ ನಮ್ಮಿಂದ ತೊಂದರೆ ಅನ್ನೋದಾದ್ರೆ ದಯವಿಟ್ಟು ನಮ್ಮ ರಾಜೀನಾಮೆ ಒಪ್ಪಿಕೊಳ್ಳಲಿ. ನಾವೇನು ದುಡ್ಡಿನ ಆಸೆಗೆ ಬಿದ್ದು ಈ ನಿರ್ಧಾರ ಮಾಡಿಲ್ಲ. ಸೇವೆಯಿಂದ ಹಿಂಜರಿಯೋದೂ ಇಲ್ಲ. ಸರ್ಕಾರಿ ಕೆಲ ಇಲ್ಲದಿದ್ದರೇನಂತೆ ಸಹಕಾರಿ ಪದ್ಧತಿಯಲ್ಲಿ ಹಳ್ಳಿಗಾಡಿನ ಜನಕ್ಕೆ ಸೇವೆ ಸಲ್ಲಿಸ್ತೀವಿ. ಸಹಕಾರಿ ಪದ್ಧತಿಯ ಆಸ್ಪ ಆರಂಭಿಸ್ತೀವಿ. ಸಹಕಾರಿ ಬ್ಯಾಂಕುಗಳು, ಸಾರಿಗೆ, ವ್ಯವಸಾಯ, ಕೈಗಾರಿಕೆ, ಹಾಲು ಮಾರಾಟ ಇರುವಂ ಸಹಕಾರಿ ಆಸ್ಪತ್ರೆಗಳೂ ಏಕಾಗಬಾರದು?

ಖಂಡಿತಾ ಅದನ್ನು ಸಾಧಿಸಿ ತೋರಿಸ್ತೀವಿ!

ಇದು ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷ ಎಚ್.ಎನ್. ರವೀಂದ್ರ ನೋವಿನಿಂದಲೇ ಹೇಳು ಮಾತು.

ಮಂತ್ರಿಗಳು ಅದಕ್ಕೆ ಹಾಜರಾದರೂ ಆರೋಗ್ಯ ಮಂತ್ರಿ ಶ್ರೀರಾಮುಲು ಬರಲೇ ಇಲ್ಲ. ಅದು ಮಂತ್ರಿಗಳ ಕಾರ್ಯಕ್ಷಮತೆ ಕುರಿತು ಮಾಪನವಾಗಿತ್ತಂತೆ. 'ಯಾಕ್ರೀ ಬರಲಿಲ್ಲ?' ಎಂದು ಮುಖ್ಯಮಂತ್ರಿ ಕೇಳಿದ್ದಕ್ಕೆ ಶ್ರೀರಾಮುಲು 'ನೀವ್ಯಾರ್ರೀ ನನಗೆ ಮಾರ್ಕ್ಸ್ ಕೊಡೋದಕ್ಕೆ...?' ಎಂದು ಕಟ್ಟಾರೋಪ ಹಾಕಿದನಂತೆ!


ಶ್ರೀರಾಮುಲು ಸ್ವಭಾವತಃ ಬಳ್ಳಾರಿಯ ನಟೋರಿಯಸ್ ರೌಡಿ. ನಡುರಸ್ತೆಯಲ್ಲಿ ಕೊಲೆಯಾದ ರೈಲ್ವೇಬಾಬು ಎಂಬ ಮತ್ತೊಬ್ಬ ರೌಡಿ ಈತನ ಚಿಕ್ಕಪ್ಪ, ಸಂಬಂಧಿಕರನ್ನು ಒಬ್ಬೊಬ್ಬರಾಗಿ ಮುಗಿಸುತ್ತಾ ಬಂದ ಶ್ರೀರಾಮುಲು ...ನ ರೌಡಿ ಗ್ಯಾಂಗ್ ಅನ್ನು ...ಟ್ಟುಕೊಂಡೇ ವಂಚಕ ...ನ ರೆಡ್ಡಿಯ ಗಣಿಕಳ್ಳರ ...ನ್ನ ಸ್ಥಾಪನೆಯಾಗಿದ್ದು. ಇಂಥ ಮುಖ್ಯಮಂತ್ರಿಗೇ ರೋಪು ...ನೆಂದರೆ ಇನ್ನು ಆರೋಗ್ಯ ...ಯ ಪಾಡು ಏನಾಗಿರಬೇಡ?

ಆರೋಗ್ಯ ಮಂತ್ರಿಯಾಗಿ ...ಮುಲು ಈತನಕ ಮಾಡಿದ ...ಸಾಧನೆಯೇನು ಗೊತ್ತೆ? ...ಕ ಕಂಡ ಅಪರೂಪದ ನಿಷ್ಠಾ...ಎಎಸ್ ಅಧಿಕಾರಿ ಮದನ್...ಲ್‌ರನ್ನು ಹಠಕ್ಕೆ ಬಿದ್ದು ...ಮಾಡಿದ್ದು!



...ನ್ನೂರು ಕೋಟಿ ರೂಪಾಯಿಗಳ ಎಕ್ಸ್‌ರೇ, ಸ್ಕ್ಯಾನಿಂಗ್ ಮಿಷನ್ ...ದುಬಾರಿ ಯಂತ್ರೋಪಕರಣಗಳ ಖರೀದಿಗೆ ಕೈಯಿಟ್ಟು ಸರಿಸುಮಾರು ...ಕೋಟಿಗಳಷ್ಟು ಕಮೀಷನ್ ಹೊಡೆಯಲು ಯತ್ನಿಸಿದ ಶ್ರೀರಾಮುಲು ...ಕ್ಕೆ ಮದನ್‌ಗೋಪಾಲ್ ಸೊಪ್ಪು ಹಾಕಲಿಲ್ಲ, ಅದೇ ಮದನ್‌ಗೋಪಾಲ್ ...ಮುಳುವಾಯಿತು. ಅಂಥಾ ಕಾರ್ಯದಕ್ಷ ಅಧಿಕಾರಿಗೇ ಈ ...ದರೆ ಇನ್ನು ಆರೋಗ್ಯ ಇಲಾಖೆಯ ಅಳಿದುಳಿದ ಅಧಿಕಾರಿಗಳ ...?

...ಯಡ್ಡಿ ಸರ್ಕಾರದ ಆರೋಗ್ಯ ಇಲಾಖೆಯ ಸದ್ಯದ ದುರ್ಗತಿ. ...ನಾಲ್ಕು ವರ್ಷದಿಂದ ಅಂದರೆ 2005 ರಿಂದಲೇ ತಮ್ಮ ...ಯ ವಿರುದ್ಧ ಸರ್ಕಾರಕ್ಕೆ ಮನವಿ ಕೊಡುತ್ತಲೇ ಬಂದವರು ...ವೈದ್ಯಾಧಿಕಾರಿಗಳು. ಅದೂ ಎಂಥಾ ದುರವಸ್ಥೆಯೆಂದರೆ ...ಕ ಸರ್ಕಾರದ ಒಟ್ಟು 6227 ವೈದ್ಯಾಧಿಕಾರಿಗಳ ...ಲ್ಲಿ ಶೇ. 40 ರಷ್ಟು ಅಂದರೆ 2038 ರಷ್ಟು ಹುದ್ದೆಗಳು ...ಖಾಲಿ ಬಿದ್ದಿವೆ. ಇದಿಷ್ಟೇ ಅಲ್ಲದೇ ಸರಿಸುಮಾರು ...ಷ್ಟು ಸ್ಪೆಷಲಿಸ್ಟ್ ಡಾಕ್ಟರುಗಳ ಹುದ್ದೆಯಲ್ಲಿ ಈ ಗಳಿಗೆಗೂ ...ದ್ದೆಗಳಿಗೆ ವೈದ್ಯರೇ ಇಲ್ಲ. ಇದು ಸರ್ಕಾರಿ ಆಸ್ಪತ್ರೆಗಳನ್ನೇ ...ದ ಗ್ರಾಮೀಣ ಭಾಗದ ಬಡ-ಮಧ್ಯಮ ವರ್ಗದ ...ಕ ಜನರ ದುರಂತ ಕೂಡ.



ಆರೋಗ್ಯ ಸಂಸ್ಥೆ ಅಂದರೆ WHO ಪ್ರಕಾರ ಪ್ರತಿ ...ಬರಿಗೆ ಒಬ್ಬ ವೈದ್ಯಾಧಿಕಾರಿಯಿರಬೇಕು. ಆದರೆ ಕರ್ನಾಟಕದಲ್ಲಿ ...ರ್ಕಾರಿ ಡಾಕ್ಟರ್ ಒಬ್ಬ ಹದಿನಾರು ಸಾವಿರದಷ್ಟು ನಾಗರಿಕರ ಆರೋಗ್ಯ ...ಬೇಕು. ಹಳ್ಳಿಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹೊರತುಪಡಿಸಿ ...ಮಟ್ಟದ ಆಸ್ಪತ್ರೆಗಳನ್ನೇ ಲೆಕ್ಕಕ್ಕಿಟ್ಟರೂ ಆಯಾ ಆಸ್ಪತ್ರೆಗಳಲ್ಲಿ ಇಬ್ಬರೋ ...ಮೂವರೋ ಡಾಕ್ಟರುಗಳಿರುತ್ತಾರೆ. ಒಬ್ಬ ಡಾಕ್ಟರ ರಾತ್ರಿ ಪಾಳಿಯಲ್ಲಿ ...ಮಿಕ್ಕ ಇಬ್ಬರ ಪೈಕಿ ತಲಾ ಡಾಕ್ಟರ್ ಒಬ್ಬ ಪ್ರತಿದಿನಕ್ಕೆ ಕನಿಷ್ಠ ...ಮಂದಿ ಹೊರರೋಗಿಗಳಿಗೆ ಚಿಕಿತ್ಸೆ ಕೊಡಬೇಕು. ಇದು ಸರಾಸರಿ ...

...ರಿ ಡಾಕ್ಟರೊಬ್ಬ ದಿನಕ್ಕೆ ಕನಿಷ್ಠ ಐನೂರು ಮಂದಿಗಾದರೂ ಚಿಕಿತ್ಸೆ ...ಕೆಂದರೆ ಎಲ್ಲಿಂದ ಸಾಧ್ಯ? ಗ್ರಾಮಾಂತರ ಭಾಗದ ...ದ ಜನ ಇವತ್ತಿಗೂ ಸರ್ಕಾರಿ ಆಸ್ಪತ್ರೆಗಳನ್ನೇ ಅವಲಂಬಿ... ಸರ್ಕಾರಕ್ಕಿದು ಪ್ರಜೆಗಳ ಸಾವು-ಬದುಕಿನ ...ಗಬೇಕಿತ್ತು.



...ದುರಂತವೆಂದರೆ ಶೇ. 40ರಷ್ಟು ವೈದ್ಯಾಧಿಕಾರಿ ...ಖಾಲಿ ಬಿದ್ದಿವೆಯಾದ್ದರಿಂದ ಪ್ರತಿಯೊಬ್ಬ ಸರ್ಕಾರಿ ...ರಿಗಲಿಗೆ ಎರಡೋ-ಮೂರೋ ಹೆಚ್ಚುವರಿ ಆಸ್ಪತ್ರೆಗಳನ್ನು ...ಬೇಕಾದ ಭಾರ ಬಿದ್ದಿದೆ. ದಿನಕ್ಕೆ ಮುನ್ನೂರಷ್ಟು ...ನ್ನು ನೋಡಬೇಕಾ ಅಥವಾ ಅಧಿಕ ಹೊರೆಯ ...ನ್ನು ಸಂಭಾಳಿಸಬೇಕಾ?

...ತ ಅಗತ್ಯವಿರುವಷ್ಟು ಡಾಕ್ಟರುಗಳನ್ನು ನೇಮಕಾತಿ ...ಕೊಳ್ಳಬೇಕೆಂದರೆ ಸರ್ಕಾರಿ ಡಾಕ್ಟರಿಕೆಗೆ ವೈದ್ಯರೆ ಸಿಗುತ್ತಿಲ್ಲ, ಸರ್ಕಾರಿ ...ಹುದ್ದೆಯೆಂದರೇನೇ ಅಸಹ್ಯವಾಗಿಬಿಟ್ಟಿದೆ. ಅದಕ್ಕೆ ಮೂಲಕಾರಣ ...ಬಳ. ತಿಂಗಳೊಂದಕ್ಕೆ ಹದಿನೆಂಟೂವರೆ ಸಾವಿರದಷ್ಟು ಪುಡಿ ...ಯಾವ ಡಾಕ್ಟರ್ ತಾನೇ ಬರುತ್ತಾನೆ?

...ಪ್ರದೇಶಗಳ ಪ್ರತಿಷ್ಠಿತ ಆಸ್ಪತ್ರೆಯೊಂದರಲ್ಲಿ ಸಣ್ಣದೊಂದು ವಿಸಿಟಿಗೇ ...ರ ರೂಪಾಯಿ ಕೊಡುತ್ತಾರೆ. ಈ ಥರದ ಎರಡೋ ಮೂರೋ ...ನ್ನು ಹೋರಿಕೊಂಡರೆ ನಿಷ್ಣಾತ ಡಾಕ್ಟರ್ ಒಬ್ಬ ತಿಂಗಳೊಂದಕ್ಕೆ ಲಕ್ಷ ...ಪಡಿಯಬಲ್ಲ, ಇನ್ನು ವಿದೇಶಿ ಆಸ್ಪತ್ರೆಗಳ ಆಕರ್ಷಣೆಯೇ ...ವಾಗ ಯಾವ ಡಾಕ್ಟರ್ ತಾನೇ ತಿಂಗಳೊಂದಕ್ಕೆ ಹದಿನೆಂಟೂವರೆ ...ರೂಪಾಯಿ ಸಂಬಳಕ್ಕೆ ಬರುತ್ತಾನೆ?

...ನಸೆಂದರೆ ಕರ್ನಾಟಕ ಸರ್ಕಾರದ ಆಸ್ಪತ್ರೆಗಳ ಪೈಕಿ ವೈದ್ಯಕೀಯ ...ವೈದ್ಯರಿಗೆ ಒಂದು ರೀತಿಯ ಸಂಬಳವಾದರೆ ಆರೋಗ್ಯ ಮತ್ತು ...ಕಲ್ಯಾಣ ಇಲಾಖೆಯ ಡಾಕ್ಟರುಗಳಿಗೆ ಮತ್ತೊಂದು ರೀತಿಯ ...

ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಿಂತಲೂ ವೈದ್ಯಕೀಯ ಶಿಕ್ಷಣ ಇಲಾಖೆಯ ಡಾಕ್ಟರುಗಳ ಸಂಬಳ ಎರಡೂವರೆ ಪಟ್ಟು ಹೆಚ್ಚು, ಅದಕ್ಕೆ ಕಾರಣವಾದದ್ದು ಮೊನ್ನೆ ನಡೆದ ಸಚಿವ ಸಂಪುಟ ಸಭೆಯ ನಿರ್ಣಯ. ಒಂದೇ ಕ್ಯಾಬಿನೆಟ್ ಸಭೆಯಲ್ಲಿ ಎರಡು ರೀತಿಯ ವಿಚಿತ್ರ ನಿರ್ಣಯಗಳನ್ನು ಯಡ್ಡಿ ಸಂಪುಟ ಕೈಗೊಂಡಿತ್ತು, ಅದೂ ಎಂಥಾ ಹುಚ್ಚಾಟವೆಂದರೆ ವೈದ್ಯಕೀಯ ಶಿಕ್ಷಣ ಇಲಾಖೆಯ ಡಾಕ್ಟರ್ ಒಬ್ಬನಿಗೆ ತಿಂಗಳಿಗೆ 44 ಸಾವಿರ ರೂಪಾಯಿಗಳಷ್ಟು ಕನಿಷ್ಠ ವೇತನವಾದರೆ, ಅದೇ ಕೆಲಸ ಮಾಡುವ ಆರೋಗ್ಯ ಇಲಾಖೆಯ ಡಾಕ್ಟರ್ ಕೇವಲ ಹದಿನೆಂಟೂವರೆ ಸಾವಿರಕ್ಕೆ ತೃಪ್ತಿ ಪಟ್ಟುಕೊಳ್ಳಬೇಕು.

ಹೀಗೆ ವೈದ್ಯಕೀಯ ಶಿಕ್ಷಣ ಇಲಾಖೆಯ ಡಾಕ್ಟರ್ ಹುದ್ದೆಗಳನ್ನು ಯುಜಿಸಿ ವೇತನ ಶ್ರೇಣಿಗೆ ಏರಿಸಿದ್ದರಿಂದಾಗಿ ಹೆಚ್ಚುವರಿ ಸಂಬಳದ ಬಾಬತ್ತೆಂದು ರಾಜ್ಯ ಸರ್ಕಾರ 191 ಕೋಟಿ ರೂಪಾಯಿಗಳಷ್ಟನ್ನು ತೆಗೆದಿಟ್ಟಿತು. ಇದು ಕೇಂದ್ರ ಸರ್ಕಾರದ ಪಾಲಿನ ಶೇ.20ರಷ್ಟು ಮಾತ್ರ. ಅದೂ 2006ರಿಂದಲೇ ಹಿಂದಿನ ಬಾಕಿ ಸಂಬಳವನ್ನೂ ಸೇರಿಸಿ ಕೊಡಲು ರಾಜ್ಯ ಸರ್ಕಾರ ನಿರ್ಧರಿಸಿತ್ತು. ಇಂಥ ಹನ್ನೊಂದೂವರೆ ಸಾವಿರ ಮಂದಿ ವೈದ್ಯಕೀಯ ಉಪನ್ಯಾಸಕರ ಸಂಬಳವನ್ನು ಏಕಾಏಕಿ ಹೆಚ್ಚಿಸಿದ ಯಡ್ಡಿ ಸರ್ಕಾರ ಅದಕ್ಕೆ ಕೊಟ್ಟ ಕಾರಣ ಅವರೆಲ್ಲ ಮೆಡಿಕಲ್ ಕಾಲೇಜುಗಳ ಬೋಧಕ ಸಿಬ್ಬಂದಿಯೆಂದು.

ಮೆಡಿಕಲ್ ಕಾಲೇಜುಗಳಲ್ಲಿ ಪಾಠ ಮಾಡುವ ಇಂಥ ಡಾಕ್ಟರ್‌ಗಳದು ಆರಾಮದ ಕೆಲಸ. ಹಳ್ಳಿಗಳನ್ನು ಸುತ್ತಬೇಕಿಲ್ಲ, ತಾಲ್ಲೂಕಿನಿಂದ ಎತ್ತಂಗಡಿಯಾಗುವ ತಾಪತ್ರಯವಿಲ್ಲ, ಮೆಡಿಕೋ ಲೀಗಲ್ ಕೇಸುಗಳಿಗೆಂದು ಪೊಲೀಸ್ ಠಾಣೆ, ಕೋರ್ಟ್‌ಗೆಂದು ಅಲೆಯಬೇಕಿಲ್ಲ, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ, ಪೋಸ್ಟ್ ಮಾರ್ಟಂ ತಲೆಬಿಸಿ, ಕೋರ್ಟಿಗೆ ಹೋಗಿ ಸಾಕ್ಷಿಹೇಳಬೇಕಾದ ಸಂಕಟ ಇತ್ಯಾದಿ ಯಾವೊಂದು ತಲೆಬಿಸಿಗೂ ಈಡಾಗದೇ ಆರೋಗ್ಯ ಇಲಾಖೆಯ ಡಾಕ್ಟರ್‌ಗಳಿಗಿಂತಲೂ ಹೆಚ್ಚು ಸಂಬಳ ಪಡೆಯುವ ವೈದ್ಯಕೀಯ ಶಿಕ್ಷಣ ಇಲಾಖೆಯ ವೈದ್ಯರುಗಳ ಪರ ಸರ್ಕಾರ ಇನ್ನಿಲ್ಲದ ಅಕ್ಕರೆ ತೋರಿಸಿತ್ತು.

ಯಾವತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಡಾಕ್ಟರುಗಳ ಸಂಬಳ ಹೆಚ್ಚಾಯಿತೋ ಸಹಜವಾಗೇ ಆರೋಗ್ಯ ಇಲಾಖೆಯ ಡಾಕ್ಟರುಗಳು ಹೆಚ್ಚಿಗೆ ಸಂಬಳದ ತಮ್ಮ ಹಳೇ ಬೇಡಿಕೆಯನ್ನು ಪುನರುಚ್ಚರಿಸಿದ್ದಾರೆ. ಅದು 2005ರಿಂದ ಕೇಳಿಕೊಂಡೇ ಬಂದಿದ್ದ ಬೇಡಿಕೆ. ಇದೇ ಹೊತ್ತಿಗೆ ಸರಿಯಾಗಿ ಆರೋಗ್ಯ ಇಲಾಖೆಯಲ್ಲಿದ್ದ ಸರಿಸುಮಾರು 191 ಮಂದಿ ನಿಷ್ಣಾತ ಡಾಕ್ಟರುಗಳು ಹೆಚ್ಚಿನ ಸಂಬಳದ ಆಕರ್ಷಣೆಗೆ ಬಿದ್ದು ವೈದ್ಯಕೀಯ ಶಿಕ್ಷಣ ಇಲಾಖೆ ಸೇರಿಕೊಂಡರು. ಇಲಾಖಾ ಮುಖ್ಯಸ್ಥ ಮದನ್‌ಗೋಪಾಲ್ ರಜೆ ಮೇಲಿದ್ದ ಸಂದರ್ಭವನ್ನೇ ಹೊಂಚುಹಾಕಿದ ಯಡ್ಡಿ ಈ ಎಲ್ಲಾ ನುರಿತ ವೈದ್ಯರುಗಳ ಸ್ಥಾನಾಂತರಕ್ಕೆ ಸಚಿವ ಸಂಪುಟದ ಮಂಜೂರಾತಿ ಕೊಡಿಸಿಕೊಟ್ಟಿದ್ದು, ಆರೋಗ್ಯ ಇಲಾಖೆಯ ನಿಸ್ಸಹಾಯಕ ಡಾಕ್ಟರ್ ಹತಾಶೆಯನ್ನು ಇನ್ನಷ್ಟು ಹೆಚ್ಚಿಸಿತು. ಆರೋಗ್ಯ ಇಲಾಖೆ ಸೇರಿ ತಿಂಗಳಿಗೆ ಹದಿನೆಂಟೂವರೆ ಸಾವಿರ ರೂಪಾಯಿ ಸಂಬಳ ಪಡೆದು ನಿವೃತ್ತಿಯ ಹೊತ್ತಿಗೆ ಇಲಾಖೆಯ ನಿರ್ದೇಶಕನಾದರೂ ಕೊನೆಗೆ ಬರುವುದು ಕೇವಲ 31 ಸಾವಿರ ರೂಪಾಯಿಯ ಸಂಬಳ ಮಾತ್ರ.

ಅದೇ ವೈದ್ಯಕೀಯ ಶಿಕ್ಷಣ ಇಲಾಖೆ ಸೇರಿಕೊಂಡರೆ ಮೊದಲ ಸಂಬಳವೇ 35 ಸಾವಿರದಷ್ಟಿರುತ್ತದೆ. ಅಂದರೆ ಆರೋಗ್ಯ ಇಲಾಖೆಯ ಪರಮಾಧಿಕಾರಿಯಾದ ನಿರ್ದೇಶಕನಿಗೆ ವೈದ್ಯಕೀಯ ಶಿಕ್ಷಣ ಇಲಾಖೆಗೆ ಎಂಬಿಬಿಎಸ್ ಮುಗಿಸಿ ಹೊಸದಾಗಿ ಸೇರಿದ ಡಾಕ್ಟರ್‌ಗಿಂತಲೂ ಕಮ್ಮಿ ಸಂಬಳ!

ಇಂಥ ಸರ್ಕಾರಿ ಹುಚ್ಚಾಟದ ವಿರುದ್ಧ ರೋಸತ್ತ ಸರ್ಕಾರಿ ವೈದ್ಯಾಧಿಕಾರಿಗಳ ಬೇಡಿಕೆ ನ್ಯಾಯಬದ್ಧವೆಂದೇ ಹೈಕೋರ್ಟ್ ತೀರ್ಪಿತ್ತಿದೆ. ತಾಲ್ಲೂಕಿನಿಂದ ತಾಲ್ಲೂಕಿಗೆ ಎತ್ತಂಗಡಿಯಾಗಿ ಹಳ್ಳಿಭಾಗದ ಬಡವರ ಸೇವೆ ಮಾಡುವ ಡಾಕ್ಟರುಗಳ ಮಕ್ಕಳ ಶಿಕ್ಷಣದ ಪ್ರಶ್ನೆಯೇನು? ಯಾರೋ ರೋಗಿಯೊಬ್ಬ ಹತ್ತೋ ಇಪ್ಪತ್ತೋ ರೂಪಾಯಿ ಭಕ್ಷೀಸು ಕೊಟ್ಟರೆ ಅದನ್ನೇ ಲಂಚವೆಂದು ಲೋಕಾಯುಕ್ತ ಹಿಡಿದು ಜೈಲಿಗೆ ದಬ್ಬುತ್ತದೆ. ಕನಿಷ್ಠ ಮಕ್ಕಳ ವಿದ್ಯಾಭ್ಯಾಸಕ್ಕಾದರೂ ವ್ಯವಸ್ಥೆ ಮಾಡಬೇಕೆಂದರೆ ಈ ಸಂಬಳದಲ್ಲಿ ಹೇಗೆ ಸಾಧ್ಯ? ವೈದ್ಯಕೀಯ ಶಿಕ್ಷಣ ಇಲಾಖೆಯ ಡಾಕ್ಟರ್‌ಗಳಿಗಿಂತಲೂ ನಮ್ಮದು ಕಷ್ಟದ ಕೆಲಸ. ಹಳ್ಳಿಗಾಡಿನ ಬಡರೋಗಿಗಳ ಸೇವೆ ಮಾಡುವ ನಮಗೆ ಹೊಟ್ಟೆಗಾಗುವಷ್ಟು ಸಂಬಳ ಕೊಡದಿದ್ದರೆ ಇಂಥ ಡಾಕ್ಟರಿಕೆ ಮಾಡಿ ಏನು ಪ್ರಯೋಜನ?


ಇದು ಸರ್ಕಾರಿ ಡಾಕ್ಟರ್‌ಗಳು ಕೇಳುವ ಪ್ರಶ್ನೆ.

ವೈದ್ಯಕೀಯ ಶಿಕ್ಷಣದ ಡಾಕ್ಟರ್‌ಗಳಿಗೆಂದು 191 ಕೋಟಿ ರೊಕ್ಕ ಎತ್ತಿಡುವ ಸರ್ಕಾರ ಅದರ ಅರ್ಧದಷ್ಟನ್ನಾದರೂ ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳಿಗೆ ಎತ್ತಿ ಕೊಟ್ಟಿದ್ದರೆ ಡಾಕ್ಟರುಗಳೇಕೆ ಬೀದಿಗಿಳಿಯುತ್ತಿದ್ದರು?

ಇದು ಮಠಾಧಿಪತಿಗಳಿಗೆಂದು ಯಡ್ಡಿ ಸರ್ಕಾರ ಕೊಟ್ಟ ದುಡ್ಡಿನ ಅರ್ಧದಷ್ಟು ಮಾತ್ರ. ಮಕ್ಕಳಿಗೆ ಆರೆಸ್ಸೆಸ್ ವಿಷ ಸಾಹಿತ್ಯ ಖರೀದಿಸಲು ದುಡ್ಡಿದೆ. ಬೆಂಗಳೂರಿಗೆ ಬೇಡವೆಂದರೂ ಅನಗತ್ಯ ಮೇಲ್ ಸೇತುವೆ ನಿರ್ಮಿಸಿ ಕಳ್ಳಬಿಲ್ಲು ಹೊಡೆಯಲು ಸಾವಿರಾರು ಕೋಟಿ ಕೊಡುತ್ತದೆ. ಕೋಟಿಗಟ್ಟಲೇ ಬಡಬಗ್ಗರ ಪ್ರಾಣ ಕಾಯುವ ಡಾಕ್ಟರ್‌ಗಳ ಸಂಬಳಕ್ಕೆ ಮಾತ್ರ ದುಡ್ಡಿಲ್ಲವೆ?

ನೆರೆಬಂದು ಜನ ಸಾಯುತ್ತಿದ್ದರೆ, ವೈದ್ಯರುಗಳು ಬೀದಿಗಿಳಿದು ಬಾಯಿಬಡಕೊಳ್ಳುತ್ತಿದ್ದರೆ, ಬಡರೋಗಿಗಳು ವೈದ್ಯರಿಲ್ಲದೇ ನರಳುತ್ತಿದ್ದರೂ ಲೆಕ್ಕಿಸದೇ ಆರೆಸ್ಸೆಸ್ ಪಾಠಕ್ಕೆ ಕುಂತ ಯಡ್ಡಿ ಸಂಪುಟದ ಮಂತ್ರಿಗಳಿಗೆ ಮನುಷ್ಯತ್ವದ ಪಾಠ ಕಲಿಸುವರ್‍ಯಾರು?

● ರಾ. ಸೋಮನಾಥ್



ಉಳುವವ ರೈತ, ಒಡೆಯ ರಾಜ್ಯಪಾಲ!

ರಾಜ್ಯದ 30 ಸಾವಿರ ಎಕರೆ ಭೂಮಿ ರಾಜ್ಯಪಾಲರ ಹೆಸರಲ್ಲಿದೆ!

ಆ ಭೂಮಿಯಲ್ಲಿ ಉಳುಮೆ ಮಾಡಿ ಬದುಕುತ್ತಿರುವ ಸಾವಿರಾರು ಬಡ ಕುಟುಂಬಗಳು ದಶಕದಿಂದ ಅತಂತ್ರ ಸ್ಥಿತಿಯಲ್ಲಿವೆ. ಬರಡು ಭೂಮಿಯನ್ನು ತಿದ್ದಿ ತೀಡಿ ಕೃಷಿಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಿಕೊಂಡು ಬದುಕು ಸಾಗಿಸುವ ಈ ಬಡ ರೈತ ಕುಟುಂಬಗಳಿಗೆ ಆ ಭೂಮಿಯ ಮಾಲೀಕತ್ವದ ಹಕ್ಕಿಲ್ಲ, ಗೇಣಿ ಕಾಯ್ದೆಯ ಲಾಭ ಇವರ್‍ಯಾರಿಗೂ ದಕ್ಕಲೇ ಇಲ್ಲ, ಇವತ್ತಿಗೂ ಯಾವ ಬ್ಯಾಂಕೂ ಇವರಿಗೆ ಕೃಷಿ ಸಾಲ ನೀಡುತ್ತಿಲ್ಲ, ಇವತ್ತೋ ನಾಳೆಯೋ ತಮ್ಮ ಭೂಮಿ ಕೈಬಿಟ್ಟು ಹೋಗಬಹುದೆಂಬ ಆತಂಕ ಬೇರೆ.

ಭೂ-ವಿದ್ಯಾದಾನದಡಿ ಶಾಲೆಗಳಿಗೆಂದು ದಾನ ಮಾಡಲಾದ ಭೂಮಿ ಖಾಲಿ ಬಿದ್ದಾಗ ಅದನ್ನು ಬಡರೈತರಿಗೆ, ಭೂರಹಿತರಿಗೆ ಉಳುಮೆ ಮಾಡಲು ನೀಡಲಾಗಿತ್ತು, 50 ರ ದಶಕದ ಆರಂಭವದು. ದೇಶದೆಲ್ಲೆಡೆ ವಿನೋಬಾ ಭಾವೆಯವರ ಭೂದಾನ ಚಳವಳಿ ಚಾಲ್ತಿಯಲ್ಲಿತ್ತು, 1952-53 ರಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಕೆಂಗಲ್ ಹನುಮಂತಯ್ಯ ಭೂ-ವಿದ್ಯಾದಾನ ಎಂಬ ಕಾರ್ಯಕ್ರಮ ಶುರು ಮಾಡಿದರು. ಶ್ರೀಮಂತ ರೈತರು ಸುಮಾರು 50 ಸಾವಿರ ಎಕರೆ ಜಮೀನುಗಳನ್ನು ವಿವಿಧ ಶಾಲೆಗಳಿಗೆ ನೀಡಿದರು. ಹಳೆ ಮೈಸೂರು ಭಾಗ, ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಭಾಗಗಳಲ್ಲಿ ಈ ಕಾರ್ಯಕ್ರಮ ಜನಪ್ರಿಯವಾಗಿತ್ತು. ಹಾಗೆ ಬಂದ ಜಮೀನಿನಲ್ಲಿ ಶಾಲೆ, ಆಟದ ಮೈದಾನ ನಿರ್ಮಿಸುವ ಯೋಜನೆ ಇತ್ತು. ಅದಾಗಿತ್ತು, ಆದರೆ ಬಹುತೇಕ ಶ್ರೀಮಂತ ಜಮೀನ್ದಾರರು ಊರಿಂದ ದೂರವಿರುವ ಜಮೀನನ್ನು, ಗೇಣಿದಾರರಿಂದ ಬಿಡಿಸಿಕೊಳ್ಳಲಾಗದ ಜಮೀನುಗಳನ್ನು ನೀಡಿದ್ದರು. ಇದರಿಂದಾಗಿ, 50 ಸಾವಿರ ಎಕರೆ ಪೈಕಿ ಕೇವಲ 20 ಸಾವಿರ ಎಕರೆ ಮಾತ್ರ ಶಾಲೆ, ಆಟದ ಮೈದಾನ ನಿರ್ಮಾಣಕ್ಕೆ ವಿನಿಯೋಗವಾಯ್ತು, ಉಳಿದ 30 ಸಾವಿರ ಎಕರೆ ಭೂಮಿಯನ್ನು ಭೂರಹಿತರಿಗೆ ಸಾಗುವಳಿ ಮಾಡಲು ನೀಡಿ, ವರ್ಷಕ್ಕೆ ಇಂತಿಷ್ಟು ದೇಣಿಗೆಗಳನ್ನು ಶಾಲೆಗಳಿಗೆ ನೀಡಲು ಹೇಳಲಾಯ್ತು, ಅದರಂತೆ ಬಡರೈತರು ಇಂದಿನವರೆಗೂ ಮಾಡಿಕೊಂಡು ಬಂದಿದ್ದಾರೆ.

1974 ರಲ್ಲಿ ದೇವರಾಜ ಅರಸು ಅವರು ಜಾರಿಗೆ ತಂದ ಭೂಸುಧಾರಣಾ ಕಾನೂನಿನಿಂದ ಈ ಗೇಣಿದಾರ ಕುಟುಂಬಗಳಿಗೆ ಪ್ರಯೋಜನ ಸಿಗಲೇ ಇಲ್ಲ, ಅಂದರೆ ಆಗಲೇ ಇವರಿಗೆ ಭೂಮಿಯ ಮಾಲೀಕತ್ವ ಸಿಗಬೇಕಿತ್ತು. ಆದರೆ ಕಾನೂನು ತಜ್ಞರ ಅಲಕ್ಷದಿಂದಾಗಿ ಅದು ತಪ್ಪಿಹೋಯ್ತು. ಮೊದಲು ಮೈಸೂರು ರಾಜಪ್ರಭುಗಳ ಹೆಸರಲ್ಲಿದ್ದ ಈ ಭೂಮಿಯ ಮಾಲೀಕತ್ವ ಕರ್ನಾಟಕ ರಾಜ್ಯವಾದಾಗ ರಾಜ್ಯಪಾಲರ ಹೆಸರಿಗೆ ವರ್ಗಾವಣೆಗೊಂಡಿತು.

1996 ರಲ್ಲಿ ಶಿಕ್ಷಣ ಸಚಿವರಾಗಿದ್ದ ಗೋವಿಂದೇಗೌಡರು ಹೊರಡಿಸಿದ ಸುತ್ತೋಲೆಯೊಂದು ಈ ಬಡ ರೈತರನ್ನು ಅತಂತ್ರ ಸ್ಥಿತಿಗೆ ದೂಡಿಬಿಟ್ಟಿತು. 'ಭೂ-ವಿದ್ಯಾದಾನ ಕಾರ್ಯಕ್ರಮದಡಿ ಶಾಲೆಗಳಿಗೆಂದು ನೀಡಿರುವ ಭೂಮಿ ಬಳಕೆ ಆಗಿರದಿದ್ದರೆ ಅಂತಹ ಭೂಮಿಯನ್ನು ಹರಾಜು ಹಾಕಿ ಬಂದ ದುಡ್ಡಲ್ಲಿ ಶಾಲೆಗಳನ್ನು ಸುಧಾರಣೆ ಮಾಡಿ' ಎಂದು ಸುತ್ತೋಲೆ ಹೇಳಿತ್ತು. ಈ ಸುತ್ತೋಲೆ ಬಳಸಿಕೊಂಡ ಅನೇಕ ಶಾಲಾ ಸುಧಾರಣಾ ಸಮಿತಿಗಳು ಬಡರೈತರಿಂದ ಭೂಮಿ ಕಿತ್ತುಕೊಂಡು ಮಾರಿದವು. ಈಗಲೂ ಅನೇಕ ಶಾಲಾ ಸುಧಾರಣಾ ಸಮಿತಿಗಳು ಈ ಸುತ್ತೋಲೆ ಮುಂದೊಡ್ಡಿ ಬಡ ಗೇಣಿದಾರರನ್ನು ಬೆದರಿಸುತ್ತಿವೆ.

ಈ ಎಲ್ಲ ಗೇಣಿದಾರರು ಸೇರಿ ಕಡಿದಾಳು ಶಾಮಣ್ಣ, ಕಲ್ಲೂರು ಮೇಘರಾಜರ ನೇತೃತ್ವದಲ್ಲಿ 'ರಾಜ್ಯ ಭೂ-ವಿದ್ಯಾದಾನ ಶಾಲಾ ಜಮೀನು ಗೇಣಿ ರೈತರ ಹೋರಾಟ ಸಮಿತಿ' ರಚಿಸಿಕೊಂಡು ನ್ಯಾಯ ಪಡೆಯಲು ನಿರ್ಧರಿಸಿದರು. 2002 ರಲ್ಲಿ ಆಗಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರು ಈ ಗೇಣಿದಾರರ ಮನವಿಗೆ ಸ್ಪಂದಿಸಿ ಅಂದಿನ ಸಮಾಜ ಕಲ್ಯಾಣ ಸಚಿವ ಕಾಗೋಡು ತಿಮ್ಮಪ್ಪ, ಶಿಕ್ಷಣ ಸಚಿವ ಎಚ್. ವಿಶ್ವನಾಥ್ ನೇತೃತ್ವದ ಸಮಿತಿ ರಚಿಸಿದರು. ಈ ಸಮಿತಿ ಅಧ್ಯಯನ ಮಾಡಿ, ಗೇಣಿದಾರರಿಗೆ ಮಾಲೀಕತ್ವವನ್ನು ವರ್ಗಾಯಿಸಬೇಕೆಂದು ವರದಿ ನೀಡಿತು. ಅಷ್ಟೊತ್ತಿಗೆ ಚುನಾವಣೆ ಬಂದು ಈ ವರದಿ ಜಾರಿಗೆ ಬರಲೇ ಇಲ್ಲ, ಮುಂದೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಈ ವಿಷಯ ಚರ್ಚೆಗೆ ಬಂದಾದರೂ, ಆ ಸರ್ಕಾರವೂ ಬಿದ್ದು ಹೋಗಿದ್ದರಿಂದ ಮತ್ತೆ ನನೆಗುದಿಗೆ ಬಿತ್ತು.


ರೈತರ ಹೆಸರಲ್ಲಿ ಪ್ರಮಾಣವಚನ ಸ್ವೀಕರಿಸಿದ ಯಡಿಯೂರಪ್ಪ ಇಲ್ಲಿವರೆಗೆ ರೈತರಿಗೆ ಪ್ರಯೋಜನವಾಗುವ ಒಂದು ಕೆಲಸವನ್ನೂ ಮಾಡಿಲ್ಲ. ಈಗಲಾದರೂ ಈ ಗೇಣಿದಾರರಿಗೆ ಅವರು ಉಳುವ ಭೂಮಿಯ ಮಾಲೀಕತ್ವವನ್ನು ಅವರಿಗೇ ವರ್ಗಾಯಿಸುವ ಕೆಲಸ ಮಾಡಲಿ.

● ಮಲ್ಲಿ

ಶಿಕಾರಿಪುರ ಜಿಲ್ಲೆ ಕುತಂತ್ರ; ಶಿವಮೊಗ್ಗೆಗೆ ಯಡ್ಡಿ ದ್ರೋ

'ಅಲ್ಪನಿಗೆ ಐಶ್ವರ್ಯ ಸಿಕ್ಕರೆ ಅರ್ಧ ರಾತ್ರೀಲಿ ಕೊಡೆ ಹಿಡಿದನಂತೆ' ಎಂಬ ಗಾದೆಯಂತೆ ನಮ್ಮ ಮುಖ್ಯಮಂತ್ರಿ ಯಡಿಯೂರಪ್ಪ ಹೇಳಿಮಾಡಿಸಿದ ವ್ಯಕ್ತಿ. ಹತ್ತಾರು ವರ್ಷಗಳಿಂದ ಮುಖ್ಯಮಂತ್ರಿ ಗಾದಿಯ ಮೇಲೆ ಕಣ್ಣಿಟ್ಟು ಚಾತಕಪಕ್ಷಿಯಂತೆ ಕಾದಿದ್ದ ಅವರಿಗೆ ಕೊನೆಗೂ ಅದು ದಕ್ಕಿದ್ದು ಅಲ್ಪನಿಗೆ ಐಶ್ವರ್ಯ ಬಂದಂತೆಯೇ ಆಗಿದೆ. ಅದೃಷ್ಟಕ್ಕೆ ಬಹಳ ವರ್ಷಗಳ ನಂತರ ಸಿಕ್ಕ ಈ ಅಧಿಕಾರ ಬಹಳ ದಿನ ಉಳಿಯುತ್ತೆ ಎಂಬ ಗ್ಯಾರಂಟಿಯಾಗಲಿ, ಮುಂದಿನ ಚುನಾವಣೆಯ ನಂತರ ಮತ್ತೆ ಸಿಗುತ್ತದೆ ಎಂಬ ವಿಶ್ವಾಸವಾಗಲಿ ಯಡ್ಡಿಗೆ ಇಲ್ಲ. ಏಕೆಂದರೆ, ಅವರು ಮುಖ್ಯಮಂತ್ರಿ ಕುರ್ಚಿಗೇರಿದಾಗಿನಿಂದಲೂ ಅವರ ಕಾಲೆಳೆಯುತ್ತಿರುವವರ ಸಂಖ್ಯೆ ದಿನದಿಂದದಿನಕ್ಕೆ ಬೆಳೆಯುತ್ತಲೇ ಇದೆ. ಯಾವಾಗ ಯಡಿಯೂರಪ್ಪ ಕುರ್ಚಿಯಿಂದ ನೆಲಕ್ಕೆ ಬಿದ್ದು ಗಾಯ ಮಾಡಿಕೊಳ್ಳುತ್ತಾರೋ ಗೊತ್ತಿಲ್ಲ. ಈ ವಿಚಾರವನ್ನು ಚೆನ್ನಾಗಿ ಅರಿತಿರುವ ಅವರು ಅಧಿಕಾರ ಕೈಜಾರುವ ಮೊದಲೇ ಸಾಧ್ಯವಿರುವುದನ್ನೆಲ್ಲಾ ಮಾಡಿಕೊಳ್ಳಲು ಹಗಲಿರುಳೂ ಶ್ರಮಿಸುತ್ತಿದ್ದಾರೆ. ಬೆಂಗಳೂರಿನ ಸಾಮ್ರಾಜ್ಯವನ್ನು ಆಳುವುದಕ್ಕೆ ತನ್ನ ಮಗ ವಿಜಯೇಂದ್ರನನ್ನು ಬಿಟ್ಟಿರುವುದು; ಶಿಕಾರಿಪುರ, ಶಿವಮೊಗ್ಗಗಳಲ್ಲಿ ತಳ ಭದ್ರ ಮಾಡಿಕೊಂಡು ಲೂಟಿ ಹೊಡೆಯುವುದಕ್ಕೆ ಇನ್ನೊಬ್ಬ ಮಗ ರಾಘವೇಂದ್ರನನ್ನು ಬಿಟ್ಟಿರುವುದು; ತಾವೇ ನೂರಾರು ಡೀಲ್‌ಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಗುಳುಂ ಮಾಡುತ್ತಿರುವುದು; ಸರ್ಕಾರದ ಎಲ್ಲಾ ಆಯಕಟ್ಟಿನ ಜಾಗಗಳಲ್ಲಿ ತಮ್ಮ ಕುಲಬಾಂಧವರನ್ನು, ತನಗೆ ನಿಷ್ಠೆಯಿಂದ ಸೇವೆ ಸಲ್ಲಿಸುವ ಅಧಿಕಾರಿಗಳನ್ನು ತುಂಬಿರುವುದು- ಎಲ್ಲವೂ ಈ ಬೃಹತ್ ಯೋಜನೆಯ ಅವಿಭಾಜ್ಯ ಭಾಗಗಳೇ.

ಈಗ ಇದಕ್ಕೆ ಇತ್ತೀಚಿನ ಸೇರ್ಪಡೆ ಎಂದರೆ ತಮ್ಮ ಸ್ವಕ್ಷೇತ್ರ ಹಾಗೂ ಸದ್ಯ ಶಿವಮೊಗ್ಗ ಜಿಲ್ಲೆಯಲ್ಲಿ ತಾಲ್ಲೂಕು ಕೇಂದ್ರವಾಗಿರುವ ಶಿಕಾರಿಪುರವನ್ನು ಜಿಲ್ಲಾ ಕೇಂದ್ರವನ್ನಾಗಿ ಪರಿವರ್ತಿಸಲು ಹೊರಟಿರುವುದು! ಹೌದು ಸದ್ಯದಲ್ಲೇ ಶಿವಮೊಗ್ಗ ಜಿಲ್ಲೆ ಮತ್ತೆ ಒಡೆಯಲಿದೆ. ಶಿಕಾರಿಪುರ ಕೇಂದ್ರವಾಗಿರುವ ಹೊಸ ಜಿಲ್ಲೆ ಅಸ್ತಿತ್ವಕ್ಕೆ ಬರಲಿದೆ. ಎಲ್ಲವೂ ಅವರೆಣಿಸಿದಂತೆಯೇ ನಡೆದರೆ ಸದ್ಯವೇ ಶಿಕಾರಿಪುರ ರಾಜ್ಯದ 31ನೇ ಜಿಲ್ಲೆಯಾಗಲಿದೆ.




ಯಡ್ಡಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ದಿನದಿಂದ ತಾವಂದುಕೊಂಡಿದ್ದನ್ನು ಸಾಧಿಸುತ್ತಲೇ ಬಂದಿದ್ದಾರೆ. ಶಿವಮೊಗ್ಗ ಜಿಲ್ಲಾ ರಾಜಕೀಯವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡು, ಪಕ್ಷದ ಇತರ ನಾಯಕರನ್ನು ಮೂಲೆಗುಂಪು ಮಾಡಿದ್ದಾರೆ. ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ತನ್ನ ಮಗ ರಾಘವೇಂದ್ರ ಕಣಕ್ಕಿಳಿಯುವುದಿಲ್ಲ ಎಂದು ಸುಳ್ಳು ಹೇಳುತ್ತಲೇ, ಆತನನ್ನು ಕಣಕ್ಕಿಳಿಸಿ, ದುಡ್ಡು ಸುರಿದು ಗೆಲ್ಲಿಸಿದ್ದಾರೆ. ಇದೀಗ ಶಿಕಾರಿಪುರವನ್ನು ಜಿಲ್ಲಾ ಕೇಂದ್ರವಾಗಿಸಲು ಹೊರಟು ಸಿದ್ಧತೆ ಕೂಡ ನಡೆಸ್ಸಿದ್ದಾರೆ. ಆದರೆ ಹಿಂದಿನಂತೆಯೇ ಈ ಪ್ರಸ್ತಾಪ ಸರ್ಕಾರದ ಮುಂದಿಲ್ಲ ಎಂದು ಹೇಳುತ್ತಾ ಶಿವಮೊಗ್ಗದ ಪ್ರಜ್ಞಾವಂತ (!) ಜನತೆಯ ಕಿವಿಗೆ ಮತ್ತೊಂದು ಹೂವು ಮುಡಿಸುವ ಸಂಚು ಹೂಡಿದ್ದಾರೆ.

ಬಿರುಸಿನ ಸಿದ್ಧತೆ

ಮುಖ್ಯಮಂತ್ರಿ ಯಡ್ಡಿ ಕೇವಲ ಹುಂಬ ರಾಜಕಾರಣಿಯೇನೂ ಅಲ್ಲ. ತಮ್ಮ ರಾಜಕೀಯ ಸಾಮ್ರಾಜ್ಯವನ್ನು ಶಾಶ್ವತವಾಗಿ ಶಿಕಾರಿಪುರದಲ್ಲಿ ಸ್ಥಾಪಿಸಲು ಏನೆಲ್ಲಾ ಮಾಡಬೇಕೋ ಅದನ್ನು ಅಧಿಕಾರ ಸಿಕ್ಕ ಮೊದಲ ದಿನದಿಂದಲೇ ಮಾಡುತ್ತಾ ಬಂದಿದ್ದಾರೆ. ತಮ್ಮ ಸ್ವಕ್ಷೇತ್ರ ಶಿಕಾರಿಪುರವನ್ನು ಹೊಸ ಜಿಲ್ಲೆಯನ್ನಾಗಿ ಮಾಡಿ ತಮ್ಮ ಸಾಮ್ರಾಜ್ಯವನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳುವುದು ಅವರ ಹಳೆಯ ಕನಸು. ಅದನ್ನು ನನಸು ಮಾಡುವುದಕ್ಕಾಗಿ ಮೊದಲಿನಿಂದಲೂ ಪ್ರಯತ್ನ ಮಾಡುತ್ತಲೇ ಬಂದಿದ್ದಾರೆ. ಉಪ ಮುಖ್ಯಮಂತ್ರಿಯಾಗಿದ್ದಾಗಿನಿಂದ ಇದುವರೆಗೆ, ಅಂದರೆ ಕೇವಲ ಎರಡೂವರೆ ವರ್ಷಗಳಲ್ಲಿ ಒಂದು ಸಾವಿರ ಕೋಟಿ ರೂ. ಶಿಕಾರಿಪುರಕ್ಕೆ ಹರಿದುಬರುವಂತೆ ಮಾಡಿ, ಚಿಕ್ಕ ಪಟ್ಟಣವನ್ನು ದೊಡ್ಡ ನಗರವಾಗಿಸುತ್ತಿದ್ದಾರೆ. ಇದಕ್ಕೆ ಅಗತ್ಯ ಮೂಲ ಸೌಕರ್ಯವನ್ನೂ ಒದಗಿಸುತ್ತಿದ್ದಾರೆ.

ಮುಂದೆ ಜಿಲ್ಲಾ ಕಚೇರಿ ಮಾಡಲು ಅನುಕೂಲವಾಗುವಂತೆ ನಾಲ್ಕು ಕೋಟಿ ರೂ. ವೆಚ್ಚದಲ್ಲಿ ಕಚೇರಿ ಸಂಕೀರ್ಣ ನಿರ್ಮಿಸಲಾಗುತ್ತಿದೆ. ವಿವಿಧ ಇಲಾಖೆಗಳ ಕಚೇರಿಗಳು ಇಲ್ಲಿರಲಿವೆ. ಹೊಸ ಜಿಲ್ಲೆಯಾದರೆ ಹೊಸ ಜಿಲ್ಲಾ ಪಂಚಾಯತ್ ಕೂಡ ರಚನೆಯಾಗಲಿದೆ. ಇದಕ್ಕೆ ಈಗಿರುವ ತಾಲೂಕು ಪಂಚಾಯತ್ ಕಟ್ಟಡದ ಜಾಗದಲ್ಲಿಯೇ ಹೊಸ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ. ಇದಕ್ಕೆ ಮೂರು ಕೋಟಿ ಸುರಿಯಲಾಗಿದೆ.

ಈಗಾಗಲೇ ಶಿಕಾರಿಪುರ ತಾಲೂಕು ಸಾರ್ವಜನಿಕ ಆಸ್ಪತ್ರೆಯನ್ನು ಜಿಲ್ಲಾ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಿ ಆದೇಶ ಹೊರಡಿಸಲಾಗಿದೆ. ಶಿವಮೊಗ್ಗ ಜಿಲ್ಲಾ ಮೆಗ್ಗಾನ್ ಆಸ್ಪತ್ರೆ, ಶಿವಮೊಗ್ಗ ಮೆಡಿಕಲ್ ಕಾಲೇಜಿಗೆ ಸೇರ್ಪಡೆಯಾಗಿರುವುದರಿಂದ ಅಲ್ಲಿರುವ ಎಲ್ಲ ದರ್ಜೆಯ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಸಿಬ್ಬಂದಿಯನ್ನು ಶಿಕಾರಿಪುರ ಆಸ್ಪತ್ರೆಗೆ ವರ್ಗಾವಣೆ ಮಾಡಲಾಗಿದೆ. ಹೀಗಾಗಿ ಜಿಲ್ಲಾ ಸರ್ಜನ್ ಸೇರಿದಂತೆ ಅವರ ಅಡಿ ಬರುವ ಎಲ್ಲ ಸಿಬ್ಬಂದಿ ಸದ್ಯವೇ ಶಿಕಾರಿಪುರಕ್ಕೆ ಸ್ಥಳಾಂತರಗೊಳ್ಳುವುದು ಅನಿವಾರ್ಯವಾಗಿದೆ.



ಶಿಕಾರಿಪುರ ಆಸ್ಪತ್ರೆಯ ಸಾಮರ್ಥ್ಯವನ್ನು ಐದು ಕೋಟಿ ಖರ್ಚುಮಾಡಿ 50 ರಿಂದ 150 ಹಾಸಿಗೆಗಳಿಗೆ ಹೆಚ್ಚಿಸಲಾಗಿದೆ. ಅಲ್ಲದೆ, ಪಕ್ಕದಲ್ಲಿಯೇ ಮತ್ತೊಂದು ಹೊಸ ಕಟ್ಟಡ ನಿರ್ಮಿಸಲಾಗುತ್ತಿದ್ದು, ಇದಕ್ಕಾಗಿ ಈಗಾಗಲೇ ಐದು ಕೋಟಿ ಬಿಡುಗಡೆ ಮಾಡಲಾಗಿದೆ. ಜಿಲ್ಲಾ ಕೇಂದ್ರವಾದ ಮೇಲೆ ಪ್ರವಾಸಿ ಮಂದಿರ ಇರಲೇಬೇಕು ತಾನೆ? ಇದಕ್ಕಾಗಿ ನಾಲ್ಕು ಕೋಟಿ ರೂ ವೆಚ್ಚದಲ್ಲಿ ಬೃಹತ್ ಪ್ರಮಾಣದ ಪ್ರವಾಸಿ ಬಂಗಲೆಯನ್ನು ಎಬ್ಬಿಸಲಾಗುತ್ತಿದೆ. ಜೊತೆಗೆ ಈಗಿರುವ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸಿ, ಜಿಲ್ಲಾ ಕೇಂದ್ರದಲ್ಲಿ ಕ್ರೀಡಾಂಗಣದ ಕೊರತೆಯೂ ಇರದಂತೆ ನೋಡಿಕೊಳ್ಳಲಾಗುತ್ತಿದೆ. ಇನ್ನು ಸಾರ್ವಜನಿಕ ಮತ್ತು ಸರ್ಕಾರಿ ಕಾರ್ಯಕ್ರಮಗಳಿಗಾಗಿ ಹತ್ತು ಕೋಟಿ ರೂ. ವೆಚ್ಚದಲ್ಲಿ ಬೃಹತ್ ರಂಗಮಂದಿರ ನಿರ್ಮಿಸಲಾಗುತ್ತಿದೆ.

ರಸ್ತೆಗಳನ್ನು ಅಗಲ ಮಾಡಿ, ಕಾಂಕ್ರೀಟ್ ರಸ್ತೆಗಳನ್ನು ನಿರ್ಮಿಸಲಾಗುತ್ತಿದೆ. ಒಳಚರಂಡಿ, ಕುಡಿಯುವ ನೀರಿನ ಯೋಜನೆಗಳು ಅಂತಿಮ ಹಂತದಲ್ಲಿವೆ. ಜಿಲ್ಲಾ ಕೇಂದ್ರ ಶಿಕ್ಷಣ ಕ್ಷೇತ್ರದಲ್ಲಿ ಹಿಂದೆ ಬೀಳಬಾರದು ಎಂದು ಮಾನ್ಯ ಶ್ರೀ ಯಡಿಯೂರಪ್ಪನವರು ತಮ್ಮದೇ ಶಿಕ್ಷಣ ಸಂಸ್ಥೆಗಳಿಂದ ವಿವಿಧ ಕಾಲೇಜುಗಳನ್ನು ಸ್ಥಾಪಿಸಿದ್ದಾರೆ!

ಶಿಕಾರಿಪುರಕ್ಕೆ ರೈಲ್ವೆ ಸಂಪರ್ಕವೂ ಇಲ್ಲ, ಹೆದ್ದಾರಿಗಳೂ ಹಾದುಹೋಗುವುದಿಲ್ಲ. ಸಂಪರ್ಕದ ಅಡಚಣೆಯಾಗಬಾರದು ಎಂದು ಶಿವಮೊಗ್ಗ- ಶಿಕಾರಿಪುರ- ಶಿರಾಳಕೊಪ್ಪ- ತೊಗರ್ಸಿ- ಆನವಟ್ಟಿ- ಹಾನಗಲ್- ತಡಸ ರಸ್ತೆಯನ್ನು ಹೆದ್ದಾರಿ ರೂಪದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಇದಕ್ಕಾಗಿ, ವಿಶ್ವಬ್ಯಾಂಕ್‌ನಿಂದ 400 ಕೋಟಿಯನ್ನು ಸಾಲ ಮಾಡಿ ತಂದಿದ್ದಾರೆ.


ಹೀಗೆ ಶಿಕಾರಿಪುರವನ್ನು ಜಿಲ್ಲೆಯಾಗಿಸಲು ಸಕಲ ಸಿದ್ಧತೆಗಳನ್ನು ನಡೆಸಿರುವ ಯಡ್ಡಿ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಮಾಡಿದಂತೆ ಮತ್ತದೇ ಸುಳ್ಳು ಹೇಳುವ, ದಿಕ್ಕು ತಪ್ಪಿಸುವ ತಂತ್ರ ಹೂಡಿದ್ದಾರೆ. ಸುಮಾರು ಒಂದು ವರ್ಷದ ಹಿಂದೆಯೇ ಯಡ್ಡಿ ಶಿಕಾರಿಪುರವನ್ನು ಜಿಲ್ಲಾ ಕೇಂದ್ರವಾಗಿಸುವ ತಮ್ಮ 'ಕನಸನ್ನು' ಆತ್ಮೀಯರ ಬಳಿ ಬಿಚ್ಚಿಟ್ಟಿದ್ದರು. ಇದಕ್ಕಾಗಿ ನೀಲನಕ್ಷೆ ಸಿದ್ಧಪಡಿಸಿ, ಅಭಿವೃದ್ಧಿ ಕಾರ್ಯಕ್ರಮ ಕೈಗೊಳ್ಳುತ್ತಾ ಬಂದಿದ್ದಾರೆ. ಹೀಗಾಗಿ ಈ ಬಗ್ಗೆ ದಟ್ಟ ವದಂತಿ ಹರಿದಿತ್ತು. ಈ ನಿರ್ಧಾರಕ್ಕೆ ಶಿವಮೊಗ್ಗ ಜಿಲ್ಲೆಯ ಜನ ಹೇಗೆ ಪ್ರತಿಕ್ರಿಯಿಸಲಿದ್ದಾರೆಂಬುದನ್ನು ತಿಳಿದುಕೊಳ್ಳಲು ಕಳೆದ ತಿಂಗಳು ತಮ್ಮ 'ಚೆಡ್ಡಿ ಪತ್ರಿಕೆ' ನಾವಿಕದಲ್ಲಿ ವರದಿಯೂ ಪ್ರಕಟವಾಗುವಂತೆ ನೋಡಿಕೊಂಡಿದ್ದರು.

ನಿರೀಕ್ಷೆಯಂತೆ ಜಿಲ್ಲೆಯನ್ನು ಒಡೆಯ ಹೊರಟ ಯಡ್ಡಿ ವಿರುದ್ಧ ಜನರ ಆಕ್ರೋಶ ಭುಗಿಲೆದ್ದಿತು. ಇದನ್ನರಿತ ಯಡ್ಡಿ ಈಗ ಪ್ಲೇಟ್ ಚೇಂಜ್ ಮಾಡಿದ್ದಾರೆ. 'ಶಿಕಾರಿಪುರವನ್ನು ಜಿಲ್ಲೆಯಾಗಿಸುವ ಪ್ರಸ್ತಾಪ ಸರ್ಕಾರದ ಮುಂದಿಲ್ಲ, ಈ ಬಗ್ಗೆ ಕೂಡ ನಾವು ಚಿಂತಿಸಿಲ್ಲ' ಎಂದು ಹಸಿ ಸುಳ್ಳು ಹೇಳುತ್ತಿದ್ದಾರೆ. ಯಡ್ಡಿ ಈ ರೀತಿ ಸುಳ್ಳು ಹೇಳುತ್ತಿರುವಾಗಲೇ ಅವರ ಸುಪುತ್ರ, ಸಂಸದ ರಾಘವೇಂದ್ರ, ಮಾತ್ರ ಶಿಕಾರಿಪುರದಾದ್ಯಂತ ರಾಜನಂತೆ ಓಡಾಡುತ್ತಾ, ಇನ್ನೇನು ಶಿಕಾರಿಪುರವೇ ಜಿಲ್ಲೆಯಾಗಲಿದೆ ಕಾದು ನೋಡಿ ಎಂದು ಜನತೆಗೆ ಶುಭ(?) ಸುದ್ದಿ ಹರಡುತ್ತಿದ್ದಾನೆ. ಈ ಅಪ್ಪ-ಮಗನ 'ನೀನು ಸತ್ತಂಗೆ ಮಾಡು ನಾನು ಅತ್ತಂತೆ ಮಾಡ್ತೀನಿ' ಅನ್ನೋ ನಾಟಕವನ್ನು ಅರಿಯಲಾರದಷ್ಟು ಮುಗ್ಧರಲ್ಲ ಶಿವಮೊಗ್ಗದ ಜನ.

ಈಡಿಗರು ಛಿದ್ರ- ಲಿಂಗಾಯತರು ಭದ್ರ!

ಶಿಕಾರಿಪುರವನ್ನು ಜಿಲ್ಲೆ ಮಾಡುವುದರ ಹಿಂದೆ ಯಡಿಯೂರಪ್ಪನಿಗೆ ತನ್ನದೇ ಆದ ರಾಜಕೀಯ-ಆರ್ಥಿಕ ಹಿತಾಸಕ್ತಿಗಳಿವೆ. ಮೊದಲನೆಯದಾಗಿ, ಬಾಳು ಕೊಂಪೆಯಂತಿದ್ದ ತನ್ನ ಸ್ವಕ್ಷೇತ್ರವನ್ನು ಜಿಲ್ಲಾ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಿ ಹೊಸ ಜಿಲ್ಲೆಯ ನಿರ್ಮಾತೃ ಎನಿಸಿಕೊಳ್ಳುವುದು. ಆ ಮೂಲಕ ಇಡೀ ಜಿಲ್ಲೆಯ ಜನರಲ್ಲಿ ಆಪದ್ಬಾಂಧವನಂತೆ ಕಾಣಿಸಿಕೊಳ್ಳುತ್ತಾ ತನ್ನ ಓಟ್ ಬ್ಯಾಂಕ್ ಅನ್ನು ಭದ್ರಪಡಿಸಿಕೊಳ್ಳುವುದು. ಎರಡನೆಯದಾಗಿ, ತಮ್ಮ ರಾಜಕೀಯ ಆಟಗಳಿಗೆ ಅಡೆತಡೆಯೊಡ್ಡುತ್ತಿರುವ ಮಾಜಿ ಮುಖ್ಯಮಂತ್ರಿ ಬಂಗಾರಪ್ಪ ಮತ್ತವರ ಮಕ್ಕಳಿಗಿರುವ ಈಡಿಗ ಜನಬೆಂಬಲವನ್ನು ಹರಿದುಹಾಕುವುದು. ಅಂದರೆ, ಏನೇ ಆದರೂ ಶಿಕಾರಿಪುರವೊಂದನ್ನೇ ತಾಲೂಕಾಗಿಸಲು ಬರುವುದಿಲ್ಲ, ಇದರ ಜೊತೆಗೆ ಸೊರಬ, ಹೊನ್ನಾಳಿ ಮತ್ತು ಹಿರೇಕೆರೂರನ್ನೂ ಸೇರಿಸಿದರೆ ಒಟ್ಟು ನಾಲ್ಕು ತಾಲೂಕುಗಳಾಗುತ್ತವೆ. ಆಗ ಜಿಲ್ಲೆಯಾಗಿಸುವುದು ಸುಲಭ. ಇದರಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಗಣನೀಯ ಪ್ರಮಾಣದಲ್ಲಿರುವ ಈಡಿಗರು ಎರಡು ಜಿಲ್ಲೆಗಳಲ್ಲಿ ಹಂಚಿಹೋದಂತಾಗುತ್ತದೆ. ಇತ್ತ ಶಿವಮೊಗ್ಗ ಜಿಲ್ಲೆಯಲ್ಲಿಯೂ ಪ್ರಾಬಲ್ಯವಿಲ್ಲ, ಹೊಸ ಜಿಲ್ಲೆಯಾಗಲಿರುವ ಶಿಕಾರಿಪುರದಲ್ಲಿಯೂ ಹಿಡಿತ ಸಾಧಿಸಲಾಗುವುದಿಲ್ಲ ಎಂಬ ಸ್ಥಿತಿಗೆ ಈಡಿಗರು ಬರಲಿದ್ದಾರೆ. ಅಷ್ಟರ ಮಟ್ಟಿಗೆ ಅದು ಯಡ್ಡಿಗೆ ಅನುಕೂಲ, ಬಂಗಾರಪ್ಪನಿಗೆ ಪ್ರತಿಕೂಲ.

ಅದೇ ರೀತಿಯಲ್ಲಿ ಪ್ರಸ್ತುತವಾಗಿ ದಾವಣಗೆರೆ ಜಿಲ್ಲೆಯಲ್ಲಿರುವ ಹೊನ್ನಾಳಿ ತಾಲ್ಲೂಕನ್ನೂ ಹಾಗೂ ಹಾವೇರಿ ಜಿಲ್ಲೆಯಲ್ಲಿರುವ ಹಿರೇಕೆರೂರು ತಾಲ್ಲೂಕನ್ನೂ ಹೊಸದಾಗಿ ರೂಪುಗೊಳ್ಳಲಿರುವ ಶಿಕಾರಿಪುರ ಜಿಲ್ಲೆಗೆ ಸೇರಿಸಿಕೊಳ್ಳುವ ಯಡ್ಡಿಯ ಆಲೋಚನೆಯ ಹಿಂದೆಯೂ ಪ್ರಕಾಂಡ ಲೆಕ್ಕಾಚಾರ ಅಡಗಿದೆ. ಈ ಎರಡೂ ತಾಲ್ಲೂಕುಗಳಲ್ಲಿ ಲಿಂಗಾಯತರೇ ಬಹುಸಂಖ್ಯಾತರು. ಶಿಕಾರಿಪುರದಲ್ಲೂ ಲಿಂಗಾಯತರೇ ಪ್ರಬಲರು. ಯಡ್ಡಿಯೂ ಲಿಂಗಾಯತರೆ. ಹಾಗಾಗಿ, ಇಡೀ ಶಿಕಾರಿಪುರ ಒಟ್ಟಾರೆ ಲಿಂಗಾಯತರ ಪ್ರಾಬಲ್ಯವಿರುವ ಜಿಲ್ಲೆಯಾಗಿ ಪರಿವರ್ತನೆಗೊಳ್ಳಲಿದೆ. ಇದು ಯಡ್ಡಿಯ ವಂಶಪಾರಂಪರ್ಯ ರಾಜಕೀಯಕ್ಕೆ ಅಡೆ-ತಡೆಯೇ ಇಲ್ಲದಂತೆ ಮಾಡುವ ಮಾಸ್ಟರ್ ಪ್ಲಾನ್ ಆಗಿದೆ.



ಇದರ ಜೊತೆಗೆ, ನ್ಯಾಮತಿ ಮತ್ತು ಶಿರಾಳಕೊಪ್ಪಗಳನ್ನು ನೂತನ ತಾಲ್ಲೂಕುಗಳಾಗಿ ರಚಿಸಿ, ಅವುಗಳನ್ನೂ ಶಿಕಾರಿಪುರ ಜಿಲ್ಲೆಗೆ ಸೇರಿಸಿಕೊಳ್ಳುವ ಯೋಚನೆಯೂ ಇದೆ. ಶಿವಮೊಗ್ಗ ಸಮೀಪದ ಸೋಮಿನಕೊಪ್ಪದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಕೋಟ್ಯಂತರ ರೂ. ಆಸ್ತಿ ಮಾಡಿದ್ದಾರೆ. ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದ್ದಾರೆ. ಬಡಾವಣೆಗಳನ್ನು ನಿರ್ಮಿಸಿದ್ದಾರೆ. ಈ ಭಾಗ ಶಿವಮೊಗ್ಗ ನಗರಕ್ಕೇ ಸೇರಿದ್ದರೂ, ಇದನ್ನು ಶಿಕಾರಿಪುರ ಜಿಲ್ಲೆಗೆ ಸೇರಿಸಿಕೊಳ್ಳುವ ಮಾಸ್ಟರ್ ಪ್ಲಾನ್ ಕೂಡ ಸಿದ್ಧಪಡಿಸಿದ್ದಾರೆ.

ಈಗಾಗಲೇ ತಮ್ಮ ಮಗ ರಾಘವೇಂದ್ರನ ಸಾರಥ್ಯದಲ್ಲಿ ಶಿಕಾರಿಪುರದಲ್ಲಿ ಭಾರಿ ಬೇನಾಮಿ ಆಸ್ತಿಪಾಸ್ತಿಗಳನ್ನು ಖರೀದಿಸಿರುವುದರಿಂದ ಅದಕ್ಕೆಲ್ಲಾ ದೊಡ್ಡ ಮಟ್ಟದ ಬೆಲೆ ತಂದುಕೊಡುವುದೂ ಯಡಿಯೂರಪ್ಪನ ಈ ತೀರ್ಮಾನದ ಹಿಂದಿನ ಅಸಲೀ ಉದ್ದೇಶಗಳಲ್ಲೊಂದಾಗಿದೆ. ಈ ಸುದ್ದಿ ಹೊರಬೀಳುತ್ತಿದ್ದಂತೆಯೇ ಈಗಾಗಲೇ ಶಿಕಾರಿಪುರ ಪಟ್ಟಣ ಮತ್ತು ಸುತ್ತಮುತ್ತಲಿನ ಪ್ರದೇಶ[...] ಭೂಮಿಯ ಬೆಲೆ ರಾತ್ರೋರಾತ್ರಿ ಗಗನಕ್ಕೇರಿಬಿಟ್ಟಿದೆ. ವಾ[...] ವಾಣಿಜ್ಯ ಕಟ್ಟಡಗಳ ಬೆಲೆ ದುಬಾರಿಯಾಗಿಬಿಟ್ಟಿದೆ. ವ[...] ಬಸ್‌ಸ್ಟ್ಯಾಂಡ್ ಹೋಟೆಲ್ 49,000 ರೂಪಾಯಿ ಗುತ್ತಿ[...] ಹರಾಜಾದರೆ ಉಳಿದ ಮಳಿಗೆಗಳು 17,500 ರೂಪಾ[...] ಗಳಿಗೆ ಹರಾಜಾಗಿವೆ.

ಒಂದು ತಾಲೂಕನ್ನು ಜಿಲ್ಲಾ ಕೇಂದ್ರವಾಗಿಸಲು ಯಾವು[...] ಮಾನದಂಡವಿಲ್ಲ, ರಾಜಕೀಯ ದುರುದ್ದೇಶ ಇದ್ದರೆ ಸಾ[...] ಮೂರು ತಾಲೂಕನ್ನು ಹೊಂದಿರುವ ಯಾದಗಿರಿ[...] ಜಿಲ್ಲೆಯಾಗುತ್ತಿರುವಾಗ ಶಿಕಾರಿಪುರ ಏಕೆ ಜಿಲ್ಲೆಯಾಗಬಾರ[...] ಎಂದು ಯಡ್ಡಿ ಬೆಂಬಲಿಗರು ಪ್ರಶ್ನಿಸುತ್ತಿದ್ದಾರೆ. ಹೀಗ[...] ಶಿಕಾರಿಪುರ ಜಿಲ್ಲಾ ಕೇಂದ್ರವಾಗಲಿದೆ ಎಂಬ ಬಗ್ಗೆ ಯಾವು[...] ಅನುಮಾನಗಳಿಲ್ಲ.

ಹೊನ್ನಾಳಿ ಮತ್ತು ಚನ್ನಗಿರಿ ದಾವಣಗೆರೆ ಜಿ[...] ಸೇರಿದ್ದರಿಂದಾದ ನೋವನ್ನು ಇನ್ನೂ ಮರೆಯದ ಶಿವಮೊ[...] ಜನತೆ ಈಗ ಮತ್ತೊಂದು ಇಬ್ಭಾಗಕ್ಕೆ ಸಜ್ಜಾಗಬೇಕಾಗಿ ಬಂದಿ[...] ತಾವಂದುಕೊಂಡಿದ್ದನ್ನು ಹೇಗಾದರೂ ಮಾಡಿ ಸಾಧಿಸುತ್ತ[...] ಬಂದಿರುವ ಯಡ್ಡಿ, ಶಿಕಾರಿಪುರವನ್ನು ಜಿಲ್ಲಾ ಕೇಂದ್ರವಾಗಿಸಿ[...] ತೀರಲಿದ್ದಾರೆ ಎಂಬುವುದರಲ್ಲಿ ಯಾವುದೇ ಅನುಮಾನವಿ[...] ಹೀಗಾಗಿ ಯಾರೂ ಈ ಬಗ್ಗೆ ಪ್ರತಿಭಟಿಸಲು ಮುಂದಾಗುತ್ತಿ[...]


ದಾವಣಗೆರೆ ಜಿಲ್ಲೆ ರಚನೆಗೊಂಡಾಗ ಹೊನ್ನಾಳಿ ಮ[...] ಚನ್ನಗಿರಿ ಹೊತ್ತಿ ಉರಿದಿತ್ತು, ಪ್ರತಿಭಟಿಸಿದವರನ್ನು ಪೊಲೀಸ[...] ಬಂಧಿಸಿ ತಿಂಗಳುಗಟ್ಟಲೆ ಜೈಲಿಗಟ್ಟಿದ್ದರು. ಆದರೆ ಈಗ [...] ರೀತಿಯ ಪ್ರತಿಭಟನೆ ನಡೆಯುವ ಸೂಚನೆಗಳೇ ಕಾಣುತ್ತಿ[...] ಕಾಂಗ್ರೆಸಿಗರು ನರಸತ್ತಂತೆ ಮಲಗಿದ್ದರೆ, ಜೆಡಿಎಸ್ ನೆಲೆಗ[...] ಹುಡುಕಾಟ ನಡೆಸುವ ಸ್ಥಿತಿಯಲ್ಲಿದೆ. ಪ್ರಗತಿಪರರಂತ[...] ಪೊಲೀಸರ ಲಾಠಿ ನೆನಪಿಸಿಕೊಂಡು ಕುಳಿತಲ್ಲಿಯೇ ಸುಮ[...] ಕೂತಿದ್ದಾರೆ. ಈ ರೀತಿ ಜಿಲ್ಲೆ ಇಬ್ಭಾಗವಾದಲ್ಲಿ ಶಿವಮೊ[...] ಜಿಲ್ಲೆಯ ಮೇಲಾಗುವ ರಾಜಕೀಯ[...] ಸಾಮಾಜಿಕ ಮತ್ತು ಆರ್ಥಿ[...] ಪರಿಣಾಮಗಳೇನು ಎಂಬುದರ ಬ[...] ಒಂದು ಸಣ್ಣ ಚರ್ಚೆ ಕೂ[...] ನಡೆಯುತ್ತಿಲ್ಲ.

ಇತ್ತ ಸಾಗರದ ಜನತೆ ಸಾಗರ[...] ಜಿಲ್ಲಾ ಕೇಂದ್ರವಾಗಲಿ ಎಂ[...] ಬೀದಿಗಿಳಿದಿದ್ದಾರೆ. ಬೇಳೂ[...] ಗೋಪಾಲಕೃಷ್ಣ ಅವರೇ ಅದ[...] ನೇತೃತ್ವ ವಹಿಸಿದ್ದಾರೆ. ಶಿಕಾ[...] ಪುರಕ್ಕಿಂತ ಶಿವಮೊಗ್ಗದಿಂದ ಹೆ[...] ದೂರದಲ್ಲಿರುವುದು ಸಾಗರ, ಇ[...] ಉಪ ವಿಭಾಗಾಧಿಕಾರಿಗ[...] ಕಚೇರಿಯೂ ಇದೆ, ರಾಷ್ಟ್ರೀಯ[...] ಹೆದ್ದಾರಿ ಇದೆ, ರೈಲ್ವೆ ಸಂಪರ್ಕವಿದೆ. ಹೀಗಾಗಿ ಶಿಕಾರಿಪುರಕ್ಕಿ[...] ಸಾಗರವನ್ನೇ ಜಿಲ್ಲಾ ಕೇಂದ್ರವಾಗಿಸುವುದು ಸೂಕ್ತವಲ್ಲ[...] ಎಂಬುದು ಅವರ ತಣ್ಣನೆಯ ಪ್ರಶ್ನೆ. ಒಂದು ವೇಳೆ ಶಿಕಾರಿಪು[...] ಜಿಲ್ಲೆಯಾದರೆ, ಬೀದಿಗಿಳಿದು ಪ್ರತಿಭಟಿಸುವ ಸೂಚನೆಯನ್ನು[...] ಸಾಗರದ ಜನ ನೀಡಿದ್ದಾರೆ.

ಯಡ್ಡಿ ನಮ್ಮ ಜಿಲ್ಲೆಯ ಮುಖ್ಯಮಂತ್ರಿ ಎಂದು ಬೀಗುತ್ತಿ[...] ಶಿವಮೊಗ್ಗ ಜಿಲ್ಲೆಯ ಜನ ಇವತ್ತು ಯಡ್ಡಿ ಅಧಿಕಾ[...] ಮುಗಿಯುವುದರೊಳಗೆ ಇನ್ನೂ ಏನೆಲ್ಲಾ ಅನಾಹು[...] ಮಾಡುತ್ತಾರೋ ಎಂಬ ಆತಂಕದಿಂದ ದಿನ ದೂಡಲಾರಂಭಿ[...] ದ್ದಾರೆ. ಯಡ್ಡಿ ಮತ್ತು ಅವರ ಫ್ಯಾಮಿಲಿ, ಯಾರೇ ಕೂಗಾಡಿದರ[...] ತಮಗೆ ತಮ್ಮ ಹಿತಾಸಕ್ತಿಗಳೇ ಮುಖ್ಯ ಎಂದ[...] ಬಹಿರಂಗವಾಗಿಯೇ ಹೇಳಿಕೊಂಡು ಓಡಾಡುತ್ತಿದ್ದಾ[...] ಅಧಿಕಾರದ ದರ್ಪ ಎಂದರೆ ಇದೇ ತಾನೆ?

● ವರದಿಗಾ[...]

ಈಶ್ವರಪ್ಪ ಈಗ ಬೋನು ಸೇರಿದ ಕುನ್ನಿ!



ಮುಖ್ಯಮಂತ್ರಿ ಯಡ್ಡಿ ಶಿವಮೊಗ್ಗದಲ್ಲಿ ಒಂದರ ಹಿಂದೊಂದರಂತೆ ಆಟ ಆಡುತ್ತಿದ್ದರೂ, ಪ್ರತಿಭಟಿಸುವ ಚೈತನ್ಯ ವಿರೋಧ ಪಕ್ಷದವರಿಗಾಗಲೀ, ಸ್ವಪಕ್ಷೀಯರಿಗಾಗಲೀ ಒಂದಿಷ್ಟೂ ಇಲ್ಲ. ಯಡ್ಡಿಯ ವಂಶಪಾರಂಪರ್ಯ ರಾಜಕೀಯವನ್ನು ವಿರೋಧಿಸುವ ಪೋಜ್ ನೀಡಿದ್ದ ಈಶ್ವರಪ್ಪ ಎಂಬ ನಾಲಿಗೆ ಸರಿ ಇಲ್ಲದ ನಾಯಕ ಈಗ ಬೋನು ಸೇರಿದ ಕುನ್ನಿಯಂತಾಗಿದ್ದಾರೆ.

ಈತನ ಮಾನ ಕಳೆಯಬೇಕೆಂಬ ಉದ್ದೇಶದಿಂದಲೇ ಶಿವಮೊಗ್ಗ ನಗರದ ರಸ್ತೆ ದುರಸ್ತಿ, ಇತರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಯಡ್ಡಿ ಅಡ್ಡಗಾಲು ಹಾಕುತ್ತಿದ್ದರೂ ಈಶ್ವರಪ್ಪ ಬಾಯಿ ಬಿಡುತ್ತಿಲ್ಲ, ಆಗೊಮ್ಮೆ ಈಗೊಮ್ಮೆ ಬೋನಿನಲ್ಲಿಯೇ ನಾಯಿ ಕುಂಯ್ ಗುಡುವಂತೆ ಒಂದಿಷ್ಟು ಕೂಗಿಕೊಂಡು ರಚ್ಚೆ ಹಿಡಿಯುವುದು ಬಿಟ್ಟರೆ ಮತ್ತಿನ್ನೇನನ್ನೂ ಮಾಡುತ್ತಿಲ್ಲ. ಈ ಹಿಂದೆ ಯಡ್ಡಿಗೆ ಸವಾಲೊಡ್ಡುವ ಧೈರ್ಯ ಮಾಡಿದ್ದು ಇದೇ ಈಶ್ವರಪ್ಪನಾ ಎಂದು ಅನುಮಾನ ಪಡುವಷ್ಟು ಅವರು ಬದಲಾಗಿದ್ದಾರೆ. ಹೋಗಲಿ, ಬೇರೆ ಬಿಜೆಪಿ ನಾಯಕರಿಗಾದರೂ ಬಾಯಿ ಇದೆಯೇ ಎಂದು ಕೇಳಿದರೆ ಯಾರೂ ಮುಖ ತೋರಿಸಲು ಸಿದ್ಧರಿಲ್ಲ!

ಇತ್ತೀಚೆಗೆ ಯಡ್ಡಿ ಬಿಜೆಪಿ ಮತ್ತು ಸಂಘಪರಿವಾರದ ಮೇಲೂ ಬಿಗಿಹಿಡಿತ ಸಾಧಿಸುವಲ್ಲಿ ಯಶಸ್ವಿಯಾಗಿದ್ದಾ[...] ಆರ್‌ಎಸ್‌ಎಸ್‌ನ ರಾಷ್ಟ್ರೀಯ ನಾಯಕರೇ ಯಡ್ಡಿಯನ್ನು ಹಾಡಿಹೊಗಳಲಾರಂಭಿಸಿದ್ದು, ಯಡ್ಡಿ ವಿರೋಧಿಗಳನ್ನು ಎದೆಗುಂದಿಸಿ[...] ಇದಕ್ಕೆ ಜೀವಂತಸಾಕ್ಷಿ ಎಂದರೆ ಈಶ್ವರಪ್ಪ!

ನನ್ನ ವಯಸ್ಸಿಗೆ ಬೆಲೆಕೊಟ್ಟು ಮಾತನಾಡಬೇಕು

ದೆಹಲಿಯನ್ನಾಳಿದ ಮೊಹಮದ್ ಬಿನ್ ತೊಘಲಕ್ ಈಚೆಗೆ ...ರಿಪುರದಲ್ಲಿ ಅವತರಿಸಿ ಶಿವಮೊಗ್ಗ ಜಿಲ್ಲೆಯನ್ನು ಹರಿದು ...ರಿಪುರ ಜಿಲ್ಲೆಯನ್ನ ಮಾಡಲು ಹೊರಟಿದ್ದಾನಂತಲ್ಲಾ. "ಏನ್ ...ಘಲಕ್ಕರೆ, ಶಿವಮೊಗ್ಗದಿಂದ ಶಿಕಾರಿಪುರವನ್ನು ಹರಿದು ಜಿಲ್ಲೆ ...ಡಲು ಹೊರಟಿದ್ದೀರಲ್ಲ?" ಎಂದು ಕೇಳಿದರೆ, ತೊಘಲಕ್ ...ಹೇಬರು "ಅದೆಲ್ಲಾ ಊಹಾಪೋಹ. ಅದೆಂದೂ ಸಾಧ್ಯವಿಲ್ಲ" ...ದು ಹೇಳುತ್ತಲೇ ಶಿವಮೊಗ್ಗದ ವೈದ್ಯರ ವರ್ಗಾವಣೆ ಫೈಲಿಗೆ ... ಗುದ್ದಿದರಂತಲ್ಲಾ, ಇದರಿಂದ ನೂರಾರು ಜನ ವೈದ್ಯರು, ...ಂದಿಗಳೆಲ್ಲಾ ಶಿಕಾರಿಪುರದ ಕಡೆ ಗಂಟುಮೂಟೆ ಕಟ್ಟಲು ...ದೆಮುಂದೆ ನೋಡುತ್ತಾ ಧರಣಿ ಕುಳಿತರಂತಲ್ಲಾ, ...ನ್ನ ಕಂಡ ಶಿವಮೊಗ್ಗದ ರೋಗಿಗಳು, ಯಡ್ಡಿಗೆ ...ಶಾಪ ಹಾಕುತ್ತಾ "ಎಡೂರಪ್ಪನ ಇತ್ತೀಚಿನ ...ನೆ ನೋಡಿದರೆ, ಆತ ಶಿವಮೊಗ್ಗದ ಪ್ರಖ್ಯಾತ ...ನೋವೈದ್ಯರಾದ ಅಶೋಕ ಪೈಯವರಿಗೆ ...ರಿಸಿಕೊಳ್ಳುವುದು ಒಳ್ಳೆಯದು" ಎಂದು ...ತನಾಡಿಕೊಂಡವಂತಲ್ಲಾ. ಇತಿಹಾಸದ ತೊಘಲಕ್ ...ದೂ ಹಿಡಿದ ಹಟ ಬಿಟ್ಟವನಲ್ಲ. ದೆಹಲಿಯನ್ನು ...ವಗಿರಿಗೆ ವರ್ಗಾಯಿಸಿ ಪ್ರಯಾಣದಲ್ಲಿ ಸತ್ತ, ...ವರ ಸುದ್ದಿ ಕೇಳಿ ಸಂತಸಪಟ್ಟ. ಯಡ್ಡಿಯೂ ...ದ್ಯರ ಪಜೀತಿಯನ್ನು ಕೇಳಿ ಮಗನೊಡನೆ ನಗುತ್ತಾ ...ತಿದ್ದಾನಂತಲ್ಲಾ ಥೂತ್ತೇರಿ!

* * * * * *

"ಕಾಂಗ್ರೆಸ್ ವಿರೋಧ ಪಕ್ಷದ ಕೆಲಸವನ್ನ ಸರಿಯಾಗಿ ...ಯಿಸದೆ, ಬಿಜೆಪಿಯೊಡನೆ ಶಾಮೀಲಾಗಿದೆ" ಎಂಬ ...ಮಾರಸ್ವಾಮಿ ಹೇಳಿಕೆಗೆ ಕೆಂಡಾಮಂಡಲವಾದ ಸಿದ್ದು ...ಯಾಗಿ ಕುಮಾರಣ್ಣನ ಅಪ್ಪನನ್ನ ಬೈದು ಮತ್ತೆ ...ಕೊಂಡರಲ್ಲಾ. ವಿರೋಧ ಮಾಡುವುದರಲ್ಲೇ ...ರೋಧಿಗಳಾಗುತ್ತಿರುವ ವಿರೋಧಿ ಧುರೀಣರುಗಳ ...ಮಹನಾದ ದೇವೇಗೌಡರನ್ನ ಮಾತನಾಡಿಸಿದರೆ ...ೆ ಎಂದು ಫೋನ್ ಮಾಡಲಾಗಿ ದೇವೇಗೌಡರ ...ನ್ ರಿಂಗಾಯ್ತು.

ರಿಂಗ್‌ಟೋನ್ : "ಏಕದಂತಂ ...ಯಕಂ....

"ಹಲೋ?"

"ಹಲೋ ಯಾರು?"

"ನಾನು ಸಾರ್ ಯಾಹೂ."

"ನಮಸ್ಕಾರ ಯಾಹೂ, ನಾನು ದತ್ತ."

"ನಮಸ್ಕಾರ ಸಾರ್ ನೀವು ಸಂಸ್ಕೃತ ವಿವಿ ಬಗ್ಗೆ ಭಟ್ಟನ ...ರ್‌ಗೆ ಬರೆದ ಲೇಖನ ತುಂಬ ಚೆನ್ನಾಗಿತ್ತು. ಸದ್ಯದ ನಮ್ಮ ...ಳುಗಾಡಿನ ರಾಜಕಾರಣಿಗಳ ಪೈಕಿ ನೀವು ತುಂಬ ...ಕೊಂಡಿರಂಗೆ ಕಾಣ್ತೀರಿ. ಇಷ್ಟು ಓದಿಕೊಂಡು ದೇವೇಗೌಡರತ್ರ ...ದ್ದೀರಿ?"

"ನಾನು ಅಷ್ಟು ಓದಿರೋದ್ರಿಂದ್ಲೆ ಗೌಡ್ರು ನನ್ನನ್ನು ಇಟ್ಕೊಂಡಿರೋದು. ಅದು ಅಲ್ದೆ ಗೌಡ್ರಿಗೆ ಬ್ರಾಹ್ಮಣರ ಬಗ್ಗೆ ಭಯ ಭಕ್ತಿ ಇದೆ. ಆರೆಸ್ಸೆಸ್ ಬ್ರಾಹ್ಮಣರ ಬಗ್ಗೆ ದ್ವೇಷ ಇದೆ."

"ಸರಿ, ರಾಮಕೃಷ್ಣ ಹೆಗಡೆನ ದ್ವೇಷ ಮಾಡಿದ್ರಲ್ಲ, ಅವರು ಯಾವ ತರಹದ ಬ್ರಾಹ್ಮಣರು?"

"ಅದು ರಾಜಕೀಯದ ಸ್ಪರ್ಧೆಯಿಂದಾದ ವೈಷಮ್ಯ. ಅದರಲ್ಲಿ ಜಾತಿ ಬರಲ್ಲ, ಬ್ರಾಹ್ಮಣ ಅನ್ನೋ ಪ್ರಶ್ನೆನೂ ಬರಲ್ಲ."



" ಓಹೋ ಹಾಗೋ, ಅಂತೂ ಮನುಷ್ಯನ ದ್ವೇಷಕ್ಕೆ ಒಂದೇ ಕಾರಣ ಇರಲ್ಲ ಅಂತ ಆಯ್ತು."

"ಹೌದು ಯಾಹೂ ಅವರೆ. ತಡಿರಿ ಗೌಡ್ರಿಗೆ ಫೋನ್ ಕೊಡ್ತೀನಿ."

"ನಮಸ್ಕಾರ ಸಾರ್ ನಾನು ಯಾಹೂ."

"ಏನೇಳಿ ಯಾಹೂ ಅವರೇ?"

"ಉಷಾರಾಗಿದ್ದಿರಾ ಸಾರ್? ಕೈ ಸರಿಹೋಯ್ತಾ?"

"ದೇವರ ದಯದಿಂದ ಚೆನ್ನಾಗಿದ್ದೀನಿ. ಕೈ ಬ್ಯಾಂಡೇಜ್ ತೆಗೆದಾಗಿದೆ. ಈಗ ಎಡಗೈನ ಬಳಸ್ತಾಯಿದ್ದಿನಿ."

"ಒಳ್ಳೇದು ಸಾರ್. ಯಾಕ್ ಸಾರ್ ಆಗಾಗ್ಗೆ ಕಾಲುಕೈ ಪ್ರಾಕ್ಚರ್ ಮಾಡಿಕತ್ತಾಯಿರ್ತೀರಿ?"

"ವಯಸ್ಸಾಯ್ತಲ್ಲ ಯಾಹೂ ಅವುರೇ, ದಿನೇದಿನೇ ನಮಗೆ ಪ್ರಾಯ ಬರುತ್ತಾ? ವಯಸ್ಸಾಗುತ್ತೆ, ನಮ್ಮ ವಿರೋಧಿ ಧುರೀಣರು ನಮ್ಮ ವಯಸ್ಸಿಗೂ ಬೆಲೆ ಕೊಡದೆ ಮಾತನಾಡ್ತರೆ."

"ಯಾರೂ ಸಾರ್ ವಿರೋಧಿ ಧುರೀಣರು?"

"ಮೈಸೂರು ಕಡೆ ಮಹಾ ನಾಯಕರಿದ್ದಾರೆ. ಅವುರು ಪಿಯುಸಿ ಓದುವಾಗ ನಾನು ಅರಸು ಆಡಳಿತದ ವಿರೋಧಿ ನಾಯಕನಾಗಿದ್ದೆ, ಅದನ್ನ ಆ ಮಹಾ ನಾಯಕರು ತಿಳಕೊಂಡು ಮಾತನಾಡಬೇಕು."

"ಆಗ ನಾನು ಕೂಡಾ ವಿದ್ಯಾರ್ಥಿ ಸಾರ್. ನೀವು ಅರಸುನ ಹಿಡದು ಅಳ್ಳಾಡಿಸಿ ಬಿಡ್ತಿದ್ರಿ. ಅಂತ ನೀವು ಅರಸುನ ಮೀರಸೋ ರಾಜಕಾರಣಿ ಆಗ್ತೀರಿ ಅನ್ನಕೊಂಡಿದ್ದೆ ಸಾರ್."

"ನಿಮ್ಮ ಅನಿಸಿಕೆ ನಿಜ ಮಾಡೋವಷ್ಟು ಅವಕಾಶ ನನಗೆ ಸಿಕ್ಕಲಿಲ್ಲ, ಇಲ್ದೆಯಿದ್ರೆ..."

"ಗುಂಡೂರಾಯನ್ನ ಮೀರುಸಿದ್ರಿ, ಅಲ್ಲವ ಸಾರ್?"

"ಗುಂಡೂರಾಯನ ಆಡಳತಕ್ಕೆ ನನ್ನ ಆಡಳತ ಹೋಲಸಕ್ಕೋಗಬೇಡಿ."

"ಸಾರ್, ಗುಂಡೂರಾಯ ನಿಮ್ಮ ಮೆಚ್ಚಿನ ರಾಜಕಾರಣಿ ಆದಕಾರಣಕ್ಕೆ ಆತನನ್ನು ಹೊಳೆನರಸೀಪುರಕ್ಕೆ ಕರೆಸಿ ಗಾಡಿ ಮೇಲೆ ಮೆರವಣಿಗೆ ಮಾಡಿದರಂತೆ?"

"ಗಾಡಿಮೇಲೆ ಮೆರವಣಿಗೆ ಮಾಡಿದೋರು ಕಾಂಗ್ರೆಸ್ಸಿನೋರು. ನನ್ನ ಕ್ಷೇತ್ರಕ್ಕೆ ಬಂದ ಮುಖ್ಯಮಂತ್ರಿನ ನಾನು ಸ್ವಾಗತಿಸೋದು ಬೇಡವೆ?"

"ಇಲ್ಲ ಸಾರ್, ಇತಿಹಾಸದಲ್ಲಿ ನಿಮ್ಮ ಆ ನಡವಳಿಕೆ ದಾಖಲಾಗಿದೆ. ನಮ್ಮ ಪತ್ರಿಕೇಲೂ ಬಂದಿದೆ. ನೀವು ಎತ್ತಿನಗಾಡಿ ಮೆರವಣಿಗೆ ಮಾಡಿದ್ದಿರಿ."

"ನನ್ನ ಕ್ಷೇತ್ರದ ಜನರ ಅನುಕೂಲಕ್ಕಾಗಿ ಮುಖ್ಯಮಂತ್ರಿಯಿಂದ ಕೆಲವು ಕೆಲಸ ಮಾಡಿಸಬೇಕಿತ್ತು, ಆದ್ದರಿಂದ ನಾನು ಹಾಗೆ ವರ್ತಿಸಿರಬಹುದೇ ಪರಂತು ಇನ್ನಾವ ಉದ್ದೇಶವೂ ಇರಲಿಲ್ಲ."

"ತಲೆಗೆ ಬಟ್ಟೆ ಕಟ್ಟಿಕೊಂಡು ಆಡಳಿತ ಪಕ್ಷದೋರ ಮನೆಗೆ ಹೋಗಿದ್ರಂತೆ ನಿಜವೇ?"

"ಇದೂ ಕೂಡಾ ಮೈಸೂರು ಕಡೆ ಮಹಾನಾಯಕರ ಸುಳ್ಳು ಆರೋಪ. ನಾನು ತಲೆಗೆ ಬಟ್ಟೆ ಕಟ್ಟಿಕೊಂಡು ಎಲ್ಲೂ ಹೋಗಿರಲಿಲ್ಲ, ಹಾಗೇ ಹೋಗಿದ್ದೆ. ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಜನತಾ ಸರಕಾರ ಅಲ್ಲಾಡತಾಯಿತ್ತು. ಆಗ ಮುರಾರ್ಜಿ ದೇಸಾಯಿಯವರು ನನಗೆ ಫೋನ್ ಮಾಡಿ ನೀವೀಗ್ಲೆ ಹೋಗಿ ಅರಸುನ ಭೇಟಿ ಮಾಡಿ ಕರ್ನಾಟಕದ ಎಂ.ಪಿ.ಗಳು ನನಗೆ ಸಪೋರ್ಟು ಮಾಡೋತರ ಒಪ್ಪಿಸಿ ಅಂದ್ರು. ಆಗ ನನ್ನ ಪರಿಸ್ಥಿತಿ ಹೇಳಿ. ಹಿಂದಿನ ದಿನವೇ ಅರಸು ಭ್ರಷ್ಟ ಮುಖ್ಯಮಂತ್ರಿ ಅಂತ ಫೋನ್ ಮಾಡಿದ್ದೆ. ಆದ್ರೆ ಮರುದಿನ ಬೆಳಗಿನ ಜಾವ ಅರಸು ಮನೆ ಬಾಗಿಲಿಗೆ ಹೋಗಿ ನಿಲ್ಲಬೇಕಾದ ಪರಿಸ್ಥಿತಿ ಬಂತು."

"ಆಗ ತಲೆಮೇಲೆ ಬಟ್ಟೆ ಇರಲಿಲ್ಲ ಅಲ್ಲವ ಸಾರ್?"

"ದೇವರಾಣೆ ಇರಲಿಲ್ಲ. ಹಾಗೇ ಹೋಗಿದ್ದೆ?"

"ಮತ್ತೆ ನಿಮ್ಮ ವಿರೋಧಿಗಳು ತಲೆಗೆ ಬಟ್ಟೆ ಸುತ್ತಿಕೊಂಡು ಹೋಗಿದ್ರು ಅಂತಾರಲ್ಲಾ ಸಾರ್."

"ಅನ್ನದೋಗ್ಲಿ, ನನ್ನ ವಯಸ್ಸಿಗೆ ಬೆಲೆಕೊಟ್ಟು ಸುಮ್ಮನಿರೋದು ಬೇಡವೇ?"

"ಮುಂದೆ ನೀವು ಏನೇ ಅಂದ್ರು, ಏನೇ ಮಾಡಿದ್ರು ವಯಸ್ಸಿಗೆ ಬೆಲೆಕೊಟ್ಟು ಸುಮ್ಮನಿರಬೇಕಾ ಸಾರ್?"

"ಹೌದು ಮತ್ತೆ."

"ಹಾಗಿದ್ರೆ ರಾಜಕಾರಣ ಬಿಟ್ಟು ಮನೆ ಸೇರಿಕೊಳ್ಳಿ ಸಾರ್"—

"ಅದು ಈ ಜನ್ಮದಲ್ಲಿ ಸಾಧ್ಯವಿಲ್ಲ, ಮತ್ತೆ ನಮ್ಮ ಮಕ್ಕಳು ವಿಧಾನಸೌಧದ ಎದುರು ನಿಂತು ಪ್ರಮಾಣವಚನ ತಗಳತಕ್ಕಂತಹ ದೃಶ್ಯವನ್ನು ನೋಡಬೇಕು. ಆ ನಂತರ ನಿವೃತ್ತನಾಗಬೇಕು."

"ಥೂತ್ತೇರಿ!"

ಕಾರ್ಟೂನ್ ಕಾರ್ನರ್



ಬಡವರ ಅಹವಾಲು ಮತ್ತು ನ್ಯಾಯಮೂರ್ತಿಗಳ ಶೇರು

ನಮ್ಮ ದೇಶದ ಬಡವರ ಪರವಾಗಿ ಇವತ್ತು ಶಾಸಕಾಂಗ ನಿಂತಿಲ್ಲದಿರಬಹುದು, ಆಡಳಿತಾಂಗ ಕೈ ಎತ್ತಿರಬಹುದು, ಪತ್ರಿಕಾರಂಗ ಜಾಣ ಕು... ಪ್ರದರ್ಶಿಸುತ್ತಿರಬಹುದು, ಆದರೆ ನ್ಯಾಯಾಂಗ ಏನು ಮಾಡುತ್ತಿದೆ?

ವೇದಾಂತಂ ಗಣಿಗಾರಿಕೆ ಕಂಪನಿಯು ಒರಿಸ್ಸಾದಲ್ಲಿ ತನ್ನ ಕಾರ್ಯವನ್ನು ಪ್ರಾರಂಭಿಸಿದಾಗ ಅದರ ವಿರುದ್ಧ ಸಾರ್ವಜನಿಕ ಹಿತಾಸಕ್ತಿ ದಾವೆಗಳ... ಅದರಿಂದಾಗಿ ತಮ್ಮ ಪವಿತ್ರ ಭೂಮಿಯನ್ನು ಕಳೆದುಕೊಳ್ಳಲಿರುವ ಆದಿವಾಸಿಗಳೂ ಸುಪ್ರೀಂಕೋರ್ಟಿನ ಮೆಟ್ಟಿಲನ್ನೇರಿದರು. ಮಾತ್ರವಲ್ಲ, ವೇದಾಂತಮ್‌ನ ... ಕಚೇರಿ ಇರುವ ಲಂಡನ್‌ನಲ್ಲೂ ದೊಡ್ಡ ಪ್ರತಿಭಟನೆಗಳನ್ನು ನಡೆಸಿದರು. ಒರಿಸ್ಸಾದಲ್ಲಿ ವೇದಾಂತಮ್ ಎಸಗುತ್ತಿರುವ ಮಾನವಹಕ್ಕುಗಳ ಉಲ್ಲ... ಪ್ರಕರಣಗಳನ್ನೂ ಅಲ್ಲಿನ ಯುರೋಪಿನ ಮಾಧ್ಯಮಗಳಿಗೆ ಮತ್ತು ಸಾರ್ವಜನಿಕರಿಗೆ ಅರ್ಥ ಮಾಡಿಸಿದರು. ಪರಿಣಾಮವಾಗಿ ಈ ಯೋಜನೆಯಿಂದ ... ಸರ್ಕಾರ ಹಿಂದೆ ಸರಿಯಿತಲ್ಲದೆ ಇಂಗ್ಲೆಂಡಿನ ಚರ್ಚ್ ಕೂಡ ಹೊರಬಂದಿತು.

ಆದರೆ ನಮ್ಮ ಸುಪ್ರೀಂಕೋರ್ಟಿನಲ್ಲಿ ಏನಾಯಿತು?

ಆದಿವಾಸಿಗಳ ಅಹವಾಲನ್ನೂ ಕೇಳದ, ಮಾನವಹಕ್ಕುಗಳ ಉಲ್ಲಂಘನೆಯ ವಿವರಗಳನ್ನೂ ತಿಳಿದುಕೊಳ್ಳುವ ತಾಳ್ಮೆಯನ್ನೂ ತೋರದ ಸುಪ್ರೀಂಕೋ... ವಿಭಾಗೀಯ ಪೀಠವೊಂದು ಜನವಿರೋಧಿ ತೀರ್ಪೊಂದನ್ನು ನೀಡಿತು. ಅಷ್ಟೇ ಅಲ್ಲ, ಆ ಪೀಠದ ನ್ಯಾಯಮೂರ್ತಿಗಳಲ್ಲಿ ಒಬ್ಬರು "ಓಕೆ, ಈ ಕಾಂಟ್ರಾ... ವೇದಾಂತಮ್‌ಗೆ ನೀಡುವುದು ಬೇಡ. ಬದಲಾಗಿ ಈ ಕಾಂಟ್ರಾಕ್ಟನ್ನು ಸ್ಟರ್‌ಲೈಟ್ ಕಂಪನಿಗೆ ನೀಡಿ... ಯಾಕೆಂದರೆ ಸ್ಟರ್‌ಲೈಟ್ ತುಂಬಾ ಒಳ್ಳೆಯ ಕಂಪನಿ. ಮತ್ತು ಆ ಕಂಪನಿಯ ಶೇರ್‌ಗಳನ್ನು ಹೊಂದಿದ್ದೇನೆ" ಎಂದು ನ್ಯಾಯಾಲಯದಲ್ಲೇ ಘೋಷಿಸಿದ್ದರು!


ಅಂದಹಾಗೆ, ಈ ಸ್ಟರ್‌ಲೈಟ್ ಕಂಪನಿ ಬೇರೆ ಯಾವುದೂ ಅಲ್ಲ, ವೇದಾಂತಮ್‌ನ ಪಾಲುದಾರಿಕೆಯಲ್ಲಿರುವ ಸಹಭಾಗಿ ಕಂಪನಿ!!

ಇದು ನ್ಯಾಯಮೂರ್ತಿಗಳಿಗೆ ಗೊತ್ತಿಲ್ಲದ ವಿಷಯವಾಗಿರಲಿಲ್ಲ!!

ಜೈ ನ್ಯಾಯಾಂಗ!







● ಸಾವಂತ್ರಿ

ಜನರ ಮೇಲೆ ಸರ್ಕಾರದ ಸಮರ

ಇನ್ನು ಕೆಲವೇ ದಿನಗಳಲ್ಲಿ ಮಳೆಗಾಲ ಮುಗಿಯುತ್ತಿದ್ದಂತೆಯೇ, ಭಾರತದಲ್ಲಿ ಹಿಂದೆಂದೂ ಕಂಡುಕೇಳರಿಯದಂತಹ ಅತಿ ದೊಡ್ಡ ಆಂತರಿಕ ಯುದ್ಧ ಪ್ರಾರಂಭವಾಗಲಿದೆ. ಈ ಯುದ್ಧಕ್ಕೆಂದೇ ಕಳೆದ ಒಂದು ವರ್ಷದಿಂದ ತಯಾರಿ ನಡೆಸಿರುವ ಕೇಂದ್ರ ಸರ್ಕಾರ ಈಗಾಗಲೇ 35,000 ಅರೆಸೇನಾಪಡೆಯನ್ನು ನಿಯೋಜಿಸಿದೆ. ಕಳೆದ ವಾರ ಕಾಶ್ಮೀರದಿಂದ ಹೆಚ್ಚುವರಿ 20,000 ಸೈನಿಕರನ್ನು ಕಳುಹಿಸಿದೆ. ಜೊತೆಗೆ 75 ಸಾವಿರದಿಂದ ಒಂದು ಲಕ್ಷದಷ್ಟು ಪ್ಯಾರಾ ಮಿಲಿಟರಿ ಯೋಧರೂ ಈ ಯುದ್ಧದಲ್ಲಿ ಭಾಗವಹಿಸಲಿದ್ದಾರೆ. ಅಷ್ಟೇ ಅಲ್ಲ, ರಾಜ್ಯ ಸರ್ಕಾರಗಳ ಪೊಲೀಸರೂ ಕೈಜೋಡಿಸಲಿದ್ದಾರೆ.

ಬಾಂಬ್ ನಿರೋಧಕ ಟ್ರಕ್ಕುಗಳನ್ನು, ಬಾಂಬ್ ನಿರೋಧಕ ಬ್ಲಾಂಕೆಟ್‌ಗಳನ್ನು ಹಾಗೂ ಅತ್ಯಾಧುನಿಕವಾದ ಶಸ್ತ್ರಾಸ್ತ್ರಗಳನ್ನು ಖರೀದಿಸಲಾಗುತ್ತಿದೆ. ಇದೆಲ್ಲದಕ್ಕಿಂತ ಹೆಚ್ಚಾಗಿ ಜಮ್ಮು-ಕಾಶ್ಮೀರ ಮತ್ತು ಈಶಾನ್ಯ ರಾಜ್ಯಗಳಲ್ಲಿ ರಕ್ತಪಾತ ಮಾಡಿ ಭೀಭತ್ಸ ವಾತಾವರಣ ಸೃಷ್ಟಿಸಿ ಕುಖ್ಯಾತವಾಗಿರುವ ರಾಷ್ಟ್ರೀಯ ರೈಫಲ್ಸ್ ಪಡೆಯನ್ನೂ ಆಖಾಡಕ್ಕಿಳಿಸುವ ಯೋಜನೆಯೂ ಸರ್ಕಾರದ ಮುಂದಿದೆ. ಜೊತೆಗೆ ವಾಯುಪಡೆಯನ್ನು ನಿಯೋಜಿಸುವ ಯೋಜನೆಯೂ ಇದೆ.

ಆಕಸ್ಮಾತ್ ಈ ದೊಡ್ಡ ಪಡೆ ನಿರೀಕ್ಷಿಸಿದ ಫಲವನ್ನು ಪಡೆಯದಿದ್ದರೆ ಭಾರತದ ಸೈನ್ಯವನ್ನೇ ರಣರಂಗಕ್ಕೆ ನುಗ್ಗಿಸುವ ಯೋಜನೆಯನ್ನು ಸರ್ಕಾರ ಸಿದ್ಧಮಾಡಿಟ್ಟುಕೊಂಡಿದೆ..

ಅಂದರೆ ಈ ಯುದ್ಧಕ್ಕೆಂದು ಕೇಂದ್ರ ಸರ್ಕಾರ ಸುಮಾರು ಎರಡು ಲಕ್ಷದಷ್ಟು ಸಂಖ್ಯೆಯ ಸೈನ್ಯವನ್ನು, ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು, ಯುದ್ಧ ಸಾಮಗ್ರಿಗಳನ್ನು ಸಿದ್ಧಗೊಳಿಸಿಕೊಂಡು ಭೀಕರ ಯುದ್ಧವನ್ನು ಸಾರಲು ಹೊರಟಿದೆ. ಈ ಬಲಿಷ್ಠ ಸೈನ್ಯ ಯುದ್ಧ ಸಾರಲಿರುವುದು ಯಾವುದೇ ಇತರೆ ವೈರಿ ದೇಶದ ವಿರುದ್ಧವಲ್ಲ.

ಬದಲಾಗಿ ಭಾರತೀಯರ ಮೇಲೆ ಯುದ್ಧ ಸಾರಲಿದೆ!

ಈ ಯುದ್ಧ ಕಾರ್ಯಾಚರಣೆಗೆ 'ಆಪರೇಷನ್ ಗ್ರೀನ್ ಹಂಟ್' ಎಂದೂ, ಸೈನ್ಯ ಪಡೆಗೆ COBRA (Cobra Batallion for Resolute Action) ಎಂದೂ ನಾಮಕರಣ ಮಾಡಲಾಗಿದೆ. ಈ ಕೋಬ್ರಾಗಳು-ಅಂದರೆ ಕಾಳಿಂಗ ಸರ್ಪಗಳು - ಬೇಟೆ ಆಡಲಿರುವುದು ಛತ್ತೀಸಗಢ, ಒರಿಸ್ಸಾ, ಜಾರ್ಖಂಡ್ ರಾಜ್ಯಗಳು ಸೇರಿದಂತೆ ದೇಶದ 200 ಜಿಲ್ಲೆಗಳಲ್ಲಿ ಹರಡಿರುವ ಮಾವೋವಾದಿ (ನಕ್ಸಲ್)ಗಳನ್ನು, ಅದಕ್ಕಿಂತ ಹೆಚ್ಚಾಗಿ ಮಧ್ಯಭಾರತದ ಆದಿವಾಸಿಗಳನ್ನು.

ಈ ಯುದ್ಧದ ಎರಡೂ ಕಡೆ ಇರುವವರು, ಬಂದೂಕುಗಳಿಗೆ ಬಲಿಯಾಗಲಿರುವವರು, ರಕ್ತ ಹರಿಸುವವರು, ಕಷ್ಟ-ನಷ್ಟ-ನೋವುಗಳನ್ನು ಅನುಭವಿಸುವವರು – ಎಲ್ಲರೂ ಭಾರತೀಯರೆ. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಭಾರತ ಸರ್ಕಾರ ಭಾರತೀಯರ ಮೇಲೆಯೇ ದೊಡ್ಡ ಮಟ್ಟದ ಯುದ್ಧವನ್ನು ಸಾರಲು ಸಜ್ಜಾಗಿ ನಿಂತಿದೆ.

ದೇಶದಲ್ಲಿ ಸಮಾನತೆ ಸ್ಥಾಪಿಸಲು ಮಾವೋವಾದಿಗಳು ಹಿಡಿದಿರುವ ಸಶಸ್ತ್ರ ಹೋರಾಟದ ಮಾರ್ಗವನ್ನಾಗಲಿ, ಅವರು ನಡೆಸಿರುವ ಹಿಂಸಾತ್ಮಕ ಕೃತ್ಯಗಳನ್ನಾಗಲಿ, ಕೊಲೆಗಳನ್ನಾಗಲಿ ಯಾರೂ ಸಮರ್ಥಿಸುವುದಿಲ್ಲ, ಆದರೆ ಈ ದೇಶದ ಸಂಪನ್ಮೂಲಗಳಿಂದ ವಂಚಿತರಾಗಿರುವ, ಅಪಾರ ದೌರ್ಜನ್ಯ ಮತ್ತು ಶೋಷಣೆಯನ್ನು ಎದುರಿಸುತ್ತಿರುವ, ಒಂದು ಹೊತ್ತಿನ ಊಟಕ್ಕೂ ಪರದಾಡುತ್ತಿರುವ ಬಡವರ ಕುರಿತು ಮಾವೋವಾದಿಗಳು ಎತ್ತಿರುವ ಪ್ರಶ್ನೆಗಳನ್ನು ಯಾವ ಮಾನವೀಯ ಪ್ರಜ್ಞೆಯುಳ್ಳ ಮನುಷ್ಯನೂ ನಿರಾಕರಿಸಲಾಗುವುದಿಲ್ಲ, ಆದರೆ ಆ ಪ್ರಶ್ನೆಗಳಿಗೆ ಸರ್ಕಾರದ ಬಳಿ ಉತ್ತರವಿಲ್ಲ, ಮಾತ್ರವಲ್ಲ, ಮಾವೋವಾದಿಗಳು ಎತ್ತಿರುವ ಪ್ರಶ್ನೆಗಳೊಂದಿಗೆ ಅವರ ಸಶಸ್ತ್ರ ಹೋರಾಟವೂ ಭಾರತ ಸರ್ಕಾರಕ್ಕೆ ಅತಿದೊಡ್ಡ ಆಂತರಿಕ ಬೆದರಿಕೆಯಾಗಿ ಕಾಣಿಸುತ್ತಿದೆ. ಆದ್ದರಿಂದ ಬಂದೂಕಿನಿಂದ ಆ ಪ್ರಶ್ನೆಗಳನ್ನು ಹತ್ತಿಕ್ಕಲು ಹೊರಟಿದೆ. ಕಣ್ಣಮುಂದೆ ಕಸದರಾಶಿ ಇವೆ ಎಂದು ಹೇಳಿದವರ ಕಣ್ಣನ್ನೇ ಕೀಳಲು ಹೊರಟಿದೆ ಸರ್ಕಾರ.

ಸರ್ಕಾರ ತನ್ನದೇ ನಾಗರಿಕರ ಮೇಲೆ ಇಂತಹದ್ದೊಂದು ಯುದ್ಧ ಸಾರುವುದಕ್ಕೆ ಸಿದ್ಧವಾಗುತ್ತಿರುವುದು ಈ ದೇಶದ ಅನೇಕ ಶಾಂತಿಪ್ರಿಯ ನಾಗರಿಕರ, ಬುದ್ಧಿಜೀವಿಗಳ ನಿದ್ದೆಗೆಡಿಸಿದೆ. ಈ ಹಿಂದೆ ಪ್ರಧಾನಿ ಇಂದಿರಾ ಗಾಂಧಿಗೆ ಆರ್ಥಿಕ ಸಲಹೆಗಾರರಾಗಿದ್ದ ಅರ್ಜುನ್ ಸೇನ್ ಗುಪ್ತ ಅವರು ಮೊನ್ನೆ - ಅಂದರೆ ಸೆಪ್ಟೆಂಬರ್ 15 ರಂದು - ಪ್ರಧಾನಿ ಮನಮೋಹನ್ ಸಿಂಗ್‌ಗೆ ಪತ್ರ ಬರೆದು 'ನಕ್ಸಲಿಸಂ ಎಂಬುದು ನಾವು ಕೇಳಿಸಿಕೊಳ್ಳಲೇಬೇಕಾದ ಕೂಗು' ಎಂದು ಮನವಿ ಮಾಡಿಕೊಂಡಿದ್ದಾರೆ. "ನಕ್ಸಲೀಯ ಚಳವಳಿ ಎಂಬುದು ಇನ್ನಿತರ ಹಿಂಸಾತ್ಮಕ ಚಳವಳಿಗಿಂತ ಭಿನ್ನವಾಗಿದ್ದು ಅದು ಕೇವಲ ಕಾನೂನು ಸುವ್ಯವಸ್ಥೆಯ ಸಮಸ್ಯೆಯಲ್ಲ, ಜನ ನಿರಂತರವಾಗಿ ಅನುಭವಿಸುತ್ತಾ ಬಂದಿರುವ ಕಷ್ಟಕಾರ್ಪಣ್ಯಗಳು, ದಮನದೌರ್ಜನ್ಯಗಳು ಆ ಚಳವಳಿಯ ಹುಟ್ಟಿಗೆ, ಉಳಿವಿಗೆ ಕಾರಣವಾಗಿವೆ. ಈ ಸಮಸ್ಯೆಗಳನ್ನು ಬಗೆಹರಿಸದೆ ಕೇವಲ ಮಿಲಿಟರಿ ಶಕ್ತಿಯ ಮೂಲಕ ಅದನ್ನು ದಮನ ಮಾಡಲು ಹೋದರೆ ನಮ್ಮದೇ ಅಮಾಯಕ ನಾಗರಿಕರ ರಕ್ತಪಾತವಾಗುತ್ತದೆ" ಎಂದು ಸರ್ಕಾರವನ್ನು ಎಚ್ಚರಿಸಿದ್ದಾರೆ.

ಆದರೆ, ಪ್ರಧಾನಿ ಮನಮೋಹನ್ ಸಿಂಗ್ ಆಗಲಿ, ಗೃಹ ಸಚಿವ ಪಿ.ಚಿದಂಬರಂ ಆಗಲಿ ಅಂತಹ ಯಾವುದೇ ಮನವಿಗೆ ಕಿವಿಗೊಡುವುದಕ್ಕೆ ಸಿದ್ಧರಿಲ್ಲ.

ನಕ್ಸಲಿಸಂ ಎಂಬುದು ಏನು? ಅದು ಯಾಕೆ ಹುಟ್ಟಿತು, ಯಾಕೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬೆಳೆಯಿತು, ಕಳೆದ ಮೂವತ್ತೈದು ವರ್ಷಗಳಿಂದ ಅನೇಕ ಸರ್ಕಾರಗಳು ಅನೇಕ ದಮನ ಕಾರ್ಯಾಚರಣೆಗಳನ್ನು ನಡೆಸಿದ್ದರೂ ಅದನ್ನು ಯಾಕೆ ನಿರ್ನಾಮ ಮಾಡಲು ಸಾಧ್ಯವಾಗಿಲ್ಲ, ಆದಿವಾಸಿ ಮತ್ತು ರೈತ ಸಮೂಹದ ಅಪಾರ ಜನಬೆಂಬಲವಿಲ್ಲದಿದ್ದರೆ ಅದು ಮೂವತ್ತೈದು ವರ್ಷಗಳಷ್ಟು ಸುದೀರ್ಘ ಕಾಲ ಉಳಿಯಲು ಸಾಧ್ಯವಾಗುತ್ತಿತ್ತೆ - ಈ ಯಾವ ವಿಚಾರಗಳನ್ನೂ ಕೇಳಿಸಿಕೊಳ್ಳಲು ಅವರು ಸಿದ್ಧರಿಲ್ಲ, ಅಂದರೆ, ನಕ್ಸಲಿಸಂಅನ್ನು ಕೇವಲ ಒಂದು ಕಾನೂನು ಸುವ್ಯವಸ್ಥೆಯ ಪ್ರಶ್ನೆಯನ್ನಾಗಿ ನೋಡುತ್ತಾ ಮಿಲಿಟರಿ ಶಕ್ತಿಯ ಮೂಲಕ ದಮನ ಮಾಡುವುದಕ್ಕೆ ಪ್ರಯತ್ನಿಸಲು ಹೊರಟಿದ್ದಾರೆಯೇ ಹೊರತು ಅದಕ್ಕಿರುವ ಸಾಮಾಜಿಕಾರ್ಥಿಕ ಆಯಾಮಗಳನ್ನು ನೋಡುವುದಕ್ಕೆ ಯಾರೂ ಸಿದ್ಧವಿಲ್ಲ.

▶▶▶



...ಮೂಹಿಕ ಮಾರಣಹೋಮವೂ, ಅಭಿವೃದ್ಧಿಯ ಮಂತ್ರವೂ....

...ಗಿವತ್ತು ಸೂಪರ್ ಪವರ್‌ಗಳಾಗಿರುವ ದೇಶಗಳ ಇತಿಹಾಸವನ್ನು ನೋಡಿದರೆ ಅವುಗಳು ಸಾಧಿಸಿರುವ ಅಭಿವೃದ್ಧಿಗೂ, ಆ ಪ್ರಕ್ರಿಯೆಯಲ್ಲಿ ಜನಸಮುದಾಯಗಳನ್ನು ಅವು ನಾಶ ಮಾಡಿದ್ದಕ್ಕೂ ನೇರಾನೇರ ಸಂಬಂಧ ಕಂಡುಬರುತ್ತದೆ.

...ತ್ತ ಅಮೆರಿಕದ ಬುಡಕಟ್ಟು ಜನಾಂಗವಾದ ರೆಡ್ ಇಂಡಿಯನ್ನರನ್ನು ಯೂರೋಪಿನ ವಲಸಿಗರು ಬಹುಸಂಖ್ಯೆಯಲ್ಲಿ ಕೊಂದು, ಅವರ ... ಮೇಲೆ 'ಚಿನ್ನದ ಇಟ್ಟಿಗೆಗಳಿಂದ ಪಾದಚಾರಿ ರಸ್ತೆಗಳನ್ನು' ನಿರ್ಮಿಸಿದ್ದರೆ ಇತ್ತ ಆಸ್ಟ್ರೇಲಿಯಾದಲ್ಲೂ ಸ್ಥಳೀಯ ಅಬಂಜಿನಿ ಜನರನ್ನು ...ವ ಮೂಲಕವೇ ಆ ದ್ವೀಪ ದೇಶಕ್ಕೆ ಬಂಧಿತರಾಗಿ ಬಂದ ಯುರೋಪಿನ ಕೈದಿಗಳು ನೆಲೆ ಕಂಡುಕೊಂಡರು. ಈ ಮಧ್ಯೆ ಯುರೋಪಿನ ...ಗೂ ಕೂಡ ಜನಾಂಗೀಯ ದ್ವೇಷವನ್ನು ಅನುಸರಿಸಿಯೇ ಸೂಪರ್ ಪವರ್‌ಗಳಾಗಿ ನಿರ್ಮಾಣಗೊಂಡವು.

...ಪರ್‌ಪವರ್ ದೇಶಗಳ ಈ ರಕ್ತಸಿಕ್ತ ಇತಿಹಾಸ ಭಾರತದ ಸುಶಿಕ್ಷಿತ ಮಧ್ಯಮ ವರ್ಗ ಮತ್ತು ಮೇಲುವರ್ಗಗಳಿಗೆ ಗೊತ್ತಿಲ್ಲ ...ನಲ್ಲ. ಅದೆಲ್ಲ ಅವರಿಗೆ ಚೆನ್ನಾಗಿ ಗೊತ್ತಿರುವುದರಿಂದಲೇ ಅವರೂ ಕೂಡ ಇವತ್ತು "ಅಭಿವೃದ್ಧಿಗಾಗಿ ಜನಸಮುದಾಯಗಳ ಮಾರಣಹೋಮ ...ದರೂ ಪರವಾಗಿಲ್ಲ'' ಎಂಬ ನಿಲುವನ್ನು ತಾಳಿದ್ದಾರೆ. ಹಲವಾರು ಸಮೀಕ್ಷೆಗಳ ಪ್ರಕಾರ ಭಾರತದಲ್ಲಿ ಇಂದು ಕನಿಷ್ಠ 30 ಕೋಟಿ ಮಧ್ಯಮ ...ವರ್ಗದವರಿದ್ದಾರೆ. ಕಳೆದ ಎರಡು ದಶಕಗಳ ಮುಕ್ತ ಮಾರುಕಟ್ಟೆ ಎಂಬ ಆರ್ಥಿಕ ನೀತಿಯಿಂದಾಗಿ ಈ 30 ಕೋಟಿ ಮಧ್ಯಮ ವರ್ಗದವರು ... ಆರ್ಥಿಕ ಶಕ್ತಿ ಗಳಿಸಿದ್ದಾರೆ. ಅವರಿಗೆ ಇಂದು ಹೊಸ ಮಾಡೆಲ್ ಕಾರ್‌ಗಳು, ಹೊಸ ತಂತ್ರಜ್ಞಾನ ಹೊಂದಿರುವ ಎಲೆಕ್ಟ್ರಾನಿಕ್ ವಸ್ತುಗಳು ...ಬೇಕ ಆಗುತ್ತವೆ. ಇಂತಹವೆಲ್ಲ ಅವರ ಕೈಗಳಿಗೆ ಸಿಗಬೇಕೆಂದರೆ ಭಾರತದಲ್ಲಿ ಹೆಚ್ಚುಹೆಚ್ಚು ಕಂಪನಿಗಳು ತಮ್ಮ ಬಂಡವಾಳವನ್ನು ...ಬೇಕಿದೆ. ಹಾಗೆಯೇ ಇವರೆಲ್ಲರ ಕೊಳ್ಳುಬಾಕು ಪ್ರವೃತ್ತಿಯನ್ನು ಈಡೇರಿಸಲು ಹಲವಾರು ಬಹುರಾಷ್ಟ್ರೀಯ ಕಂಪನಿಗಳು ತುದಿಗಾಲ ...ನಿಂತಿವೆ. ಆದರೆ ಪಾಪ, ಈ ಮಧ್ಯಮ ವರ್ಗದ ಕೊಳ್ಳುಬಾಕು ಸಂಸ್ಕೃತಿಗೂ, ಬಹುರಾಷ್ಟ್ರೀಯ ಕಂಪನಿಗಳ ದರೋಡೆಕೋರ ...ಗೂ ಭಾರತದ ಶೇ. 70 ರಷ್ಟಿರುವ ಆದಿವಾಸಿಗಳು, ದಲಿತರು ಮತ್ತು ಹಿಂದುಳಿದವರು ದೊಡ್ಡ ಅಡ್ಡಿಗಳಾಗಿ ನಿಂತಿದ್ದಾರೆ. ಅಂದರೆ ...ದೇಶದ ಶೇ. 10 ಸಂಪತ್ತನ್ನು ಹೊಂದಿರುವ ಶೇ. 10 ಮಧ್ಯಮ ವರ್ಗದವರ ವಿರುದ್ಧ ಈ ದೇಶದ ಕೇವಲ ಶೇ. 10 ರಷ್ಟು ಸಂಪತ್ತನ್ನು ...ರುವ ಶೇ. 70 ರಷ್ಟು ಜನ ನಿಂತಿದ್ದಾರೆ!

ಈ ಕಾರಣಕ್ಕಾಗಿಯೇ ಈ ಶೇ. 70 ರಷ್ಟು ಜನರನ್ನು ಅಂದರೆ ಭಾರತದ ಜನಸಂಖ್ಯೆಯ 75 ಕೋಟಿ ಜನರನ್ನು ಸಾಮೂಹಿಕ ...ಣಹೋಮಕ್ಕೆ ದೂಡಿದರೂ ಸೈ, ತಮಗೆ "ಅಭಿವೃದ್ಧಿ" ಬೇಕೆಂದು ಇದೇ ಮಧ್ಯಮ ವರ್ಗ, ಅದನ್ನು ಬೆಂಬಲಿಸುತ್ತಿರುವ ಕಾರ್ಪೊರೇಟ್ ...ಗಳ ಜಾಹೀರಾತುಗಳನ್ನು ಅವಲಂಬಿಸಿರುವ ಮಾಧ್ಯಮಗಳು, ಅಂತಹ ಮಾಧ್ಯಮಗಳ ನೆರವಿನಿಂದ ಚುನಾವಣೆಗಳಲ್ಲಿ ಗೆಲ್ಲುತ್ತಿರುವ ...ನಿಧಿಗಳು ಇವತ್ತು ಚೀರಾಡುತ್ತಿದ್ದಾರೆ; 'ಆಪರೇಷನ್ ಗ್ರೀನ್ ಹಂಟ್'ಗೆ ಪರೋಕ್ಷವಾಗಿ ತಮ್ಮ ಸಮ್ಮತಿಯನ್ನು ಸೂಚಿಸುತ್ತಿದ್ದಾರೆ. ದೇಶದ ...ದ್ಧಿಗೆ ಅಡ್ಡಿಯಾಗುತ್ತಿರುವವರನ್ನು 'ಮುಗಿಸಿದರೆ' ಯಾವ ಸಮಸ್ಯೆನೂ ಇಲ್ಲ ಎಂಬ ಭಾವನೆಯನ್ನು ಪ್ರದರ್ಶಿಸುತ್ತಿದ್ದಾರೆ.

ಶ್ರೀಲಂಕಾ ಪ್ರೇರಣೆ

...ಸ್ವ ದೇಶದ ಗಡಿಯೊಳಗೆ, ತನ್ನ ದೇಶದ ಪ್ರಜೆಗಳ ಮೇಲೆ ಇಂತಹ ದೊಡ್ಡ ಯುದ್ಧವನ್ನು ಸಾರಲು ಭಾರತ ಸರ್ಕಾರ ಪಕ್ಕದ ಶ್ರೀಲಂಕಾ ...ದಿಂದ ಸ್ಫೂರ್ತಿ ಪಡೆದಿದೆ. ಇದೇ ವರ್ಷ, ದ್ವೀಪ ರಾಷ್ಟ್ರವಾದ ಶ್ರೀಲಂಕೆಯಲ್ಲಿ, ಅದೇ ದೇಶದ ಜನಸಮುದಾಯವಾದ ತಮಿಳರ ಮೇಲೆ ... ಸಾರಿ 'ಜಯ' ಗಳಿಸಿತು; ತಮಿಳರ ಸಂಘಟನೆಯಾದ LTTE ಯನ್ನು ನಿರ್ನಾಮ ಮಾಡಿ ಅದರ ನಾಯಕ ಪ್ರಭಾಕರನ್‌ನನ್ನು ಕೊಂದು ...ಸೋತ್ಸವ ಆಚರಿಸಿತು; ಪುನರ್ವಸತಿ ಹೆಸರಿನಲ್ಲಿ ಎಲ್ಲಾ ತಮಿಳರನ್ನು ಕೊಂಪೆಗಳಂತಹ ಶಿಬಿರಗಳಿಗೆ ದೂಡಿತು. ಇವತ್ತಿಗೂ ಆ ಶಿಬಿರಗಳಲ್ಲಿ ...ಯುತ್ತಿರುವ ಹಿಂಸೆ, ಸಾವು, ಕಾಣೆಯಾದವರ ಬಗ್ಗೆ ಸುದ್ದಿಗಳು ಬರುತ್ತಲೇ ಇವೆ. ಮಾನವಹಕ್ಕುಗಳ ಹೋರಾಟಗಾರರು ಅವುಗಳನ್ನು ...ತ್ತಿದ್ದಾರೆ.

...ಮಿಳರ ವಿರುದ್ಧ ಯುದ್ಧ ಸಾರುವ ಮುನ್ನ ಶ್ರೀಲಂಕಾ ಸರ್ಕಾರ ಎಂತೆಂತಹ ಸಿದ್ಧತೆಗಳನ್ನು ಮಾಡಿತ್ತೋ ಅವುಗಳನ್ನು ಭಾರತ ಸರ್ಕಾರ ...ಅನುಸರಿಸಿದೆ. ಮೊದಲನೆಯದಾಗಿ ತನ್ನ ದೇಶದೊಳಗೆ ನಡೆಯಲಿರುವ ಯುದ್ಧಕ್ಕೆ ಜಗತ್ತಿನ ದೊಡ್ಡಣ್ಣ ಅಮೆರಿಕದ ನೆರವು ಪಡೆದಿದೆ. ...ಗೆ ಈ ಕಾರಣಕ್ಕಾಗಿಯೇ ಅಮೆರಿಕಕ್ಕೆ ಭೇಟಿ ನೀಡಿದ ಗೃಹ ಸಚಿವ ಚಿದಂಬರಂ ಮಾವೋವಾದಿಗಳ ಬಂಡಾಯವನ್ನು ದಮನ ಮಾಡುವ ...ಮೆರಿಕದ ಸಲಹೆ-ಸೂಚನೆಗಳನ್ನು ಪಡೆದು ಬಂದಿದ್ದಾರಲ್ಲದೆ, ಮಾಹಿತಿ ಸಂಗ್ರಹಣೆ ಮತ್ತು ಮಾರ್ಗದರ್ಶನ ನೀಡಲು ಅಮೆರಿಕ ಒಪ್ಪಿದೆ. ...ಎರಡನೆಯದಾಗಿ, ಶ್ರೀಲಂಕಾದಂತೆ ಭಾರತವೂ ಮಾವೋವಾದಿಗಳ ವಿರುದ್ಧ ಪ್ರಚಾರಾಂದೋಲನವನ್ನು ಜಾರಿಗೊಳಿಸಿದೆ. ಇತ್ತೀಚೆಗೆ ಎಲ್ಲಾ ...ಯ ಪತ್ರಿಕೆಗಳಲ್ಲಿ 'ನಕ್ಸಲರು ಕೊಲೆಗಡುಕರು' ಎಂದು ಸಾರುವ ಜಾಹೀರಾತುಗಳನ್ನು ಬಿಡುಗಡೆ ಮಾಡಲಾಗಿತ್ತು. ಇದರ ಜೊತೆಗೆ ...ವೇ ಟಿವಿ ಚಾನೆಲ್‌ಗಳು ಈ ವಿಚಾರ ಕುರಿತು ಚರ್ಚೆಗಳನ್ನು ನಡೆಸುತ್ತಿವೆಯಾದರೂ ಅವುಗಳೆಲ್ಲ "ನಕ್ಸಲರನ್ನು ನಿರ್ನಾಮ ಮಾಡಬೇಕು" ...ತಹ ನಿಲುವನ್ನೇ ಸಾದರಪಡಿಸುತ್ತಿವೆ.

...ಮೂರನೆಯದಾಗಿ, ಶ್ರೀಲಂಕಾದಲ್ಲಾದಂತೆ ಯಾರೂ ಸರ್ಕಾರದ ಕ್ರಮವನ್ನು ಪ್ರಶ್ನಿಸದಂತೆ ಇಲ್ಲೂ ಕಾನೂನುಗಳನ್ನು, ಪೊಲೀಸ್ ರಾಜ್ಯವನ್ನು ...ಾಗಿದೆ. ತಮಿಳರ ವಿರುದ್ಧದ ಶ್ರೀಲಂಕಾ ಸರ್ಕಾರದ ಕ್ರಮವನ್ನು ಪ್ರಶ್ನಿಸಿದ್ದಕ್ಕೆ ವಸಂತ ವಿಕ್ರಮತುಂಗೆಯಂಥ ಹತ್ತಾರು ಪತ್ರಕರ್ತರನ್ನು ...ಕಾ ಸೇನೆ ಕೊಂದು ಹಾಕಿತು. ಹಾಗೆಯೇ ಇಲ್ಲಿ ದಾಂತೆವಾಡದಲ್ಲಿ ಛತ್ತೀಸಗಢದ ಪೊಲೀಸರು ನಡೆಸುತ್ತಿದ್ದ ಆದಿವಾಸಿಗಳ ಮಾರಣಹೋಮವನ್ನು ...ಕ್ಕೆ ಗಾಂಧಿವಾದಿ ಹಿಮಾಂಶು ಕುಮಾರ್ ಅವರ ಆಶ್ರಮವನ್ನೇ ಪೊಲೀಸರು ಮೊನ್ನೆ ನಾಶಗೊಳಿಸಿದ್ದಾರೆ. ಇದು ಆರಂಭದ ರುಚಿ ಅಷ್ಟೇ. ...ಮ್ಮನೆ ಮತ್ತು ಕೊನೆಯದಾಗಿ ಶ್ರೀಲಂಕಾದ ತಮಿಳರು ತಮ್ಮ ಹಕ್ಕುಗಳಿಗಾಗಿ ಹೋರಾಡಿದ್ದನ್ನೇ ದೇಶದ್ರೋಹದ ಕೆಲಸ ಎಂದು ಅಲ್ಲಿ ...ದಂತೆ ಇಲ್ಲಿಯೂ ಆದಿವಾಸಿಗಳು ತಮ್ಮ ಭೂಮಿಯನ್ನು, ತಮ್ಮ ಜೀವನಕ್ರಮ, ಸಂಸ್ಕೃತಿ, ಆಚಾರಗಳೊಂದಿಗೆ ಬೆಸೆದುಕೊಂಡಿರುವ ...ಬೆಟ್ಟಗಳನ್ನು ರಕ್ಷಿಸಬೇಕೆಂದು, ಅವುಗಳನ್ನು ದೇಶಿ-ವಿದೇಶಿ ಕಂಪನಿಗಳಿಗೆ ನೀಡಬಾರದೆಂದು, ಅಲ್ಲಿ ವಾಸಿಸುವುದು ತಮ್ಮ ಹಕ್ಕೆಂದು ...ಡುತ್ತಿರುವುದನ್ನು ದೇಶದ್ರೋಹಿ ಕೆಲಸ ಎಂದೇ ಪ್ರಚುರಪಡಿಸಲಾಗುತ್ತಿದೆ.

...ಲ್ಲಕ್ಕೂ ಕುಮ್ಮಕ್ಕು ಕೊಡುವಂತೆ ಹಲವಾರು ಅಧಿಕಾರಿಗಳು "ಶ್ರೀಲಂಕಾದಂತಹ ಕ್ರಮವನ್ನು ಇಲ್ಲಿಯೂ ಕೈಗೊಳ್ಳುತ್ತೇವೆ" ಎಂದು ...ದ್ದಾರೆ. ಅದನ್ನು ನಡೆಸುವುದು ಹೇಗೆ ಎಂದು ಸಣ್ಣ ಪ್ರಮಾಣದಲ್ಲಿ ಈಗಾಗಲೇ ಇಂತಹದ್ದೇ ಬಂಡಾಯವನ್ನು ಹೂಡಿದ್ದ ಪಶ್ಚಿಮ ...ದ ಲಾಲ್‌ಗಢದ ಆದಿವಾಸಿಗಳ ಮೇಲೆ ಪ್ರಯೋಗ ನಡೆಸಲಾಗಿದೆ. ಇಂಗ್ಲಿಷ್‌ನಲ್ಲಿ ಇದನ್ನು 'ಡ್ರೈ ರನ್' ಎಂದು ಕರೆಯುತ್ತಾರೆ.

ಸಲ್ವಾ ಜುಡುಂನಿಂದ ಕಲಿಯದ ಪಾಠ

ಹಿಂದೆ ಮಾವೋವಾದಿಗಳನ್ನು ಹತ್ತಿಕ್ಕಲು ಛತ್ತೀಸಗಡ ಸರ್ಕಾರ ಸಲ್ವಾ ಜುಡುಂ ಎಂಬ ಅಭಿಯಾನ ಪ್ರಾರಂಭಿಸಿತ್ತು. ಆದಿವಾಸಿಗಳಲ್ಲೇ ...ಯುವಕರಿಗೆ ಅನೇಕ ಆಮಿಷಗಳನ್ನು ಒಡ್ಡಿ ತನ್ನೆಡೆಗೆ ಸೆಳೆದುಕೊಂಡ ಛತ್ತೀಸ್‌ಗಢ ಪೊಲೀಸರು ಅವರ ಕೈಗಳಿಗೆ ಬಂದೂಕುಗಳನ್ನು, ...ನ್ನು ಬಳಸುವುದಕ್ಕೆ ತರಬೇತಿಯನ್ನು ಹಾಗೂ ತಿಂಗಳ ಲೆಕ್ಕದಲ್ಲಿ ದುಡ್ಡನ್ನು ಕೊಟ್ಟು ನಕ್ಸಲರನ್ನು ಬೆಂಬಲಿಸುವ ಆದಿವಾಸಿ ಜನರನ್ನು, ...ಮನೆಮಠಗಳನ್ನು, ಹೊಲಗದ್ದೆಗಳನ್ನು ಸರ್ವನಾಶ ಮಾಡಲು ಹುರಿದುಂಬಿಸಿದ್ದರು. ಪರಿಣಾಮವಾಗಿ ಪೊಲೀಸರಿಂದ ತರಬೇತುಗೊಂಡ ...ಜುಡುಂ ಪಡೆಗಳು ಆದಿವಾಸಿ ಗಿರಿಜನರ ಹಾಡಿಗಳನ್ನು, ಅವರ ಹೊಲಗದ್ದೆಗಳನ್ನು ಧ್ವಂಸ ಮಾಡಿಹಾಕಿದರಲ್ಲದೇ ನೂರಕ್ಕೂ ಹೆಚ್ಚು ...ಕ ಆದಿವಾಸಿಗಳನ್ನು ನಕ್ಸಲರ ಬೆಂಬಲಿಗರು ಎಂಬ ಹಣೆಪಟ್ಟಿ ಕಟ್ಟಿ ಕೊಂದು ಹಾಕಿದವು. ನೂರಾರು ಮಹಿಳೆಯರು ಅತ್ಯಾಚಾರಕ್ಕೊಳಗಾದರು.

▶▶▶18

ಖನಿಜ ಸಂಪತ್ತಿನ ಲೂಟಿಗಾಗಿಯೇ

ರಕ್ತಪಾತ ಮಾಡಿಯಾದರೂ ಸರಿ ಮಾವೋವಾದಿಗಳನ್ನು ಹೊಸಕಿ ಹಾಕುವುದಕ್ಕೆ ಚಿದಂಬರಂ ಯಾಕಿಷ್ಟು ಉತ್ಸುಕರಾಗಿದ್ದಾರೆ ಎಂದು ಕೆದಕುತ್ತಾ ಹೋದರೆ ಈ ಅಂತಿಮ ಯುದ್ಧದ ಅಸಲೀ ಕಾರಣಗಳು ಕಣ್ಣಿಗೆ ರಾಚುತ್ತವೆ. ಮಾವೋವಾದಿ ಚಳವಳಿ ಛತ್ತೀಸ್‌ಗಢ, ಜಾರ್ಖಂಡ್, ಒರಿಸ್ಸಾಗಳನ್ನೊಳಗೊಂಡ ಮಧ್ಯ ಭಾರತದ ವಿಸ್ತಾರವಾದ ಭೂಪ್ರದೇಶದಲ್ಲಿ ಭದ್ರವಾಗಿ ನೆಲೆಯೂರಿದೆ. ಈ ವಿಶಾಲ ಭೂಪ್ರದೇಶದ ಇಂಚಿಂಚೂ ಅಕ್ಷರಶಃ ಖನಿಜ ಸಂಪತ್ತಿನ ಭಂಡಾರದಿಂದ ತುಂಬಿದೆ.

ಒರಿಸ್ಸಾ, ಛತ್ತೀಸಗಢ, ಜಾರ್ಖಂಡ್ ರಾಜ್ಯಗಳಲ್ಲಿನ ಕಾಡು-ಮೇಡುಗಳಲ್ಲಿ ವಾಸಿಸುತ್ತಿರುವ ಆದಿವಾಸಿಗಳು ಇವತ್ತಿನವರೆಗೂ ಸರ್ಕಾರವನ್ನು ಕಂಡಿಲ್ಲ, ಸರ್ಕಾರ ಅಂತ ಅವರೇನಾದರೂ ನೋಡಿದ್ದರೆ ಅದು ಪೊಲೀಸರ ದೌರ್ಜನ್ಯದ ರೂಪದಲ್ಲಿ ಮಾತ್ರ. ಬಡವರಲ್ಲೇ ಅತಿ ಬಡವರಾದ ಈ ಆದಿವಾಸಿಗಳು ಇವತ್ತಿಗೂ ಪಡಿತರ ಚೀಟಿಯನ್ನು ನೋಡಿಲ್ಲ, ಸರ್ಕಾರಿ ದವಾಖಾನೆಯ ಬಾಗಿಲನ್ನು ಕಂಡಿಲ್ಲ, ಇನ್ನೂ ಶಾಲೆ, ವಸತಿ, ಕೃಷಿ ಇಲಾಖೆ ಇತ್ಯಾದಿಗಳ ಬಗ್ಗೆ ಅವರಿಗೆ ಗೊತ್ತೂ ಇಲ್ಲ. ಇವತ್ತಿಗೂ ಜಾತಿ, ಧರ್ಮಗಳಿಂದ ದೂರವೇ ಉಳಿದಿರುವ ಆದಿವಾಸಿಗಳು ತಮ್ಮ ಭೂಮಿ ಮತ್ತು ಪರಿಸರವನ್ನೇ ನೆಚ್ಚಿರುವ, ಪೂಜಿಸುವ, ರಕ್ಷಿಸುವ ಪಣತೊಟ್ಟಿರುವ ಮುಗ್ಧರು; ಗುಡ್ಡಗಳನ್ನು, ಜಲಮೂಲಗಳನ್ನು ಪವಿತ್ರ ಎಂದೇ ಭಾವಿಸಿರುವ ಪರಿಸರ ಪ್ರೇಮಿಗಳು.

ವಿಪರ್ಯಾಸ ಎಂತಹದ್ದು ನೋಡಿ. ಅವರೆಲ್ಲ ದಟ್ಟ ದಾರಿದ್ರ್ಯದಲ್ಲಿ ಜೀವಿಸುತ್ತಿದ್ದರೂ ಅವರಿರುವ ಭೂಮಿಯ ತನ್ನ ಒಡಲಲ್ಲಿ ಅಪಾರ ಸಂಪತ್ತು ಅಡಗಿದೆ. ವಿಶೇಷವಾಗಿ ಛತ್ತೀಸ್‌ಗಡವನ್ನು ಇಡೀ ದೇಶದಲ್ಲೇ ಅತ್ಯಂತ ಹೆಚ್ಚು ಖನಿಜ ಸಂಪತ್ತನ್ನು ಹೊಂದಿದ ಸಂಪದ್ಭರಿತ ರಾಜ್ಯ ಎಂದು ಪರಿಗಣಿಸಲಾಗುತ್ತದೆ. ಇಡೀ ದೇಶದಲ್ಲಿ ದೊರೆಯುವ ಕಲ್ಲಿದ್ದಲು ಸಂಪತ್ತಿನ ಮುಕ್ಕಾಲು ಭಾಗ ಛತ್ತೀಸ್‌ಗಡದಲ್ಲೇ ಇದೆ. ಇಡೀ ದೇಶದ ಐದನೇ ಒಂದು ಭಾಗದಷ್ಟು ಕಬ್ಬಿಣದ ಅದಿರು ಇರುವುದು ಛತ್ತೀಸ್‌ಗಢದಲ್ಲೇ. ಇಡೀ ವಿಶ್ವದಲ್ಲೇ ಅತ್ಯುತ್ಕೃಷ್ಟ ದರ್ಜೆಯ ಕಬ್ಬಿಣದ ಅದಿರು ಸಿಗುವುದು ಛತ್ತೀಸ್‌ಗಡದ ಬೈಲಾಡಿಲ್ಲಾದಲ್ಲಿ. ಅಲ್ಲದೆ, ಬಾಕ್ಸೈಟ್, ಸುಣ್ಣದಕಲ್ಲು, ಡೋಲೋಮೈಟ್, ಕೊರಂಡಮ್, ವಜ್ರಗಳನ್ನೂ ಒಳಗೊಂಡಂತೆ 28 ವಿಧದ ಅತ್ಯಮೂಲ್ಯ ಖನಿಜ ಸಂಪತ್ತಿನ ಭಂಡಾರವೇ ಇಡೀ ಛತ್ತೀಸ್‌ಗಡದಾದ್ಯಂತ ಹರಡಿಕೊಂಡಿದೆ. ಟಾಟಾ ಸ್ಟೀಲ್, ಎಸ್ಸಾರ್, ಜಿಂದಾಲ್, ಜೈಸ್ವಾಲ್‌ಗಳಂಥ ಬೃಹತ್ ಖಾಸಗಿ ಕಂಪೆನಿಗಳು ಈ ಅಮೂಲ್ಯ ಸಂಪತ್ತನ್ನು ನಿರಂತರವಾಗಿ ಲೂಟಿ ಹೊಡೆಯುತ್ತಲೇ ಇವೆ. ಇತ್ತೀಚೆಗಂತೂ ಸರ್ಕಾರಗಳು ಹಲವಾರು ಸ್ವದೇಶಿ-ವಿದೇಶಿ ಕಂಪೆನಿಗಳೊಂದಿಗೆ ಗಣಿಗಾರಿಕೆಯ ಒಡಂಬಡಿಕೆಗಳನ್ನು ಮಾಡಿಕೊಳ್ಳುತ್ತಿವೆ. ಒಂದು ಅಂದಾಜಿನ ಪ್ರಕಾರ ಒಟ್ಟು 1,50,000 ಕೋಟಿ ರೂಪಾಯಿ ಮೌಲ್ಯದ ಗಣಿಗಾರಿಕೆಯ ಒಡಂಬಡಿಕೆಗಳನ್ನು ವಿವಿಧ ಖಾಸಗಿ ಕಂಪೆನಿಗಳೊಂದಿಗೆ ಮಾಡಿಕೊಳ್ಳಲಾಗಿದೆ.

ಆದರೆ ಸರ್ಕಾರಕ್ಕಿರುವ ಅಡೆತಡೆ ಎಂದರೆ ಒಟ್ಟಾರೆ ಈ ಪ್ರದೇಶಗಳು ಬಹುತೇಕವಾಗಿ ಆದಿವಾಸಿ ಗಿರಿಜನರು ವಾಸಿಸುವ ಪ್ರದೇಶಗಳೇ ಆಗಿದ್ದು ಆ ಗುಡ್ಡಗಾಡು ಜನರೇ ಮಾವೋವಾದಿ ಗೆರಿಲ್ಲಾ ಸೇನೆಯನ್ನು ಸೇರಿಕೊಂಡು "ಜಲ್, ಜಂಗಲ್, ಜಮೀನ್ ಹಮಾರಾ ಹೈ" ಎಂಬ ಘೋಷಣೆಯಡಿ ಗಣಿಗಾರಿಕೆ ವಿರೋಧಿ ಆಂದೋಲನ ನಡೆಸುತ್ತಿದ್ದಾರೆ. ತಾವು ವಾಸಿಸುತ್ತಿರುವ ಅರಣ್ಯ, ನೆಲ, ಜಲಸಂಪತ್ತು ನಮಗೇ ಸೇರಬೇಕೆಂದೂ, ಗಣಿಗಾರಿಕೆ ನಡೆಸಿದರೆ ಅದರಿಂದ ಬರುವ ಲಾಭವನ್ನು ತಮ್ಮ ಪ್ರದೇಶದ ಅಭಿವೃದ್ಧಿಗೆ ಬಳಸಬೇಕೇ ಹೊರತು ಅದು ಯಾವುದೋ ಖಾಸಗಿ ಕಂಪೆನಿಯ ತಿಜೋರಿ ತುಂಬುವುದಕ್ಕೆ ಬಳಕೆಯಾಗಬಾರದೆಂದೂ ವ್ಯವಸ್ಥೆಯ ವಿರುದ್ಧ ಪೊಲೀಸರ ವಿರುದ್ಧ ಬಂದೂಕೆತ್ತಿ ನಿಂತಿದ್ದಾರೆ. ಇಡೀ ಪ್ರದೇಶದಾದ್ಯಂತ ಆದಿವಾಸಿ ಜನಸಮುದಾಯ ಅಕ್ಷರಶಃ ಮಾವೋವಾದಿಗಳ ಈ ಹೋರಾಟದ ಬೆಂಬಲಕ್ಕೆ ನಿಂತಿದೆ.

ಈ ಕಾರಣದಿಂದಲೇ ಕಳೆದ ಮೂವತ್ತು ವರ್ಷಗಳಿಂದ ಅನೇಕ ಸರ್ಕಾರಗಳು ಎಷ್ಟೇ ಪ್ರಯತ್ನ ಪಟ್ಟಾಗ್ಯೂ ಈ ಚಳವಳಿಯನ್ನು ಸಂಪೂರ್ಣವಾಗಿ ಹೊಸಕಿ ಹಾಕುವುದಕ್ಕೆ ಸಾಧ್ಯವಾಗಿರಲಿಲ್ಲ. ಹಾಗಾಗಿ, ಎಲ್ಲಿಯತನಕ ಈ ಪ್ರದೇಶದಲ್ಲಿ ಮಾವೋವಾದಿ ಚಳವಳಿ ಅಸ್ತಿತ್ವದಲ್ಲಿರುತ್ತದೆಯೋ, ಎಲ್ಲಿಯತನಕ ಈ ಚಳವಳಿಗೆ ಇಡೀ ಪ್ರದೇಶದ ಆದಿವಾಸಿ ಗಿರಿಜನ ಸಮುದಾಯದ ಬೆಂಬಲವಿರುತ್ತದೆಯೋ ಅಲ್ಲಿಯತನಕ ಯಾವುದೇ ಸರ್ಕಾರಕ್ಕೆ ಈ ಅಪಾರ ಖನಿಜ ಸಂಪತ್ತನ್ನು ನಿರಾತಂಕವಾಗಿ, ನಿರಂತರವಾಗಿ ಲೂಟಿ ಹೊಡೆಯುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದು ಸರ್ಕಾರಗಳಿಗೆ ಮನವರಿಕೆಯಾಗಿ ಹೋಗಿದೆ. ಈ ಹಿನ್ನೆಲೆಯಲ್ಲಿ ಎಷ್ಟೇ ರಕ್ತಪಾತ ನಡೆಸಿಯಾದರೂ ಮಾವೋವಾದಿ ಚಳವಳಿಯನ್ನು ಸಂಪೂರ್ಣ ನಾಶ ಮಾಡಬೇಕು, ನಂತರ ಆದಿವಾಸಿ-ಗಿರಿಜನರನ್ನು ತಮ್ಮ ತಮ್ಮ ನೆಲೆಗಳಿಂದ ಒಕ್ಕಲೆಬ್ಬಿಸಿ ಕಾಡಿನಿಂದ ಹೊರದಬ್ಬಬೇಕು, ಆಮೇಲೆ ಆ ಇಡೀ ಪ್ರದೇಶವನ್ನು ಖಾಸಗೀ ಕಂಪೆನಿಗಳಿಗೆ ಗಣಿಗಾರಿಕೆ ನಡೆಸುವುದಕ್ಕೆ ಒಪ್ಪಿಸಬೇಕು ಎಂಬ ನಿರ್ಧಾರಕ್ಕೆ ಕೇಂದ್ರ ಸರ್ಕಾರ ಬಂದಿದೆ.

ಇದುವೇ 'ಆಪರೇಷನ್ ಗ್ರೀನ್ ಹಂಟ್'ನ ಅಸಲಿ ಮುಖ.

ಗೃಹಮಂತ್ರಿಯ ಸೋಗಲಾಡಿತನ



"ಭಾರತ ದೇಶದ ಶೇ. 85 ರಷ್ಟು ಜನಸಂಖ್ಯೆ ನಗರಗಳಿಗೆ ವಲಸೆ ಹೋಗುವಂತೆ ಮಾಡುವುದೇ ನನ್ನ ಗುರಿ" ಎಂದಿದ್ದ ಕೇಂದ್ರ ಗೃಹ ಸಚಿವ ಪಿ. ಚಿದಂಬರಂ ತನ್ನ ಆ ದುರುದ್ದೇಶವನ್ನು ಕಾರ್ಯಗತ ಮಾಡಲೆಂದೇ 'ಆಪರೇಷನ್ ಗ್ರೀನ್ ಹಂಟ್'ಗೆ ಚಾಲನೆ ನೀಡಿರುವಂತಿದೆ.

ಈ ಕಾರ್ಯಾಚರಣೆಯಲ್ಲಿ [illegible] ... ಪೊಲೀಸ್ ಮತ್ತು ಅರೆ ಸೇನಾಪಡೆಗಳ ... ಎಂಬುದೆಲ್ಲಾ ಸದ್ಯಕ್ಕೆ ಅನಿವಾರ್ಯ. ಆದರೆ ... ಜೊತೆಗೆ ಚಿದಂಬರಂ ತಮ್ಮ ಗುರಿ ... ಅತ್ತ ದರಿ, ಇತ್ತ ಪುಲಿ ಎಂಬ ... ಆದಿವಾಸಿಗಳೆಲ್ಲ ಒಂದೋ ನಗರಗಳನ್ನು ... ಸರ್ಕಾರ ಸ್ಥಾಪಿಸಿರುವ ನಿರಾಶ್ರಿತರ ಶಿಬಿರಗಳಿಗೆ ದೂಡಲ್ಪಟ್ಟಿರುತ್ತಾರೆ. ಈ ಶಿಬಿರಗಳು ನಗರಗಳ ಸ್ಲಂಗಳಿಗಿಂತಲೂ ಕಡೆ ಆಗಿರುವುದರಿಂದ ಅವರೂ 'ನಗರವಾಸಿ'ಗಳಾದರು ಎಂದು ಚಿದಂಬರಂ ಸಂತೋಷ ವ್ಯಕ್ತಪಡಿಸಬಹುದು.

ಅಂದಹಾಗೆ ಈ ಚಿದಂಬರಂ ಪಕ್ಕಾ ತಮಿಳನಂತೆ ಬಿಳಿ ಪಂಚೆ ಮತ್ತು ಬಿಳಿ ಶರ್ಟ್ ತೊಟ್ಟಿದ್ದರೂ, ಈತ ಹೃದಯದಾಳದಲ್ಲಿ ಪಕ್ಕಾ ಬಂಡವಾಳಶಾಹಿ. ಪ್ರಖ್ಯಾತ ಹಾರ್ವರ್ಡ್ ವಿಶ್ವವಿದ್ಯಾಲಯದಿಂದ [illegible] ಡಿಗ್ರಿ ಪಡೆದ ಚಿದಂಬರಂ ತಾನು ಅಲ್ಲಿ ಕಲಿತ [illegible] ವಿದ್ಯೆಯನ್ನು ಬಂಡವಾಳಶಾಹಿಗಳ ಹಿತಾಸಕ್ತಿ ರಕ್ಷಿಸಲು ಮತ್ತು ತನ್ನ ಜೇಬನ್ನು ತುಂಬಿಸಿಕೊಳ್ಳುವುದಕ್ಕೇ ಬಳಸುತ್ತಾನೆ. ಉದಾಹರಣೆಗೆ ಹಿಂದೊಮ್ಮೆ ಭಾರತದ ಕಾರ್ಪೊರೇಟ್ ಇತಿಹಾಸದಲ್ಲೇ ಅತಿದೊಡ್ಡ ಹಗರಣವನ್ನು ಎಸಗಿದ್ದ ಕುಖ್ಯಾತ ಎನ್ರಾನ್ ಕಂಪನಿ ವಿರುದ್ಧ ಪ್ರಗತಿಪರರು, ಪ್ರಜ್ಞಾವಂತರು, ಭ್ರಷ್ಟಾಚಾರದ ವಿರೋಧಿಗಳು ಪ್ರತಿಭಟಿಸುತ್ತಿದ್ದರೆ ಅದರ ಪರವಾಗಿ ವಕಾಲತ್ತು ವಹಿಸಿದ್ದ ವ್ಯಕ್ತಿ ಇದೇ ಚಿದಂಬರಂ!

ಅಷ್ಟೇ ಅಲ್ಲ, ಈಗ ಒರಿಸ್ಸಾದಲ್ಲಿ ಗಣಿಗಾರಿಕೆಗೆ ಅನುಮತಿ ಪಡೆದಿರುವ ಮತ್ತೊಂದು ಕುಖ್ಯಾತ ಕಂಪನಿಯಾದ ವೇದಾಂತಮ್‌ನ ಆಡಳಿತ ಮಂಡಳಿಯಲ್ಲಿ ಈ ಚಿದಂಬರಂ ಸದಸ್ಯತ್ವವನ್ನು ಹೊಂದಿದ್ದ. ಈಗ ಆ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾನಾದರೂ ಮಂಡಳಿಯ ಸದಸ್ಯನಾಗಿ ಈತ ವೇದಾಂತಮ್‌ನಿಂದ ಆಗ ಪಡೆಯುತ್ತಿದ್ದ ವಾರ್ಷಿಕ ಆದಾಯ ಕೇವಲ 70,000 ಪೌಂಡ್‌ಗಳು. ಅಂದರೆ ಸುಮಾರು 50 ಲಕ್ಷ ರೂಪಾಯಿಗಳು!

ಅಂದು ತಿಂದ ವೇದಾಂತಮ್‌ನ ಉಪ್ಪಿನ ಋಣವನ್ನು ಚಿದಂಬರಂ ಇಂದು ತೀರಿಸಲು ಹೊರಟಿರುವಂತಿದೆ. ಆ ಕಾರಣಕ್ಕೆ [illegible] ಪೊಲೀಸರನ್ನು, ಅರೆ ಸೇನಾಪಡೆಯವರನ್ನು ಛೂಬಿಟ್ಟು ಅರಣ್ಯವಾಸಿಗಳನ್ನು [illegible] ಒಕ್ಕಲೆಬ್ಬಿಸಲು ಸಜ್ಜಾಗಿದ್ದಾನೆ. ಆತನ ಈ ಕ್ರಮವನ್ನು ವಿರೋಧಿಸುವವರು, ಪ್ರಶ್ನಿಸುವವರು ಇವತ್ತು [illegible], ನಕ್ಸಲ್ ಬೆಂಬಲಿಗರೆಂದೋ ಆರೋಪ ಹೊರಬೇಕಾಗಿದೆ.

ಅತಿ ಬಡವರಾದ ಅರಣ್ಯವಾಸಿಗಳಿಗೆ ಗೃಹ ಸಚಿವ ಚಿದಂಬರಂ ಆರೋಗ್ಯ ಸೌಲಭ್ಯಗಳನ್ನಾಗಲಿ, ಶಿಕ್ಷಣ ವ್ಯವಸ್ಥೆಯನ್ನಾಗಲಿ, ಕುಡಿಯುವ ನೀರನ್ನಾಗಲೀ ಕೊಡಲಿಲ್ಲ, ಆದರೆ ತನ್ನ ಕೈಯಲ್ಲಿರುವ ಅಧಿಕಾರವನ್ನು ಉಪಯೋಗಿಸಿಕೊಂಡು ಈ ದೇಶದಲ್ಲೇ ಅತಿ ಹಿಂದುಳಿದವರೂ, ನತದೃಷ್ಟರೂ ಆದ ಆದಿವಾಸಿಗಳನ್ನು ಒಕ್ಕಲೆಬ್ಬಿಸಿ ಅವರ ಭೂಮಿಯನ್ನು ವೇದಾಂತಮ್ [illegible] ಪಾದಗಳಿಗೆ ಅರ್ಪಿಸಲು ಹೊರಟಿದ್ದಾನೆ ಚಿದಂಬರಂ.

'ಗೃಹ' ಸಚಿವರೇ ಹೀಗೆ [illegible] ಎಷ್ಟು ಹೊಲ ಮೇಯದಂತಬೇಕು!

ಲಂಕೇಶ್



ಜಾನಕಿ ಜಾತಕ

ಬಿಜಾಪುರದ ಜಾನಕಿ ... [illegible] ... ಎಂಬಿಬಿಎಸ್ ಮುಗಿಸಿ ... ಸರ್ಕಾರಿ ಕೆಲಸ ಗಿಟ್ಟಿಸಿದ ಜಾನಕಿ ... ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ... ಎಂ.ಡಿ. ಮಾಡಿಕೊಂಡು ... ಈಗಾಕೆ ಅಸೋಸಿಯೇಟ್ ... [illegible]

... ಶಾಸ್ತ್ರದಲ್ಲಿ ಎಂ.ಡಿ. ಮಾಡಿರುವ ಜಾನಕಿ ... ತಪ್ಪುಗಳಿಗೆ ದುಮ್ಮ ದುಡುಕಿಕೊಳ್ಳೋ ಇಲ್ಲ, ಈಗ ... [illegible]

ಹುಬ್ಬಳ್ಳಿ ಕಿಮ್ಸ್

ಡಾ. ಜಾನಕಿಯ ಝಲಕ್ ಸಿ.ಡಿ.

ಹುಬ್ಬಳ್ಳಿಯ ಪೋಲಿಗಳ ವಲಯದಲ್ಲೀಗ ಸೆಕ್ಸ್ ಸಿಡಿಯೊಂದು ರೋಮಾಂಚನವೆಬ್ಬಿಸಿದೆ. ಕಿಮ್ಸ್‌ನ ವೈದ್ಯಕೀಯ ವಿದ್ಯಾರ್ಥಿಗಳು ತಮ್ಮ ಮಾಸ್ತರತಿ ಡಾ. ಜಾನಕಿಯ ಪ್ರಣಯ ಪ್ರಸಂಗವನ್ನು ನೋಡುತ್ತಾ 'ಪ್ರಾಕ್ಟಿಕಲ್ಸ್' ಪಾಠ ಕಲಿಯುತ್ತಿದ್ದಾರೆ. ಜಾನಕಮ್ಮನ ಚೆಲ್ಲಾಟದಲ್ಲಿ ಸಂಗಾತಿಯಾಗಿ ಭರ್ಜರಿ ಆಕ್ಷನ್ ರೋಲ್ ಮಾಡಿರುವ ಡಾ. ನರೇಂದ್ರನೂ ತಮ್ಮ ಮಾಸ್ತರೇ ಎಂಬುದು ವಿದ್ಯಾರ್ಥಿಗಳ ರೋಮಾಂಚನವನ್ನು ಮತ್ತಷ್ಟು ಏರಿಸಿಬಿಟ್ಟಿದೆ.

ಆದರೆ ಇದು ಕಿಮ್ಸ್‌ನ ದುರಂತ. ಇಲ್ಲಿ ಆಗಾಗ ಕೆಲವರ ವೈಯಕ್ತಿಕ ಜೀವನಗಳು, ಸಂಬಂಧಗಳು ಸಾರ್ವಜನಿಕಗೊಂಡು ಅಸಹ್ಯ ಮೂಡಿಸುತ್ತಿವೆ. ಅವು ಕೆಲವೊಮ್ಮೆ ಕಿಮ್ಸ್‌ನ ಆಡಳಿತದ ಮೇಲೂ ಕರಾಳಛಾಯೆ ಬೀರುತ್ತಿವೆ. ಇದರ ಅಂತಿಮ ಪರಿಣಾಮ ಕಿಮ್ಸ್ ಅನ್ನೇ ನಂಬಿರುವ ಬಡರೋಗಿಗಳ ಮೇಲಾಗುತ್ತಿದೆ. ಈ ಹಿಂದೆ ಡಾ. ದೊಡ್ಡಮನಿಯ ಶೂಟ್‌ಔಟ್ ಪ್ರಕರಣ ನಡೆದಿತ್ತು. ಇದು ಸಹ ವೈಯಕ್ತಿಕ ಲೈಂಗಿಕ ಸಂಬಂಧದ ಸುತ್ತವೇ ಗಿರಕಿ ಹೊಡೆದಿತ್ತು. ಕಿಮ್ಸ್‌ನ ಆಡಳಿತದಲ್ಲಿ ಅಲ್ಲೋಲಕಲ್ಲೋಲ ಎಬ್ಬಿಸಿತ್ತು. ಈಗ ಉಪನ್ಯಾಸಕಿ ಡಾ. ಜಾನಕಿ ತೊರವಿ ಮತ್ತು ಕಾರ್ಡಿಯಾಲಜಿಸ್ಟ್ ಡಾ. ನರೇಂದ್ರ ಹಿರೇಗೌಡರ ಮುಸ್ಸಂಜೆ ಸಲ್ಲಾಪ ಸಿಡಿಗಳಲ್ಲಿ, ಎಂ.ಎಂ.ಎಸ್‌ಗಳಲ್ಲಿ ಪ್ರತ್ಯಕ್ಷಗೊಂಡು ಹುಬ್ಬಳ್ಳಿ- ಧಾರವಾಡಗಳಲ್ಲಿ ಪಡ್ಡೆ ಪೋಕರಿಗಳಿಗೆ ಮನರಂಜನೆ ಒದಗಿಸುತ್ತಿದೆ.


ಅಂದಂತೆ ಇಲ್ಲಿ ಈ ಸಿ.ಡಿ. ತಯಾರಿಸಿದ ಭೂಪ ಬೇರಾರೂ ಅಲ್ಲ; ಡಾ. ಜಾನಕಿಯ ಗಂಡ ರೂಪಸುಂದರ್ ನಾಯಕ್. ತನ್ನ ಹೆಂಡತಿ ಡಾ. ನರೇಂದ್ರ ಹಿರೇಗೌಡನೊಂದಿಗೆ ಅನೈತಿಕ ಸಂಪರ್ಕ ಹೊಂದಿದ್ದು ಗೊತ್ತಾದಾಗ ರೂಪಸುಂದರ್‌ಗೆ ಸಹಜವಾಗಿಯೇ ಆಘಾತವಾಗಿದೆ. ಮಾತುಕತೆ ಮೂಲಕ ಹಿರಿಯರಿಂದ ಬುದ್ಧಿವಾದ ಹೇಳಿಸುವುದರ ಮೂಲಕ ರೂಪಸುಂದರ್ ಹೆಂಡತಿಯನ್ನು ತನ್ನವಳನ್ನಾಗಿ ಮಾಡಿಕೊಳ್ಳಬಹುದಿತ್ತು. ಅದೂ ಆಗದಿದ್ದಾಗ, ಡೈವೋರ್ಸ್ ನೀಡಿ ಹೊಸ ದಾರಿ ಕಂಡುಕೊಳ್ಳಬಹುದಿತ್ತು. ಆದರೆ ಪತ್ನಿ ಮೇಲೆ ದ್ವೇಷ ಸಾಧಿಸುವ ದುಡುಕಿನಲ್ಲಿ ಈ ಹುಂಬ ರೂಪಸುಂದರ್ ಹ್ಯಾಂಡಿಕ್ಯಾಮ್ ಬಳಸಿ ತನ್ನ ಪತ್ನಿ ಜಾನಕಿ ನರೇಂದ್ರನೊಂದಿಗೆ ಮಂಚದ ಮೇಲೆ ಮ್ಯಾಟ್ನಿ ಶೋ ನಡೆಸುತ್ತಿರುವುದನ್ನು ಶೂಟ್ ಮಾಡಿದ. ವಸತಿಗೃಹದ ಜನರನ್ನೆಲ್ಲ ಕರೆದು 'ನೋಡ್ರಪ್ಪೊ, ನೋಡಿ' ಎಂದು ಗೋಳಾಡಿದ. ಈ ಪ್ರಣಯ ಪ್ರಸಂಗವನ್ನು ಸಿ.ಡಿ. ಮಾಡಿಸಿದ. ಆದರೆ ಅದರ ಒಂದು ಡ್ಯೂಪ್ಲಿಕೇಟ್ ಕಾಪಿ ಊರ ತುಂಬಾ ಹರಡಿ ಈಗ ಡಾ. ಜಾನಕಿ, ಡಾ. ನರೇಂದ್ರ ಮತ್ತು ರೂಪಸುಂದರ್ ಮೂವರೂ ಮಾನಗೇಡಿಗಳಾಗಿದ್ದಾರೆ. ಸಾಂಕ್ರಾಮಿಕ ರೋಗದಂತೆ ಈ ಲೈಂಗಿಕ ವೈರಸ್ (ಸಿ.ಡಿ.) ಈಗ ಕ್ಯಾಂಪಸ್ ತುಂಬಾ ಹರಡತೊಡಗಿದೆ. ಕಂಡವರ ಬಾಯಿಗೆ ಕವಳವಾಗುತ್ತಿದೆ.



ಜಾನಕಿ...

ಪ್ರಣಯ ಪ್ರವೀಣೆ ಜಾನಕಿ

ಈ ಹಿಂದೆಯೂ ಡಾ. ಜಾನಕಿ ಮೊದಲ ಗಂಡನಿಂದ ಡೈವೋರ್ಸ್ ಪಡೆದಿದ್ದು ಇಂತಹ ವಿವಾಹೇತರ ಸಂಬಂಧಕ್ಕಾಗಿಯೇ. ತನ್ನ ಲೈಂಗಿಕ ಆಕಾಂಕ್ಷೆಗಳನ್ನು ಹಿಡಿದಿಡಲಾಗದ ಜಾನಕಿ ಎಡವಟ್ಟು ಮಾಡಿಕೊಳ್ಳುತ್ತಲೇ ಬಂದಾಕೆ. ಬಿಜಾಪುರದ ನ್ಯಾಯವಾದಿಯೊಬ್ಬರ ಮಗಳಾದ ಜಾನಕಿ ಎಸ್‌ಸಿ. ಕೋಟಾದಲ್ಲಿ ದಾವಣಗೆರೆಯ ವೈದ್ಯಕೀಯ ಕಾಲೇಜಿನಲ್ಲಿ ಸೀಟು ಪಡೆದಿದ್ದಳು. ಅಲ್ಲಿ ಓದುವುದಕ್ಕಿಂತ ಶ್ರೀಮಂತ ಹುಡುಗರೊಂದಿಗೆ ಅಲೆದದ್ದೇ ಹೆಚ್ಚು. ಇದು ಮನೆಯವರಿಗೆ ಗೊತ್ತಾಗಿ, ತಮ್ಮ ಸಂಬಂಧಿಕನಾದ ಸುಭಾಸ್ ಅಲಗೂರ ಎನ್ನುವಾತನೊಂದಿಗೆ ವಿವಾಹ ಮಾಡಿದರು. ದಾವಣಗೆರೆಯಲ್ಲಿ ಎಂಬಿಬಿಎಸ್ ಮೊದಲ ವರ್ಷ ಫೇಲಾಗಿ ಹುಬ್ಬಳ್ಳಿಯಲ್ಲಿ ಓದಲು ಎಂದು ಕಿಮ್ಸ್‌ಗೆ ಹಾರಿಬಂದ ಸುಂದರಿ ಜಾನಕಿ ಬಹುತೇಕ ಉಪನ್ಯಾಸಕರ ನಲ್ಮೆಯ ವಿದ್ಯಾರ್ಥಿನಿಯಾದಳು. ಆದರೂ ಇಲ್ಲಿ ಈಕೆಯ ವಿದ್ಯಾಭ್ಯಾಸ ಜರುಗಿದ್ದು ಕೇವಲ 10 ವರ್ಷ ಮಾತ್ರ! ಆಗಲೂ ಕಿಮ್ಸ್‌ನಲ್ಲಿ ಸಲ್ಲಾಪ ಸಂಜೆಗಳಿಗಾಗಿ ಸುದ್ದಿಯಾಗುತ್ತಿದ್ದಳು. ಇದರಿಂದ ರೋಸಿದ ಸುಭಾಸ್ ಡೈವೋರ್ಸ್ ನೀಡಿದ. ಈ ಪ್ರಕರಣ ಇನ್ನೂ ಕೋರ್ಟಿನಲ್ಲಿರುವಾಗಲೇ ಜಾನಕಿ ಎರಡನೇ ಮದುವೆಯಾದಳು. ಅಷ್ಟೊತ್ತಿಗೆ ಜಾನಕಿ ಕಿಮ್ಸ್‌ನಲ್ಲೇ ಉಪನ್ಯಾಸಕಿ. ಕಿಮ್ಸ್‌ನಲ್ಲಿ ಕಂಪ್ಯೂಟರ್ ಆಪರೇಟರ್ ಆಗಿರುವ ರೂಪಸುಂದರ್ ನಾಯಕ್‌ನನ್ನು ವರಿಸಿದಳು. ಒಳ್ಳೆಯದೇ.... ಆದರೆ ಮತ್ತೆ ತನ್ನ ಚಿನ್ನಾಟಗಳನ್ನು ಮುಂದುವರೆಸಿ ಗಂಡನಿಗೆ ಇರಿಸುಮುರಿಸು ಮಾಡತೊಡಗಿದಳು. ಆದರ ಅಂತಿಮ ಹಂತವೆಂಬಂತೆ ಡೈವೋರ್ಸ್‌ನಲ್ಲಿ ಕೊನೆಗೊಳ್ಳಬೇಕಿದ್ದ ವಿಷಯ ಇವತ್ತು ಬೀದಿಪಾಲಾಗಿ ಅಸಹ್ಯ ಮೂಡಿಸಿಬಿಟ್ಟಿದೆ. ನಾಲ್ಕು ವರ್ಷದ ಮ... ವೃದ್ಧಿಯ ಮೇಲೆ ಇದೆಂತಹ ಪರಿಣಾ... ಬೀರಬಲ್ಲದು ಎನ್ನುವುದನ್ನು ಜಾ... ಯೋಚಿಸಬೇಕಿತ್ತು. ಹಾಗೆಯೇ ದುಡು... ರೂಪಸುಂದರ್ ಕೂಡಾ.




ಹಿರೇಗೌಡ

ರೂಪಸುಂದರ್ ವಿದ್ಯಾನಗ... ಠಾಣೆಯಲ್ಲಿ ದೂರು ದಾಖಲಿಸಿ, ... ಜಾನಕಿ, ಡಾ. ನರೇಂದ್ರರನ್ನು ಎರಡು ದಿ... ಜೈಲಿಗೆ ಕಳಿಸಿದ. ಈಗ ಏನೂ ಆ... ಇಲ್ಲವೆಂಬಂತೆ ಜಾನಕಿ, ನರೇಂದ್ರ ಎಪ್ರಾ... ಹಾಕಿಕೊಂಡು ಕಿಮ್ಸ್‌ಗೆ ಬರುತ್ತಿದ್ದಾರೆ. ಆದರೆ ಸಿ... ಮಾತ್ರ ಕ್ಯಾಂಪಸ್‌ನಲ್ಲಿ ತನ್ನ ದುರ್ವಾಸನೆ ಹರಡುತ್ತ... ಇದೆ. ಪತ್ನಿಗೆ 'ಪಾಠ' ಕಲಿಸಲು ರೂಪಸುಂದರನೇ ... ಸಿ.ಡಿ. ಪ್ರಸರಣ ಮಾಡುತ್ತಿರಬಹುದೆ?

ಜಾನಕಿಯೀಗ ಡಾ. ನರೇಂದ್ರನನ್ನು ಮದುವೆಯಾಗು ಎಂದು ಪೀಡಿಸುತ್ತಿದ್ದಾಳೆ. ಮಜ... ಮಾಡಿದ ವಿವಾಹಿತ ನರೇಂದ್ರ ಇದಕ್ಕೆ ಒಪ್ಪುತ್ತಿಲ್ಲ. ಮದುವೆ ಒಲ್ಲದಿದ್ದರೆ 10 ಲಕ್ಷ ಕೊಡು ಎನ್ನುತ್ತಿದ್ದಾಳೆ ಜಾನಕಿ.

ಏನೇ ಇರಲಿ, ಕಿಮ್ಸ್‌ನ ದೈನಂದಿನ ಪಾಠಗಳ ಮೇಲೆ ಈ ಜಗ್ಗಾಟ, ಮಂಗಾಟಗಳು ದುಷ್ಪರಿಣಾಮ ಮಾಡದಿರಲಿ.



ರೂಪಸುಂದರ್ ಮತ್ತು ಜಾನಕಿ

ವೈಯಕ್ತಿಕ ಸಂಬಂಧಗಳು ಸಾರ್ವಜನಿಕಗೊಂಡಾ... ಆಗುವಂತದ್ದೇ ಇಲ್ಲೂ ಆಗಿದೆ. ರೂಪಸುಂದ... ದ್ವೇಷ ಸಾಧಿಸುವುದನ್ನು ಬಿಟ್ಟು, ಡೈವೋರ್ಸ್ ಕೊಟ್ಟು ಹೊಸ ಬದುಕು ಕಟ್ಟಿಕೊಳ್ಳಲಿ. ಹಾಗೆಯೇ ನಾಲ್ಕು ವರ್ಷದ ಮಗನಿಗಾಗಿ ಜಾನಕಿ ಕೂಡಾ ಎಚ್ಚರಗೊಳ್ಳಬೇಕಿದೆ. ಡಾ. ನರೇಂದ್ರನಂತಹ ಅವಕಾಶವಾದಿಗಳಿಂದ ದೂರ ಇರಬೇಕಾಗಿದೆ.

● ಹುರುಳಿಕೊಪ್ಪಿ ವಿನಯ...

ಕೋಬಾಡ್ ಗಾಂಧಿ....

(2ನೇ ಪುಟದಿಂದ)

ಆದರೂ ಕೋಬಾಡ್ ಗಾಂಧಿಯನ್ನು ಟೆರರಿಸ್ಟ್ ಎಂದು ಬ್ರಾಂಡ್ ಮಾಡುವ ಪ್ರಯತ್ನವನ್ನು ಪ್ರಭುತ್ವ ಸತತವಾಗಿ ಮಾಡುತ್ತಿದೆ. ಆದರ ಸತ್ಯಾಸತ್ಯತೆಗಳನ್ನು ವಿಶ್ಲೇಷಿಸಬೇಕಾದ ಮಾಧ್ಯಮಗಳು ಪ್ರಭುತ್ವದ ಪಲ್ಲವಿಗೆ ಕೋರಸ್ ಹಾಡುತ್ತಿವೆ. ಕೋಬಾಡ್ ಗಾಂಧಿ ಖುದ್ದಾಗಿ ಯಾರನ್ನು ಕೊಲ್ಲದಿದ್ದರೂ ಅವರ ಒಪ್ಪಿಗೆಯ ಮೇರೆಗೆ 6000ಕ್ಕೂ ಹೆಚ್ಚು ಕೊಲೆಗಳಾಗಿವೆ, ಹೀಗಾಗಿ ಅವರು ಭಯೋತ್ಪಾದಕರೇ ಎಂದು ಪ್ರಭುತ್ವವು ಹೇಳುತ್ತಿದ್ದರೆ ನಕ್ಸಲರ ಹೋರಾಟದ ಎಲ್ಲಾ ಆಯಾಮಗಳನ್ನು ಕಡೆಗಣಿಸಿ ಅದನ್ನು ಕೇವಲ ಕೊಲೆಸುಲಿಗೆಗಳಲ್ಲಿ ತೊಡಗುವ ಭಯೋತ್ಪಾದನಾ, ಸುಲಿಗೆಕೋರ ಸಂಘಟನೆ ಎಂಬಂತೆ ಮಾಧ್ಯಮಗಳೂ ಚಿತ್ರಿಸುತ್ತಾ ನಕ್ಸಲ್ ಬಂಡಾಯಕ್ಕೆ ಟೆರರಿಸ್ಟ್ ವೇಷ ತೊಡಿಸುತ್ತಿವೆ.

ಇವೆಲ್ಲವೂ ಇದ್ದಕ್ಕಿದ್ದಂತೆ ಆಗುತ್ತಿರುವುದೇನಲ್ಲ. ನಕ್ಸಲೈಟ್ ಬಂಡಾಯವನ್ನು ಭಾರತ ಎದುರಿಸುತ್ತಿರುವ ಅತಿದೊಡ್ಡ ಅಂತರಿಕ ಸವಾಲೆಂದು ಬಣ್ಣಿಸಿರುವ ಯು.ಪಿ.ಎ. ಸರ್ಕಾರ ಮುಂದಿನ ನವೆಂಬರ್‌ನಿಂದ ನಕ್ಸಲೈಟರ ಮೇಲೆ 'ಆಪರೇಷನ್ ಗ್ರೀನ್ ಹಂಟ್' ಎಂಬ ಹೆಸರಿನಲ್ಲಿ ಯುದ್ಧ ಸಾರಿದೆ. ಈ ಯುದ್ಧದಲ್ಲಿ ಬಡತನದ ಹಿನ್ನೆಲೆಯಿಂದಲೇ ಬಂದಿರುವ ನೂರಾರು ಪೊಲೀಸರು, ಸಾವಿರಾರು ಆದಿವಾಸಿಗಳು ಮತ್ತು ಸಮಾಜ ಬದಲಾವಣೆಗೆಂದು ತಮ್ಮ ಬದುಕನ್ನೇ ಮುಡುಪಾಗಿಟ್ಟಿರುವ (ತಪ್ಪು ದಾರಿಯಲ್ಲೇ ಎನ್ನುವುದಾದರೂ) ನೂರಾರು ನಕ್ಸಲ್ ನಾಯಕರ ಮಾರಣಹೋಮವಾಗಲಿದೆ. ಇವೆಲ್ಲಕ್ಕೂ ಸಮಾಜದ ಮೂಕ ಸಮ್ಮತಿ ರೂಢಿಸಿಕೊಳ್ಳುವ ಸಲುವಾಗಿಯೇ ಪ್ರಭುತ್ವ ಕೋಬಾಡ್ ಗಾಂಧಿಯಂತವರನ್ನೂ, ನಕ್ಸಲ್ ಚಳವಳಿಯನ್ನೂ ಟೆರರಿಸ್ಟ್ ಎಂದು ಚಿತ್ರಿಸಲು ಹೆಣಗುತ್ತಿವೆ.

ಏಕೆಂದರೆ ಈ 'ಆಪರೇಷನ್ ಗ್ರೀನ್ ಹಂಟ್' ಕೇವಲ ನಕ್ಸಲರನ್ನು ಕೊಂದುಹಾಕುವ ಬೇಟೆ ಮಾತ್ರ ಆಗಿರದೆ ಅಲ್ಲಿರುವ ಅಪಾರ ಖನಿಜ ಸಂಪತ್ತಿನ 'ಆಪರೇಷನ್ ಟ್ರೆಷರ್ ಹಂಟ್' ಕೂಡಾ ಆಗಿದೆ. ಈಗಾಗಲೇ ಈ ಅಪಾರ ಜನಸಂಪತ್ತನ್ನು ಲೂಟಿ ಮಾಡಲು 1,50,000 ಕೋಟಿಗೂ ಹೆಚ್ಚಿನ ಮೌಲ್ಯದ ಒಪ್ಪಂದವನ್ನು ಭಾರತ ಸರ್ಕಾರ ವಿವಿಧ ವಿದೇಶಿ ಕಂಪನಿಗಳೊಂದಿಗೆ ಮಾಡಿ ಕೊಂಡಿದೆ. ದೇಶದ ಜನತೆಗೆ ದಕ್ಕಬೇಕಾದ ಸಂಪತ್ತು ಹೀಗೆ ಸುಲಭವಾಗಿ ವಿದೇಶೀಯರ ಪರಭಾರೆ ಆಗಬೇ ಕೆಂದರೆ ಅದರ ರಕ್ಷಣೆಗೆ ನಿಂತಿರುವ ಆದಿವಾಸಿಗಳ ಎತ್ತಂಗಡಿಯಾಗಬೇಕು. ಅವರ ರಕ್ಷಣೆಗೆ ನಿಂತಿರುವ ನಕ್ಸಲರ ದಮನವಾಗಬೇಕು. ಇದು 'ಆಪರೇಷನ್ ಗ್ರೀನ್ ಹಂಟ್'ನ ಅಸಲಿ ಸ್ವರೂಪ. ಇದಕ್ಕೂ ಹಾದುಹಗಲಲ್ಲೇ ಅಮಾಯಕ ಜನರಿಗೆ ಬಂದೂಕು ತೋರಿಸಿ ಸುಲಿಗೆ ಮಾಡುವ ದರೋಡೆಕೋರರಿಗೂ ಯಾವ ವ್ಯತ್ಯಾಸವಿದೆ? ಏಕೆ ಯಾವ 'ನಿಷ್ಪಕ್ಷಪಾತ' ಮಾಧ್ಯಮಗಳೂ ಈ 'ಆಪರೇಷನ್ ಟ್ರೆಷರ್ ಹಂಟ್' ಬಗ್ಗೆ ವರದಿ ಮಾಡದೆ ಪ್ರಭುತ್ವದ ಪ್ರಚಾರವನ್ನೇ ತನಿಖಾ ವರದಿಗಳೆಂಬಂತೆ ಛಾಪಿಸುತ್ತಿವೆ?

ಸಾವಿರಾರು ಅಲ್ಪಸಂಖ್ಯಾತರ ನರಮೇಧವನ್ನು ಮಾಡಿದ ಮೋದಿಯಿಂದ ಬಹಿರಂಗವಾಗಿಯೇ ಚುನಾಯಿತ ಸರ್ಕಾರವೊಂದು ಪಾಠ ಹೇಳಿಸಿಕೊಳ್ಳುತ್ತಿರುವಾಗ, ದಿನನಿತ್ಯ ಬಡಜನರ ನರಮೇಧಕ್ಕೆ ಬೇಕಾದ ಯೋಜನೆಗಳನ್ನು ರೂಪಿಸುವ ಕಾರ್ಪೊರೇಟ್ ಟೆರರಿಸಂಗೆ ಪ್ರಭುತ್ವವನ್ನು ಒಪ್ಪಿಸಿರುವಾಗ ಅವ್ಯಾವುದೂ ಭಯೋತ್ಪಾದನೆಯೆಂದು ಕಾಣದೆ ಅದರ ವಿರುದ್ಧ ನಡೆಯುವ ಹೋರಾಟ ಮಾತ್ರ ಭಯೋತ್ಪಾದನೆಯೆಂದು ಚಲಾವಣೆಯಾಗುತ್ತಿರುವುದು ಸಮಾಜದ ಸರ್ವತೋಮುಖ ಅಧಃಪತನವನ್ನಷ್ಟೇ ಸೂಚಿಸುತ್ತದೆ.

ಈ ಅಧಃಪತನದ ಸೂಚನೆಗಳನ್ನು ಈಗಾಗಲೇ ಮಾಧ್ಯಮಗಳು ಕೊಡತೊಡಗಿವೆ. ಅಮೆರಿಕದ ನಾಗರಿಕತೆಯ ಸರ್ವತೋಮುಖ ಅಧಃಪತನಕ್ಕೆ ಅದರ 'ವಾರ್ ಆನ್ ಟೆರರ್' ಒಂದು ದೊಡ್ಡ ಉದಾಹರಣೆ. ವಾಸ್ತವವಾಗಿ ಅದು 'ವಾರ್ ಆನ್ ಟ್ರೂಥ್' ಕೂಡಾ ಆಗಿತ್ತು. ಈ ಸತ್ಯದ ಹತ್ಯೆಯಲ್ಲಿ ಮಾಧ್ಯಮಗಳೂ ಸೇರಿಕೊಂಡಿದ್ದವು. ಸೇನೆಯ ಜೊತೆಜೊತೆಗೆ ಹೋಗಿ ಅವರು ದೃಷ್ಟಿಯಿಂದ ಮಾತ್ರ ಯುದ್ಧವನ್ನು ವರದಿ ಮಾಡುವ, ಸ್ವತಂತ್ರ ತನಿಖೆ ಮಾಡದೆ ಸೇನೆಗಾಗಿ ಪತ್ರಕರ್ತರ ಸೋಗಿನಲ್ಲಿ ಜಾಸೂಸಿ ಮಾಡುವ 'ಎಂಬೆಡೆಡ್ ಜರ್ನಲಿಸಂ' ಎಂಬುದೂ ಅಲ್ಲಿಂದಲೇ ಶುರುವಾಯಿತು. ಈಗ ಭಾರತದಲ್ಲೂ ಅದೇ ಬಗೆಯ ಸತ್ಯದ ಹತ್ಯಾಕಾಂಡ ಮತ್ತು ಎಂಬೆಡೆಡ್ ಜರ್ನಲಿಸಂ ಪ್ರಾರಂಭವಾಗುತ್ತಿದೆ. ಮೊನ್ನೆ ಮೊನ್ನೆ ಲಾಲ್‌ಘರ್‌ನಲ್ಲಿ ಆದಿವಾಸಿಗಳ ಪರವಾಗಿ [illegible] ಹೋರಾಟ ನಡೆಸುತ್ತಿದ್ದ ಮಾವೋವಾದಿಗಳೊಂದಿಗೆ ಯಾವುದೇ ಸಂಬಂಧ ವಿರದ ಮಹತೋ ಎಂಬ ಜನನಾಯಕನನ್ನು ಸೆರೆಹಿಡಿಯಲು ಪೊಲೀಸರು ಪತ್ರಕರ್ತರ ವೇಷ ಹಾಕಿಕೊಂಡು ಹೋಗಿದ್ದರಂತೆ! ಮಹತೋ ಬಳಿ ಸಂದರ್ಶನಕ್ಕೆಂದು ಭೇಟಿ ಪಡೆದುಕೊಂಡಿದ್ದ ಪತ್ರಕರ್ತರೇ ಪೊಲೀಸರನ್ನು ಮಹತೋ ಬಳಿ ಕರೆದೊಯ್ದರಂತೆ!

ಇದು ಕೇವಲ ಪತ್ರಿಕಾ ಧರ್ಮದ ಉಲ್ಲಂಘನೆಯಲ್ಲ, ಇದು ಸ್ವತಂತ್ರ ವಿಚಕ್ಷಣೆಯಿಂದ ಪ್ರಜಾತಂತ್ರದ ಇತರ ಅಂಗಗಳು ಭ್ರಷ್ಟವಾಗದಂತೆ ಕಾವಲು ಕಾಯಬೇಕಿದ್ದ ಮಾಧ್ಯಮವೆಂಬ ನಾಲ್ಕನೇ ಕಂಬ ಜನರಿಗೆ ಮತ್ತು ವೃತ್ತಿಗೆ ದ್ರೋಹ ಬಗೆದು ಕಾರ್ಪೊರೇಟ್ ಪ್ರಭುತ್ವದ ಮತ್ತೊಂದು ಸೇನಾ ತುಕಡಿಯಾಗುತ್ತಿರುವುದರ ಸಂಕೇತ. ಹೀಗೆ ಶೋಷಣೆಯ ವಿರುದ್ಧ ಜನರ ಆಯುಧಗಳಾಗಿರಬೇಕಾಗಿದ್ದ ಸಂಸ್ಥೆಗಳೇ ಜನರನ್ನು ಕೊಲ್ಲುವ ಆಯುಧಗಳಾಗಿ ಬದಲಾಗುತ್ತಿವೆ. ಆದ್ದರಿಂದಲೇ ಆಗಲಿರುವ ನಕ್ಸಲ್ ನರಮೇಧದಲ್ಲಿ ಬಲಿಯಾಗುವುದು ಕೇವಲ ನಕ್ಸಲೈಟರಲ್ಲ, ಬದಲಿಗೆ ಭಾರತದ ಪ್ರಜಾತಂತ್ರ ಮತ್ತು ನಾಗರಿಕತೆಗಳ ಸರ್ವನಾಶವಾಗಲಿದೆ. ಹೀಗಾಗಿ ಪ್ರಭುತ್ವ ನಕ್ಸಲರ ಮೇಲೆ ನಡೆಸಲಿರುವ ಯುದ್ಧ ನಕ್ಸಲರ ಮೇಲೆ ಮಾತ್ರ ನಡೆಸುವ ಯುದ್ಧವಾಗಿರುವುದಿಲ್ಲ, ಅದು ನಮ್ಮೆಲ್ಲರ ಮೇಲೆ ನಡೆಸುವ, ನಮ್ಮ ಕನಸು ಮತ್ತು ನೆಮ್ಮದಿಗಳ ಮೇಲೆ ನಡೆಸುವ ಯುದ್ಧವೇ ಆಗಿರುತ್ತದೆ. ಹೀಗಾಗಿ ಈ ಯುದ್ಧದಲ್ಲಿ ಯಾವ ಕಾರಣಕ್ಕೂ ಪ್ರಭುತ್ವ ಗೆಲ್ಲಕೂಡದು. ಅಲ್ಲವೇ?



...ಭಜರಂಗಿಗಳು ಹೊಟ್ಟೆಗೆ ಏನು ತಿನ್ನುತ್ತಾರೆ ಎಂಬ ಬಗ್ಗೆ ಸಂಶೋಧನೆ ...ಬೇಕಿದೆ. ಯಾಕೆಂದರೆ ಅನ್ನ, ಮುದ್ದೆ, ರೊಟ್ಟಿ, ಕುರಿ, ಕೋಳಿ ...ವಸ್ತುಗಳನ್ನು ತಿನ್ನುವ ಮನುಷ್ಯರ ಸಹಜ ಮನಸ್ಥಿತಿ ಅವರಲ್ಲಿಲ್ಲ. ಒಬ್ಬ ಹುಡುಗಿ ಮತ್ತು ಮುಸ್ಲಿಮ್ ಹುಡುಗ ಕನಿಷ್ಠ ಪಕ್ಷ ಸಾರ್ವಜನಿಕ ...ಲ್ಲಿ ಒಟ್ಟಿಗೆ ಕಾಣಿಸಿಕೊಂಡರೆ, ಮಾತನಾಡಿದರೆ ಅವರು ಸಹಿಸುವುದಿಲ್ಲ. ...ಯಿ ಮುಸ್ಲಿಮರು ಉದ್ಯೋಗ ವ್ಯಾಪಾರ ಮಾಡಿಕೊಂಡು ಬದುಕು ...ವುದನ್ನು ಕಂಡರೂ ಅವರಿಗೆ ಆಗದು. ಮೊನ್ನೆ ...ಪುರದಲ್ಲಿ ನಡೆದ ಘಟನೆಯೊಂದು ಭಜರಂಗಿಗಳು ...ಸಹಜ ಮನಸ್ಥಿತಿಯನ್ನು ಹೊಂದಿಲ್ಲ ಎಂಬುದನ್ನು ...ನ್ನು ಸಾಬೀತುಮಾಡಿತು.


ಗಿರೀಶ್

...ದ ರಂಜಾನ್ ದಿವಸ ಎಲ್ಲ ಮುಸಲ್ಮಾನರು ...ಸಂಭ್ರಮದಲ್ಲಿದ್ದರೆ ಕುಂದಾಪುರದ ಕುಂಕುಮ್ ...ಸೇಲ್ಸ್ ಎಂಬ ಹೆಸರಿನ ಬಟ್ಟೆ ಅಂಗಡಿಯ ...ರಾದ ಉಸ್ಮಾನ್ ಗನಿ ಎಂಬಾತ ಕುಂದಾಪುರದ ... ಠಾಣೆಯಲ್ಲಿ ಪೊಲೀಸರಿಂದ ಉಗಿಸಿಕೊಳ್ಳುತ್ತಾ ... ಮೇಲಾದ ಗಾಯಗಳ ನೋವನ್ನು ಅನುಭವಿಸುತ್ತಾ ...ಚಿದರು. ರಂಜಾನ್ ದಿನ ಬೆಳಿಗ್ಗೆ ಸುಮಾರು ... ವೇಳೆಗೆ ಕುಂದಾಪುರದ ಶಾಸ್ತ್ರಿ ವೃತ್ತದ ಬಳಿ ...ಗಳು - ಗುಂಪುಗುಂಪಾಗಿ ಜಮಾಯಿಸತೊಡ ...ದಾರಿಹೋಕರಿಗೆ ಮತ್ತು ಆ ಪರಿಸರದಲ್ಲಿರುವ ... ಜನರಿಗೆ ಇದು ಯಾವುದೋ ಮುಸಲ್ಮಾನರಿಗೆ ...ಸಲು ನಡೆಯುತ್ತಿರುವ ಸಿದ್ಧತೆ ಎಂಬ ...ನವೂ ಬಂದಿತ್ತು. ಭಜರಂಗಿಗಳು ಒಟ್ಟಾದರೆ ಮತ್ತೆ ಯಾವ ಘನಂದಾರಿ ...ನ್ನು ತಾನೆ ಮಾಡಲು ಸಾಧ್ಯ? ಅವರು ಅಂದು ಸೇರಿದ್ದೂ ಕೂಡ ... ಮನೆಹಾಳು ಕೆಲಸಕ್ಕೆ ಎಂಬುದಕ್ಕೆ ನಂತರದ ವಿದ್ಯಮಾನಗಳು ...ದವು.


...ಕುಮ್ ಸಾರಿ ಸೇಲ್ಸ್ ಎಂಬ ಸೀರೆ ಅಂಗಡಿಯೊಂದು ಶಾಸ್ತ್ರಿ ವೃತ್ತದ ...ಯು ಡಿಪಾರ್ಟ್‌ಮೆಂಟಲ್ ಸ್ಟೋರ್ಸ್‌ನ ಮೇಲಂತಸ್ತಿನಲ್ಲಿ ...ಲ್‌ನಲ್ಲಿ ಕಳೆದ ಕೆಲವು ತಿಂಗಳುಗಳಿಂದ ಕಾರ್ಯಾಚರಿ ...ಇದು ಶಾಶ್ವತವಾದ ಅಂಗಡಿಯಲ್ಲ. ಎಲ್ಲ ಊರುಗಳಲ್ಲೂ ...ಜನಪ್ರಿಯವಾಗಿರುವ ಸೀರೆ ಪ್ರದರ್ಶನ ಮತ್ತು ಮಾರಾಟದ ... ಮಳಿಗೆ ಇದು. ಈ ಅಂಗಡಿಯನ್ನು ನೋಡಿಕೊಳ್ಳು ...ವು ಮಹಾರಾಷ್ಟ್ರದ ಹಳ್ಳಿಯೊಂದರ ಉಸ್ಮಾನ್ ಗನಿ ...54 ವರ್ಷದ ಮುಸ್ಲಿಮ್ ವ್ಯಕ್ತಿ. ಭಟ್ಕಳದಲ್ಲಿಯೂ ...ದೆ ಮಳಿಗೆಯೊಂದನ್ನು ಆತ ನಡೆಸುತ್ತಿದ್ದಾರೆ. ತನ್ನಷ್ಟಕ್ಕೆ ...ಹೊಟ್ಟೆಪಾಡನ್ನು ನೋಡಿಕೊಂಡು ನೆಮ್ಮದಿಯಿಂದ ...ರುವ ಉಸ್ಮಾನ್ ಗನಿಯವರು ಈ ಊರಿನ ಯಾವುದೇ ...ಕಾರುಗಳಿಗೆ ಬಂದವರಲ್ಲ. ಸ್ಥಳೀಯ ಮುಸ್ಲಿಮರಿಗೂ ...ಪರಿಚಯವಿಲ್ಲ.

...ನ್ನೆ ರಂಜಾನ್ ದಿವಸ ಕುಂಕುಮ್ ಸಾರಿ ಸೇಲ್ಸ್ ... ಎದುರು ಜಮಾಯಿಸಿದ ಭಜರಂಗಿಗಳು ಉಸ್ಮಾನ್ ... ಅವರ ಇತರ ಕೆಲಸಗಾರರು ಭಟ್ಕಳದ ಹುಡುಗಿಯರನ್ನು "ಇಲ್ಲಿ ಬ್ಲೂ ಫಿಲ್ಮ್ ಶೂಟಿಂಗ್ ನಡೆಸುತ್ತಿದ್ದಾರೆ ಎಂದು ... ಹಬ್ಬಿಸಿದರು. ಹತ್ತು ನಿಮಿಷಗಳ ಒಳಗೆ ಇಡೀ ...ರದಾದ್ಯಂತ ಈ ಸುದ್ದಿ ಹಲವು ರೆಕ್ಕೆಪುಕ್ಕಗಳನ್ನು ...ಡು ವ್ಯಾಪಿಸಿತು. ಕುಂದಾಪುರ ಪೊಲೀಸರಿಗೂ ಕರೆ ...ಅವರೂ ಅಲ್ಲಿಗೆ ಧಾವಿಸಿದರು. ಅಂಗಡಿಯ ಮೆಟ್ಟಿಲುಗಳ ಬಳಿ ...ಸೇಲ್ಸ್‌ಗರ್ಲ್ಸ್‌ಗಳನ್ನು ಭಜರಂಗಿಗಳು ದಬಾಯಿಸಿದರು. "ಏನು ಬ್ಲೂ ...ಮಾಡಲಿಕ್ಕೆ ಬಂದಿದ್ದೀರಾ, ನಿಮಗೆ ಸಾಬರ ಜೊತೆಗೆ ಬ್ಲೂ ಫಿಲ್ಮ್ ...ಕಾ" ಎಂದು ಹೀಯಾಳಿಸಿದರು. ಮೇಲಕ್ಕೆ ನುಗ್ಗಿ ಅಂಗಡಿಯಲ್ಲಿದ್ದ ... ಗನಿಯನ್ನು ದರದರನೆ ಹೊರಗೆಳೆದು ತಂದು ಆತನ ಮೇಲೆ ...ಡೆ ಹಲ್ಲೆ ನಡೆಸಿದರು. ಇಂತಹ ಸಂದರ್ಭಗಳಲ್ಲಿ ಕರಾವಳಿಯ ... ಏನನ್ನು ಮಾಡುತ್ತಾರೋ ಅದನ್ನೇ ಕುಂದಾಪುರ ಪೊಲೀಸರೂ ... ಅರ್ಥಾತ್ ಹಲ್ಲೆ ನಡೆಯುತ್ತಿದ್ದರೂ ನೋಡುತ್ತ ಸುಮ್ಮನೆ ನಿಂತರು. ...ನ ನೇತೃತ್ವ ವಹಿಸಿದವನು ಇಲ್ಲಿಯ ಭಜರಂಗದಳದ ಮುಖಂಡ ...ಎಂಬ ಬಸ್ ಏಜೆಂಟ್.

...ವು ಇವರ ಅಂಗಡಿಯಲ್ಲಿ ಕೆಲಸ ಮಾಡುವವರು. ನಾವು ರಂಜಾನ್ ...ಗೆ ಬಂದಿದ್ದೇವೆ. ನಮ್ಮ ಮನೆಯಲ್ಲಿ ಹೇಳಿಯೇ ಬಂದಿದ್ದೇವೆ. ...ನಮ್ಮನ್ನು ಬಿಡಿ" ಎಂದು ಹುಡುಗಿಯರು ಎಷ್ಟೇ ಬೇಡಿಕೊಂಡರೂ ...ಮತ್ತ ಭಜರಂಗಿಗಳು ಅಥವಾ ಪೊಲೀಸರು ಕೇಳಲು ಸಿದ್ಧರಿರಲಿಲ್ಲ. ... ಉಸ್ಮಾನ್ ಮತ್ತು ಆತನ ಅಂಗಡಿಯಲ್ಲಿ ಕೆಲಸ ಮಾಡುವ ...ರ್ಲ್ಸ್‌ಗಳನ್ನು ಠಾಣೆಗೆ ಎಳೆದೊಯ್ದರು. ಅಲ್ಲಿ 'ವಿಚಾರಣೆ' ...ಯಿತು. ಈ ನಡುವೆ ಕುಂದಾಪುರದಲ್ಲಿ "ಈ ಸಾಬ ಹಿಂದೂ ...ಯರನ್ನು ಕರೆದುಕೊಂಡು ಬಂದು ಬ್ಲೂ ಫಿಲ್ಮ್ ತೆಗೀತಾ ಇದ್ದ. ...ಅಂಗಡಿಯಲ್ಲಿದ್ದ ಹುಡುಗರು ಅಂಗಿ ಬಿಚ್ಚಿಕೊಂಡಿದ್ದರು. ಭಜರಂಗ ... ಹೋಗಿ ಎಲ್ಲರನ್ನೂ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ' ...ಸುದ್ದಿ ಹರಡಿತು. ಕುಂದಾಪುರದ 'ಸಭ್ಯ ನಾಗರಿಕರು' ಎಂದಿನಂತೆ ...ಗೆ ಹಿಂದೂ ಹುಡುಗಿಯರೇ ಯಾಕೆ ಬೇಕು. ಸಾಬರ ಹುಡ್ಗೀರನ್ನ ...ದು ಏನು ಬೇಕಾದರೂ ಮಾಡ್ಲಿ" ಎಂದೆಲ್ಲ ಆಡತೊಡಗಿದರು.

...ಗೆ ಕರೆ ಮಾಡಿದ ಯಾವುದೇ ಪತ್ರಕರ್ತರಿಗೆ ಈ ವಿಷಯದ ... ಪೊಲೀಸರು ಯಾವುದೇ ಮಾಹಿತಿಯನ್ನು ನೀಡಲಿಲ್ಲ. ...ರೆಗೂ ಪ್ರಕರಣದ ಬಗ್ಗೆ ಎಫ್‌ಐಆರ್ ದಾಖಲಾಗಲಿಲ್ಲ. ...ಯರನ್ನು ಸಂಜೆಯವರೆಗೆ ಠಾಣೆಯಲ್ಲಿ ಕುಳ್ಳಿರಿಸಿ ಅವರ ...ರನ್ನು ಕರೆಯಿಸಿ ಪಂಚಾಯತಿಕೆ ನಡೆಸಿ 'ಎಚ್ಚರಿಕೆ' ಕೊಟ್ಟು ...ಕಳುಹಿಸಿಕೊಟ್ಟರು. ತೀವ್ರ 'ವಿಚಾರಣೆ'ಯ ನಂತರ ಉಸ್ಮಾನ್ ... [illegible] ಈಗ ಉಸ್ಮಾನ್ ಗನಿ ... ಅಂಗಡಿಗೆ ಬಂದಿಲ್ಲ, ಮುಚ್ಚಿದ ಬಾಗಿಲು ಮುಚ್ಚಿಯೇ ಇದೆ.

ಅಂದು ನಿಜವಾಗಿಯೂ ಕುಂಕುಮ್ ಸಾರಿ ಸೇಲ್ಸ್‌ನಲ್ಲಿ ನಡೆದದ್ದು ಇಷ್ಟು: ರಂಜಾನ್ ಹಬ್ಬದ ಸಲುವಾಗಿ ಉಸ್ಮಾನ್ ಗನಿ ತನ್ನ ಅಂಗಡಿಯಲ್ಲಿ ಕೆಲಸ ಮಾಡುವ ಹುಡುಗಿಯರನ್ನು ಬಿರಿಯಾನಿ ಊಟಕ್ಕಾಗಿ ಕರೆದಿದ್ದರು. ಭಟ್ಕಳದ ಶಾಖೆಯಲ್ಲಿ ಕೆಲಸ ಮಾಡುವ ನಾಲ್ವರು ಹುಡುಗಿಯರು ಮತ್ತು ಕುಂದಾಪುರದ ಅಂಗಡಿಯಲ್ಲಿ ಕೆಲಸ ಮಾಡುವ ಹುಡುಗಿಯರು ಅಂದು ಕುಂದಾಪುರದಲ್ಲಿ ಸೇರಿದ್ದರು. ಅವರೆಲ್ಲ ಇಂದು ಅಂಗಡಿಗೆ ರಜೆ ಇರುವುದಾಗಿಯೂ, ತಾವು ರಂಜಾನ್ ಊಟಕ್ಕಾಗಿ ಹೋಗುತ್ತಿರುವುದಾಗಿಯೂ ಮನೆಯಲ್ಲಿ ಹೇಳಿಯೇ ಬಂದಿದ್ದರು.


ಮೋಹನ್

ಉಸ್ಮಾನ್ ಗನಿ ಈ ಅಂಗಡಿಯ ಒಂದು ಭಾಗದಲ್ಲಿಯೇ ವಾಸವಾಗಿದ್ದಾರೆ. ಅವರು ಮತ್ತು ಅಂಗಡಿಯಲ್ಲಿ ಕೆಲಸ ಮಾಡುವ ಹುಡುಗರು ಅಲ್ಲಿಯೇ ಮಲಗುತ್ತಾರೆ. ಅಡುಗೆ ಮಾಡುತ್ತಾರೆ. ಊಟ ಮಾಡುತ್ತಾರೆ. ವಾಸ್ತವ್ಯಕ್ಕಾಗಿ ಆತ ಬೇರೆಲ್ಲೂ ಮನೆ ಮಾಡಿಲ್ಲ. ರಂಜಾನ್ ಹಬ್ಬದ ದಿವಸ ಅಂಗಡಿಗೆ ಹುಡುಗಿಯರು ಬಂದಿದ್ದಾರೆ. ಒಳಗೆ ಬಿರಿಯಾನಿ ಅಡುಗೆಯ ತಯಾರಿ ನಡೆಯುತ್ತಿದೆ. ಅಂಗಡಿಯಲ್ಲಿ ವ್ಯವಹಾರಕ್ಕೆ ರಜೆ ಇದ್ದ ಕಾರಣ ಶಟರ್ ಅರ್ಧ ತೆರೆದಿತ್ತು. ಇದಿಷ್ಟು ನೈಜ ಚಿತ್ರಣ. ಇದು ಕುಂದಾಪುರದ ಭಜರಂಗಿಗಳಿಗೂ ಗೊತ್ತು. ಆದರೆ ಭಜರಂಗಿಗಳಿಗೆ ಮುಸ್ಲಿಮರ ಮೇಲೆ ಹಲ್ಲೆ ಮಾಡಲು ಒಂದು ನೆಪ ಬೇಕು. ತಾವು ಹಿಂದೂ ಹುಡುಗಿಯರನ್ನು ರಕ್ಷಿಸಿದ್ದೇವೆಂಬ ಪ್ರಚಾರ ಬೇಕು. ಸಾಧ್ಯವಾದರೆ ಮುಸಲ್ಮಾನರ ಅಂಗಡಿಗಳನ್ನು ದೋಚಬೇಕು. ಮುಸ್ಲಿಮರ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿಸಿ ಅವರನ್ನು ಆರ್ಥಿಕವಾಗಿ ತಳ ತಪ್ಪಿಸಬೇಕು. ಆ ಮೂಲಕ ಸಂಘ ಪರಿವಾರದ ಉದ್ಯಮಿಗಳ ಬಿಜಿನೆಸ್‌ಗೆ ನೆರವಾಗಬೇಕು: ಅದಕ್ಕಾಗಿ ಅಮಾಯಕನನ್ನು ಬಲಿಕೊಟ್ಟರು.

ಈ ಸತ್ಯ ಸಂಗತಿಗಳನ್ನು ಆಲಿಸುವ ವ್ಯವಧಾನ ಈ ನಗರದ ಅರ್ಧದಷ್ಟು

ಕುಂದಾಪುರ: ಭಜರಂಗಿಗಳೇ ಹಿಂದೂ ಹುಡುಗಿಯರ ಮಾನ ಕಳೆದರು

ಜನಕ್ಕೆ ಇಲ್ಲ. ಅವರು ಕೇಳುವ ಪ್ರಶ್ನೆಗಳು ಭಜರಂಗಿಗಳು ಅವರ ಬಾಯಿಗೆ ಹಾಕಿದ ಪ್ರಶ್ನೆಗಳು ಮಾತ್ರ. ಅಂತಹ ಪ್ರಶ್ನೆಗಳಲ್ಲಿ ಕೆಲವು ಹೀಗಿವೆ: ಅಡುಗೆ ಮಾಡುವ ಹುಡುಗರು ಶರ್ಟ್ ಯಾಕೆ ಹಾಕಿರಲಿಲ್ಲ?

ಉತ್ತರ: ಅವರು ಶರ್ಟ್ ಹಾಕಿಕೊಂಡಿರಲಿಲ್ಲ ಎನ್ನುವುದು ನಿಜ. ಆದರೆ ಅದರಲ್ಲೇನು ವಿಶೇಷತೆ ಇರಲು ಸಾಧ್ಯ? ಕರಾವಳಿಯ ಸೆಕೆಗೆ ಕುದಿಯುವ ತಾರಸಿಯ ಅಡಿಯಲ್ಲಿ ಸಂಪೂರ್ಣ ಮೈ ಮುಚ್ಚಿಕೊಂಡು ಅಡುಗೆ ಮಾಡಲು ಅದೇನು ಪಂಚತಾರಾ ಹೊಟೇಲ್‌ನ ಅಡುಗೆ ಕೋಣೆಯಲ್ಲ. ಕರಾವಳಿಯ ಹೆಚ್ಚಿನ ಹೊಟೇಲ್‌ಗಳ ಅಡುಗೆ ಕೋಣೆ ಹೊಕ್ಕವರಿಗೆ ಅಲ್ಲಿ ಎಷ್ಟು ಜನ ಅಂಗಿ ಹಾಕಿಕೊಂಡು ಕೆಲಸ ಮಾಡುತ್ತಾರೆ ಎಂಬುದು ಗೊತ್ತು. ಹಾಗಂತ ಅವರೆಲ್ಲ ಹೊಟೇಲಿಗೆ ಬರುವ ಹುಡುಗಿಯರಿಗಾಗಿ ಅಂಗಿ ಬಿಚ್ಚಿಕೊಂಡು ನಿಂತಿದ್ದಾರೆ ಎಂದು ತಿಳಿದುಕೊಳ್ಳಬೇಕೆ?


ಕುಂದಾಪುರದ ಶಾಪ್.....

ಇನ್ನೊಂದು ಪ್ರಶ್ನೆ ಹೀಗಿದೆ: ಆ ಸಾಬಿಗೆ ರಂಜಾನ್ ಹಬ್ಬಕ್ಕೆ ಮನೆಗೆ ಕರೆದು ಊಟ ಹಾಕಲಿಕ್ಕೆ ಆಗಲಿಲ್ಲವಾ. ಅದನು ಯಾಕೆ ಅಂಗಡಿಗೆ ಕರೆದ?

ಉತ್ತರ: ಉಸ್ಮಾನ್ ಗನಿಯ ಊಟ-ನಿದ್ರೆ ಎಲ್ಲವೂ ಈ ಅಂಗಡಿ ಕೋಣೆಯಲ್ಲಿಯೆ. ಆತ ಬೇರೆಲ್ಲೂ ಮನೆ ಮಾಡಿಲ್ಲ, ಹಾಗಾಗಿ ಅಲ್ಲಿಯೇ ಊಟಕ್ಕೆ ಕರೆದಿದ್ದ. ಹಾಗಂತ ಉಸ್ಮಾನ್ ಗನಿಗೆ ಪ್ರತ್ಯೇಕ ಮನೆ ಇದ್ದಿದ್ದರೂ ಸಹ ಆತ ಅಲ್ಲಿಗೆ ಈ ಹುಡುಗಿಯರನ್ನು ಕರೆಯಲು ಇಂದಿನ ಕರಾವಳಿಯ ಪರಿಸ್ಥಿತಿಯಲ್ಲಿ ಸಾಧ್ಯವೇ? ಕುಂದಾಪುರದ ಜನನಿಬಿಡ ಶಾಸ್ತ್ರಿ ವೃತ್ತದ ಬಳಿ, ಮುಖ್ಯ ರಸ್ತೆಯ ಪಕ್ಕದಲ್ಲಿ, ಅದೂ ಕುಂದಾಪುರದ ಡಿವೈಎಸ್‌ಪಿ ಕಚೇರಿಯಿಂದ ನೂರು ಮೀಟರ್‌ಗೂ ಕಡಿಮೆ ದೂರದಲ್ಲಿರುವ ಕಟ್ಟಡದಲ್ಲಿರುವ ಈ ಅಂಗಡಿಯಲ್ಲಿಯೇ ಊಟ ಹಾಕಿದರೆ ಬ್ಲೂ ಫಿಲಂ ಶೂಟಿಂಗ್ ನಡೆಯುತ್ತಿದೆ ಎಂದು ಕೋಮುವಾದಿಗಳು ಪುಕಾರು ಹಬ್ಬಿಸುತ್ತಾರೆ. ಹೀಗಿರುವಾಗ ಇನ್ನು ಮನೆಗೆ ಕರೆದು ಊಟ ಹಾಕಿದರೆ ಅದೆಂತಹ ಅನಾಹುತಗಳನ್ನು ಸೃಷ್ಟಿಸುತ್ತಿದ್ದರು ಎಂದು ಯಾರೂ ಊಹಿಸಬಹುದು.

ಇಷ್ಟೆಲ್ಲ ಪ್ರಶ್ನೆಗಳನ್ನು ಕೇಳುವ ಜನ "ನಿಜಕ್ಕೂ ಬ್ಲೂ ಫಿಲಂ ತೆಗೆಯುತ್ತಿದ್ದರೆ ಶಟರ್‌ಅನ್ನು ಅರ್ಧ ಯಾಕೆ ಮುಚ್ಚಿದ್ದರು? ಪೂರ್ತಿ ಯಾಕೆ ಮುಚ್ಚಿರಲಿಲ್ಲ?" ತರಹದ ಪ್ರಶ್ನೆಗಳನ್ನು ಕೇಳುತ್ತಿಲ್ಲ ಎಂದರೆ ಅವರೆಲ್ಲರ ಬುದ್ಧಿಗೆ ಅದಿನ್ನೆಂತಹ ಮಂಕು ಬಡಿದಿರಬೇಕು?!

ಈ ಇಡೀ ಪ್ರಕರಣದಲ್ಲಿ ಭಜರಂಗಿಗಳು ಎಂಟು ಅಮಾಯಕ ಹುಡುಗಿಯರ ಮಾನ ಕಳೆದಿದ್ದಾರೆ. ಆ ಹುಡುಗಿಯರೆಲ್ಲರೂ ಹಿಂದೂಗಳು ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದವರು. ಮನೆಯಲ್ಲಿ ನೂರಾರು ತಾಪತ್ರಯಗಳನ್ನು ಹೊಂದಿರುವವರು. ತಿಂಗಳಿಗೆ ಸಾವಿರ, ಎರಡು ಸಾವಿರ ರೂಪಾಯಿ ದುಡಿದು ತಮ್ಮ ಕುಟುಂಬಗಳಿಗೆ ನೆರವಾಗುತ್ತಿರುವವರು. ಈ ಹುಡುಗಿಯರಿಗೆ ಉಸ್ಮಾನ್ ಗನಿಯ ಕುರಿತು ಸದಭಿಪ್ರಾಯವಿದೆ. ಆತನಿಗೆ ಭಜರಂಗಿಗಳು ಚಚ್ಚಿದ ಕುರಿತು ನೋವಿದೆ.

ಆದರೆ ಕೋಮುವಾದಿ ಭಜರಂಗಿಗಳಿಗೆ ಹಿಂದುಳಿದ ವರ್ಗಗಳ ಹುಡುಗಿಯರ ಮಾನ, ಮರ್ಯಾದೆ ಮತ್ತು ಭಾವನೆಗಳ ಕುರಿತು ಯಾವುದೇ ಗೌರವವಿಲ್ಲ. ಅಮಾಯಕ ಹಿಂದೂ ಹುಡುಗಿಯರನ್ನು ಬ್ಲೂ ಫಿಲಂ ನಟಿಯರು ಎಂದೆಲ್ಲ ಪುಕಾರು ಹಬ್ಬಿಸಿ ಅಪಪ್ರಚಾರದ-ಅವಮಾನದ ನರಕದಲ್ಲಿ ನರಳುವಂತೆ ಮಾಡಿದ್ದಾರೆ. ಆ ಹುಡುಗಿಯರು ಇನ್ನು ಮುಂದೆ ಆ ಊರಿನಲ್ಲಿ ತಲೆ ಎತ್ತಿಕೊಂಡು ಓಡಾಡುವುದು ಸಾಧ್ಯವೆ? ಇದು ಭಜರಂಗಿಗಳು ಹಿಂದೂ ಧರ್ಮ ಮತ್ತು ಮಾತೃ ಸ್ವರೂಪಿಯಾದ ಮಹಿಳೆಯರನ್ನು ರಕ್ಷಣೆ ಮಾಡುವ ಪರಿ.

ಕರಾವಳಿಯ ಬಹುತೇಕ ಪೊಲೀಸ್ ಠಾಣೆಗಳಂತೆಯೆ ಕುಂದಾಪುರ ಪೊಲೀಸ್ ಠಾಣೆಯೂ ಭಜರಂಗಿಗಳ ಆಡಳಿತದಲ್ಲಿದೆ. ಹೀಗಾಗಿ ಪ್ರಕರಣ ಕುರಿತು ಹಿಂದೂ ಹುಡುಗಿಯರಾಗಲಿ, ಉಸ್ಮಾನ್ ಗನಿಯಾಗಲಿ ಭಜರಂಗಿಗಳ ವಿರುದ್ಧ ಪೊಲೀಸರಿಗೆ ದೂರು ನೀಡಲಿಲ್ಲ. ಆದರೆ ಈ ಪ್ರಕರಣದಲ್ಲಿ ಒಂದು ಸಮಾಧಾನದ ಸಂಗತಿ ಹಲ್ಲೆ ನಡೆದ ರಾತ್ರಿ ಜರುಗಿತು.

ಉಸ್ಮಾನ್ ಗನಿಯ ಮೇಲೆ ಭಜರಂಗಿ ಗಿರೀಶ್ ಮತ್ತು ಆತನ ಪಡೆ ಹಲ್ಲೆ ನಡೆಸುವಾಗ ಅಲ್ಲಿದ್ದ ಮಹಿಳಾ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಮೀನಾಕ್ಷಿ ಎಂಬ ಗಟ್ಟಿ ಮನಸ್ಸಿನ ಹೆಂಗಸು ಗಿರೀಶನ ವಿರುದ್ಧ ಕುಂದಾಪುರದ ಡಿವೈಎಸ್‌ಪಿ ವಿಶ್ವನಾಥ ಪಂಡಿತ್‌ಗೆ ದೂರು ನೀಡಿದರು. ತಾನು ಕರ್ತವ್ಯದಲ್ಲಿರುವಾಗ ಗಿರೀಶನು ತನ್ನ ಆಕ್ಷೇಪವನ್ನೂ ಲೆಕ್ಕಿಸದೆ ಉಸ್ಮಾನ್ ಮೇಲೆ ಹಲ್ಲೆ ನಡೆಸಿದ್ದರಿಂದ ಆತನ ಮೇಲೆ ಕ್ರಮ ಕೈಗೊಳ್ಳಬೇಕೆಂದು ಮೀನಾಕ್ಷಿ ತಮ್ಮ ದೂರಿನಲ್ಲಿ ನಿವೇದಿಸಿಕೊಂಡಿದ್ದರು. ತಕ್ಷಣ ಕಾರ್ಯಪ್ರವೃತ್ತರಾದ ಡಿವೈಎಸ್‌ಪಿ ಗಿರೀಶನ ವಿರುದ್ಧ ಕೇಸು ದಾಖಲಿಸಿ ಆತನನ್ನು ಬಂಧಿಸಿದರು. ಅದೇ ದಿನ ರಾತ್ರಿ ಜಾಮೀನಿನ ಮೇಲೆ ಆತನ ಬಿಡುಗಡೆಗೊಂಡ ಎಂಬುದು ಬೇರೆ ವಿಷಯ.

ಆದರೆ ಮರುದಿನ ಬೆಳಿಗ್ಗೆ ಗಿರೀಶ ನೂರರಷ್ಟು ಭಜರಂಗಿಗಳನ್ನು ಸೇರಿಸಿಕೊಂಡು ಡಿವೈಎಸ್‌ಪಿ ಕಚೇರಿಗೆ ಮುತ್ತಿಗೆ ಹಾಕಿದ. ತಾನು ಹಲ್ಲೆ ನಡೆದ ಸ್ಥಳದಲ್ಲಿಯೇ ಇರಲಿಲ್ಲವೆಂದು ಸುಳ್ಳು ಹೇಳಿದ. ಭಜರಂಗಿಗಳು ಡಿವೈಎಸ್‌ಪಿ ವಿರುದ್ಧ ಘೋಷಣೆ ಕೂಗಿದರು. ಗಿರೀಶನ ಪರವಾಗಿ ವಾದಿಸಲು ಸ್ಥಳೀಯ ಆರ್‌ಎಸ್‌ಎಸ್ ಧುರೀಣ ಸುಬ್ರಹ್ಮಣ್ಯ ಹೊಳ್ಳ ಮುಂತಾದವರೆಲ್ಲ ಸೇರಿದರು. ಜತೆಗಿಷ್ಟು ಮಟ್ಕಾ ಚೀಟಿ ಬರೆಯುವವರು, ದೋ ನಂಬರ್ ದಂಧೆಯವರು ಮತ್ತು ಕೆಲಸ ಇಲ್ಲದ ಪೋಕರಿಗಳೂ ಇದ್ದರು.

ದುರಂತವೆಂದರೆ ಈ ತಂಡದ ನೇತೃತ್ವ ವಹಿಸಿದ್ದು ಕುಂದಾಪುರ ಪುರಸಭೆಯ ಅಧ್ಯಕ್ಷ ಮೋಹನದಾಸ ಶೆಣೈ. ತಾನು ಪ್ರಥಮ ಪ್ರಜೆಯಾಗಿರುವ ಊರಿನಲ್ಲಿ ವ್ಯವಹಾರ ನಡೆಸಿಕೊಂಡಿದ್ದ ಓರ್ವ ಅಮಾಯಕನ ಮೇಲೆ ಹಲ್ಲೆ ನಡೆಸಿದ, ಅಲ್ಲಿ ಕೆಲಸ ಮಾಡುತ್ತಿದ್ದ ಹುಡುಗಿಯರ ಮಾನ ಕಳೆದ ಆರೋಪಿಯ ಪರವಹಿಸಿ ಗಿರೀಶನ ವಿರುದ್ಧದ ಕೇಸನ್ನು ಹಿಂದಪಡೆಯಬೇಕೆಂದು ಪುರಸಭಾಧ್ಯಕ್ಷರ ಬೀದಿಗೆ ಇಳಿದದ್ದನ್ನು ಕಂಡು ಕುಂದಾಪುರದ ಪ್ರಜ್ಞಾವಂತರು ಬೆರಗಾದರು. ಆದರೆ ವಾಸ್ತವವಾಗಿ ಈ ಮೋಹನದಾಸ ಶೆಣೈ ಸ್ವತಃ ವ್ಯಾಪಾರಿಯೂ ಹೌದು. ಅದಲ್ಲದೆ ಆರ್‌ಎಸ್‌ಎಸ್ ಹಿನ್ನೆಲೆ ಉಳ್ಳವನು ಆತ ನೇತೃತ್ವ ವಹಿಸಿದ್ದರಲ್ಲಿ ಏನು ಆಶ್ಚರ್ಯ ಇದೆ?

ಈ ಪ್ರಕರಣದಲ್ಲಿ ಕನಿಷ್ಠ ಪಕ್ಷ ಮೀನಾಕ್ಷಿ ಎಂಬ ಹೆಣ್ಣು ಮಗಳು ಮತ್ತು ವಿಶ್ವನಾಥ ಪಂಡಿತ್ ಎಂಬ ಪೊಲೀಸ್ ಅಧಿಕಾರಿ ಕುಂದಾಪುರದ ಮಾನ ಕಾಪಾಡಿದರು ಮತ್ತು ಉಸ್ಮಾನ್ ಮತ್ತು ಅವರ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿದ್ದ ಹುಡುಗಿಯರ ನೋವಿಗೆ ಸ್ವಲ್ಪವಾದರೂ ಸ್ಪಂದಿಸಿದರು.

ಆದರೆ ಈ ಬೆಟ್ಟಿಗರಿಗೆ ಬುದ್ಧಿ ಬರುವುದೆಂದು? [illegible] ಸಹಜ ಮನಸ್ಥಿತಿಯನ್ನು [illegible]

● [illegible]

ಇಂಗ್ಲಿಷ್ ಮಾತನಾಡಿ, ಲ್ಯಾಪ್‌ಟಾಪ್ ತೋರಿಸಿ ಟಿಟಿಈಯನ್ನು ಬೆದರಿಸಿದ್ದು!



ನನ್ನ ಕಿತಾಪತಿ

● ಕುಮಾರ್ ಬುರಡಿಕಟ್ಟಿ

ಅದು 2005ನೇ ಇಸ್ವಿ. ನಾನು ಆಗ ಮುಂಬೈನಲ್ಲಿದ್ದೆ. **Revolutionary Democratic Front (RDF)** ಎಂಬ ರಾಷ್ಟ್ರ ಮಟ್ಟದ ಸಾಮಾಜಿಕ ಸಂಘಟನೆಯೊಂದರ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯನಾಗಿದ್ದ ನನಗೆ ಮುಂಬೈಯನ್ನೇ ಕೇಂದ್ರ ಸ್ಥಾನವಾಗಿಟ್ಟುಕೊಂಡು ಗುಜರಾತ್, ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು ಮತ್ತು ಕೇರಳಗಳ ಜನಪರ ಸಂಘಟನೆಗಳನ್ನು ಒಂದು ವೇದಿಕೆಯಡಿಯಲ್ಲಿ ತರುವ ಜವಾಬ್ದಾರಿಯನ್ನು ಹೊರಿಸಲಾಗಿತ್ತು. ನನ್ನಂತೆ ಉಳಿದ ಸದಸ್ಯರು ಭಾರತದ ಇನ್ನಿತರ ರಾಜ್ಯಗಳ ಜವಾಬ್ದಾರಿ ಹೊತ್ತುಕೊಂಡಿದ್ದರು. ಮೂರು ವರ್ಷಗಳ ಕಾಲ ಮುಂಬೈನಲ್ಲೇ ಇದ್ದ ನಾನು ಈ ಕೆಲಸದ ನಿಮಿತ್ತ ಆಗಾಗ ಈ ರಾಜ್ಯಗಳಿಗೆ ಹೋಗಿ ಬರುವುದು ಮಾಮೂಲಿಯಾಗಿತ್ತು. ಅಂತೆಯೇ ಗುಜರಾತ್‌ಗೂ ಕನಿಷ್ಠ ಎರಡು ತಿಂಗಳಿಗೊಮ್ಮೆಯಾದರೂ ಹೋಗಿ ಒಂದು ವಾರ ಇದ್ದು ಬರುತ್ತಿದ್ದೆ. ಮೊದಲು ಮುಂಬೈನಿಂದ ನೇರವಾಗಿ ಅಹ್ಮದಾಬಾದ್‌ಗೆ ಹೋಗುವುದು, ಅಲ್ಲಿಂದ ಬರೋಡಾಗೆ, ನಂತರ ಸೂರತ್‌ಗೆ ಬಂದು ಕೆಲಸಗಳೆಲ್ಲ ಮುಗಿದ ಮೇಲೆ ಅಂತಿಮವಾಗಿ ಮುಂಬೈಗೆ ಮರಳುತ್ತಿದ್ದೆ.

ಇದೇ ರೀತಿಯಲ್ಲಿ ಒಂದು ದಿನ ಸೂರತ್‌ನಿಂದ ಮುಂಬೈಗೆ ಮರಳುವುದಕ್ಕಾಗಿ ಬೆಳಗ್ಗೆ ರೈಲ್ವೇ ಸ್ಟೇಷನ್‌ಗೆ ಬಂದೆ. ಸೂರತ್‌ನಿಂದ ಮುಂಬೈ ಕೇವಲ ಐದು ಗಂಟೆಯ ಪ್ರಯಾಣವಾಗಿದ್ದರಿಂದ ಜನರಲ್ ಬೋಗಿಯಲ್ಲೇ ಬಂದರಾಯಿತು ಎಂದುಕೊಂಡು ರೈಲ್ವೇ ಟಿಕೆಟ್ ರಿಜರ್ವೇಶನ್ ಮಾಡಿಸಿಟ್ಟುಕೊಂಡಿರಲಿಲ್ಲ. ಸೂರತ್‌ನಿಂದ ಮುಂಬೈಗೆ ಬೆಳಗ್ಗೆ 8.35ಕ್ಕೆ ಕರ್ಣಾವತಿ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ಹಾಗೂ ಅದೇ ಸಮಯದಲ್ಲಿ ಇನ್ನೊಂದು ಯಾವುದೋ ಎಕ್ಸ್‌ಪ್ರೆಸ್ ಟ್ರೇನ್‌ಗಳಿದ್ದವು. ಎಕ್ಸ್‌ಪ್ರೆಸ್ ಗಾಡಿಯ ಟಿಕೆಟ್ ತೆಗೆದುಕೊಂಡು ಈ ಎರಡು ರೈಲುಗಳಲ್ಲಿ ಯಾವುದು ಮೊದಲು ಬರುತ್ತೋ ಅದರಲ್ಲಿ ಹೋಗುವುದಕ್ಕೆ ನಿರ್ಧರಿಸಿದ್ದೆ. ವಾಸ್ತವದಲ್ಲಿ ಕರ್ಣಾವತಿಯು ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ಆಗಿದ್ದರಿಂದ ನಾನು ಖರೀದಿಸಿದ ಟಿಕೆಟ್ ಅದರಲ್ಲಿ ನಡೆಯುವುದಿಲ್ಲ ಎಂಬುದು ನನಗೆ ಗೊತ್ತೇ ಇರಲಿಲ್ಲ. ನನ್ನ ಅದೃಷ್ಟವೋ ಏನೋ ಎಕ್ಸ್‌ಪ್ರೆಸ್ ಗಾಡಿಯೇ ಮೊದಲು ಬಂತು, ಅದನ್ನು ಹತ್ತಿಕೊಂಡು ಮುಂಬೈಗೆ ಬಂದೆ. ಆದರೆ, ನಾನು ಹತ್ತಿದ ರೈಲು ಗಾಡಿಯು ಕೇವಲ ಮುಂಬೈನ ಬಾಂದ್ರಾ ಸ್ಟೇಷನ್ ತನಕ ಮಾತ್ರವೇ ಹೋಗುತ್ತಿತ್ತು. ನನ್ನ ರೂಮ್ ಇದ್ದುದು ಅದಕ್ಕಿಂತ ಮುಂದೆ ದಾದರ್‌ನಲ್ಲಿ. ಹಿಂದೆ ಬರುತ್ತಿದ್ದ ಕರ್ಣಾವತಿಯು ದಾದರ್ ದಾಟಿ ಮುಂದಿನ ಮುಂಬೈ ಸೆಂಟ್ರಲ್ ಸ್ಟೇಶನ್ ತನಕ ಹೋಗುತ್ತದೆ ಎಂಬುದು ಗೊತ್ತಿತ್ತು. ನಾನು ಹೇಗೂ ದಾದರ್‌ವರೆಗೂ ಟಿಕೆಟ್ ಖರೀದಿಸಿದ್ದರಿಂದ ಹಾಗೂ ಆ ಟಿಕೆಟ್ ಬಳಸಿ ಈ ಎರಡೂ ಟ್ರೇನ್‌ಗಳಲ್ಲಿ ಯಾವುದರಲ್ಲಿ ಬೇಕಾದರೂ ಪ್ರಯಾಣಿಸಬಹುದು ಎಂದು ಅಂದುಕೊಂಡಿದ್ದರಿಂದ ಕರ್ಣಾವತಿಯಲ್ಲಿ ಹೋಗೋಣ ಎಂದುಕೊಂಡು ನನ್ನ ಟ್ರೇನ್ ಉತ್ತರ ಮುಂಬೈನ ಬೋರಿವಲಿ ಸ್ಟೇಶನ್‌ಗೆ ಬರುತ್ತಿದ್ದಂತೆಯೇ ಇಳಿದುಕೊಂಡೆ.

ಐದೇ ನಿಮಿಷದಲ್ಲಿ ಹಿಂದಿನಿಂದ ಕರ್ಣಾವತಿ ಬಂದೇ ಬಿಟ್ಟಿತು. ಹತ್ತಿಕೊಂಡೆ. ಟ್ರೇನ್ ಹೊರಡುತ್ತಿದ್ದಂತೆಯೇ ಟಿಕೆಟ್ ಚೆಕ್ ಮಾಡುವುದಕ್ಕೆ ಟಿಟಿ ಬಂದ. ಬಹಳ ಆತ್ಮವಿಶ್ವಾಸದಿಂದ ನಾನು ಖರೀದಿಸಿದ್ದ ಟಿಕೆಟ್ ತೋರಿಸಿದೆ. "ಇದು ಕರ್ಣಾವತಿ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್. ನೀವು ಖರೀದಿಸಿರುವುದು ಕೇವಲ ಎಕ್ಸ್‌ಪ್ರೆಸ್ ಟ್ರೇನ್ ಟಿಕೆಟ್. ಇದರಲ್ಲಿ ನಿಮ್ಮ ಟಿಕೆಟ್ ನಡೆಯುವುದಿಲ್ಲ. 250 ರೂಪಾಯಿ ದಂಡ ಕೊಡಿ" ಎಂದು ಹಿಂದಿಯಲ್ಲಿ ಕೇಳಿದ. ಆತ ಹಿಂದಿ ಉಚ್ಚಾರಣೆ, ಶೈಲಿ ನೋಡಿದರೇನೇ ಆತ ಉತ್ತರ ಪ್ರದೇಶದವನು ಎಂದು ಅರ್ಥವಾಗುತ್ತಿತ್ತು. ಮಧ್ಯಮಧ್ಯದಲ್ಲಿ ಒಂದೋ ಎರಡೋ ಇಂಗ್ಲಿಷ್ ಪದ ಬಳಸುತ್ತಿದ್ದ. ಅವುಗಳ ಉಚ್ಚಾರಣೆ ಹೇಗಿತ್ತೆಂದರೆ ಅದೇನು ಇಂಗ್ಲಿಷ್ ಪದವೋ ಅಥವ ಉತ್ತರ ಪ್ರದೇಶದ ಯಾವುದೋ ಊರಿನ ಹೆಸರೋ ಎನ್ನುವಂತಿರುತ್ತಿತ್ತು. ಆತನಿಗೆ ಇಂಗ್ಲಿಷ್ ಬರುವುದಿಲ್ಲ ಎಂಬುದೂ ಮೇಲ್ನೋಟಕ್ಕೇ ಅರ್ಥವಾಗುತ್ತಿತ್ತು. ಆತ ದಂಡ ಕೇಳುತ್ತಿದ್ದಂತೆಯೇ ನನ್ನ ಕೋಪ ನೆತ್ತಿಗೇರಿತು. "ನಾನು ಟಿಕೆಟ್‌ಲೆಸ್ ಟ್ರಾವಲರ್ ಅಲ್ಲ. ಅಧಿಕೃತವಾಗಿ ಟಿಕೆಟ್ ಖರೀದಿಸಿದ್ದೇನೆ. ಯಾವ ಕಾರಣಕ್ಕೂ ದಂಡಕೊಡುವುದಿಲ್ಲ, ಏನು ಮಾಡುತ್ತೀರೋ ಮಾಡಿಕೊಳ್ಳಿ" ಎಂದು ವಾದಿಸಲಾರಂಭಿಸಿದೆ. "ದಂಡ ಕೊಡುವುದಿಲ್ಲವೋ? ನಿಮ್ಮಂತಹ ಹಠಮಾರಿಗಳಿಗೆ ಹೇಗೆ ಬುದ್ಧಿ ಕಲಿಸಬೇಕು ಎಂಬುದು ನನಗೆ ಚೆನ್ನಾಗಿ ಗೊತ್ತಿದೆ. ನಿಮ್ಮಂಥವರನ್ನು ದಿನಾ ಎಷ್ಟು ಜನ ನೋಡ್ತೀವಿ ಗೊತ್ತಾ? ಸ್ವಲ್ಪ ಇರಿ ಬರ್ತೇನೆ" ಎಂದು ನನ್ನ ಟಿಕೆಟ್ ತೆಗೆದುಕೊಂಡು ಟ್ರೇನ್‌ನಲ್ಲಿದ್ದ ಇನ್ನಿತರರ ಟಿಕೆಟ್ ಚೆಕ್ ಮಾಡುವುದಕ್ಕೆ ಹೋದ. ಅಲ್ಲಿದ್ದ ಬಹುತೇಕರು ನನ್ನಂತೆಯೇ ತಪ್ಪು ಮಾಡಿದ್ದರಿಂದ ಎಲ್ಲರಿಗೂ 250 ರೂಪಾಯಿ ದಂಡ ಕಟ್ಟುವಂತೆ ಕೇಳಿದ. ಗುಸುಗುಸು ಮಾತನಾಡಿಕೊಂಡು ಎಲ್ಲರೂ ಆತನಿಗೆ 100 ರೂಪಾಯಿ ಲಂಚ ಕೊಟ್ಟು ಬಚಾವಾದರು. ಸುಮಾರು 10 ನಿಮಿಷದಲ್ಲಿ ನನ್ನ ಕಣ್ಣೆದುರಿಗೇ ಆತ ಕನಿಷ್ಠ 1000 ಲಂಚ ತಿಂದು ಅವರನ್ನೆಲ್ಲ ಬಿಟ್ಟುಬಿಟ್ಟ. ಅಲ್ಲಿಂದ ನೇರವಾಗಿ ನನ್ನ ಹತ್ತಿರ ಬಂದು "ಅವರೆಲ್ಲಾ ಹೇಗೆ ಕೊಟ್ಟು ಬಚಾವಾದರು ಅಂತ ನೋಡಿದೆಯಲ್ಲ? ಈಗ ನೀನೇನು ಮಾಡ್ತಿಯ? 100 ಕೊಟ್ಟು ಸುಮ್ಮನಾಗ್ತಿಯಾ ಇಲ್ಲವೆ 250 ಕಟ್ಟಿ ರಶೀದಿ ಪಡೆಯುತ್ತೀಯಾ? ಅಥವಾ ಏನನ್ನೂ ಕೊಡದೇ ಜೈಲಿಗೆ ಹೋಗ್ತಿಯಾ?" ಎಂದು ಖಾರವಾಗಿ ಕೇಳಿದ. ಆತ ಲಂಚ ತಿಂದಿದ್ದನ್ನು ಕಣ್ಣಾರೆ ನೋಡಿದ್ದೆನಾದ್ದರಿಂದ ನನ್ನ ತಪ್ಪನ್ನು ಅವನು ಹಿಡಿದುಕೊಂಡಂತೆಯೇ ಅವನ ತಪ್ಪನ್ನು ನಾನು ಹಿಡಿದುಕೊಳ್ಳುವುದಕ್ಕೆ ತೀರ್ಮಾನಿಸಿ "ಈಗಂತೂ ಖಂಡಿತಾ ಕೊಡುವುದಿಲ್ಲ, ಅದೇನು ಮಾಡ್ತಿಯೋ ಮಾಡಿಕೊ" ಎಂದೆ. ನಮ್ಮ ಈ ವಾಗ್ವಾದ ಮುಂದುವರೆಯುತ್ತಿದ್ದಂತೆ ಕರ್ಣಾವತಿ ರೈಲು ಬಾಂದ್ರಾ, ದಾದರ್‌ಗಳನ್ನು ದಾಟಿ ತನ್ನ ಕೊನೆಯ ಸ್ಟೇಷನ್ ಆಗಿದ್ದ ಮುಂಬೈ ಸೆಂಟ್ರಲ್‌ಗೆ ಬಂದಿತು. ಟ್ರೇನ್‌ನಿಂದ ನಾವಿಬ್ಬರೂ ಇಳಿಯುತ್ತಿದ್ದಂತೆಯೇ ಆತ ಮತ್ತೆ ಕೇಳಿದ: "ನೋಡು ಇಲ್ಲೇ ಕೊಟ್ಟರೆ 100 ರೂಪಾಯಿ. ಅಲ್ಲಿ ಕಾಣಿಸುವ ಆಫೀಸ್ ರೂಮ್ ಒಳಗೆ ಹೋದರೆ 250 ರೂಪಾಯಿಗಿಂತ ಒಂದು ಪೈಸೆ ಕಡಿಮೆಯಾಗುವುದಿಲ್ಲ" ಎಂದು ಅಂತಿಮ ಎಚ್ಚರಿಕೆ ಕೊಟ್ಟ. ನಾನದಕ್ಕೆ "ನಿನಗೆ 100 ಕೊಡೋದಾಗಿದ್ರೆ ಅಲ್ಲೇ ಕೊಟ್ಟು ಬಿಡ್ತಿದ್ದೆ. ನೀನೇನು ಮಾಡ್ತೀಯ ಅಂತ ನೋಡೋಕೆ ಇಲ್ಲಿತನಕ ಬಂದಿದ್ದೇನೆ" ಎಂದೆ. ತಪ್ಪು ಮಾಡಿಯೂ ನಾನು ಇಷ್ಟೊಂದು ಹಠಮಾರಿಯಂತೆ ವರ್ತಿಸುತ್ತಿದ್ದುದು ಅವನ ಕೋಪವನ್ನು ಇನ್ನಷ್ಟು ಹೆಚ್ಚಿಸಿತು. ಅರಚಾಡುತ್ತಾ ನನ್ನನ್ನು ಆಫೀಸ್ ರೂಮ್‌ಗೆ ಕರೆದುಕೊಂಡು ಹೋಗಿ, ಆತನ ಸಹೋದ್ಯೋಗಿಗಳಿಗೆಲ್ಲ ನನ್ನ ಟಿಕೆಟ್ ತೋರಿಸುತ್ತಾ "ಈ ಟಿಕೆಟ್ ಇಟ್ಕೊಂಡು ಕರ್ಣಾವತಿಯಲ್ಲಿ ಬಂದಿದ್ದಾನೆ" ಎಂದು ವಿವರಿಸುತ್ತಿದ್ದ. ಅವರೆಲ್ಲ ಹಳಗಿದವರು. ಟಿಕೆಟ್ ನೋಡುತ್ತಿದ್ದಂತೆಯೇ ಎಲ್ಲರೂ ನನ್ನ ಕಡೆ ನೋಡಿ '250 ರೂಪಾಯಿ ಫೈನ್. ಕಟ್ಟಿ ಮನೆಗೆ ಹೋಗು' ಎನ್ನುತ್ತಿದ್ದರು. ನಾನು ಯಾರಿಗೂ ಕೇರ್ ಮಾಡಲಿಲ್ಲ.

ನನ್ನನ್ನು ಕರೆದುಕೊಂಡು ಬಂದ ಟಿಟಿ "ಕೇಸ್ ಬುಕ್ ಮಾಡುತ್ತೇನೆ" ಹೇಳಿ ಎಂದು ಸ್ವಲ್ಪ ದೂರದಲ್ಲಿದ್ದ ಕುರ್ಚಿಯ ಮೇಲೆ ಹೋಗಿ ಕುಳಿತುಕೊಂಡು ಏನೇನೋ ಬರೆಯಲಾರಂಭಿಸಿದ. ನಾನು ಒಳಗಡೆ ಒಂದು ಬೆಂಚ್ ಮೇಲೆ ಕುಳಿತಿದ್ದೆ. ನಾನು ಕುಳಿತಿರುವುದನ್ನು ಆತ ಸಹಿಸಿಕೊಳ್ಳಲಾಗದೆ ನನ್ನನ್ನು ಹತ್ತಿರಕ್ಕೆ ಕರೆದ. ನಾನು ಆತನ ಬಳಿ ಹೋಗಿ ನಿಂತುಕೊಂಡರೆ ಏನನ್ನೂ ಮಾತನಾಡದೇ ತನ್ನ ಪಾಡಿಗೆ ಏನೇನೋ ಬರೆಯುತ್ತಿದ್ದ. ನನ್ನ ಕಡೆ ಒಂದಿಷ್ಟೂ ಗಮನ ಕೊಡದೆ, ನನ್ನನ್ನು ಸುಖಾಸುಮ್ಮನೇ ನಿಲ್ಲಿಸಿಕೊಂಡು ಕಿರಿಕಿರಿ ಮಾಡುವುದಷ್ಟೇ ಅವನ ಉದ್ದೇಶವಾಗಿತ್ತು. ನಾನು ಒಂದಿಷ್ಟು ಹೊತ್ತು ಕಾದು "ನಿಮ್ಮ ಕೆಲಸ ಮುಗಿಸಿ, ನನ್ನ ಅವಶ್ಯಕತೆ ಇದ್ದಾಗ ಕರೆಯಿರಿ ಬರುತ್ತೇನೆ" ಎಂದು ಹೇಳಿ ಮೊದಲಿದ್ದ ಜಾಗಕ್ಕೆ ಹೋಗಿ ಕುಳಿತುಕೊಂಡೆ. ಇದರಿಂದ ಆತನಿಗೆ ಮತ್ತಷ್ಟು ಪಿತ್ತ ನೆತ್ತಿಗೇರಿತು. "ತಪ್ಪು ಮಾಡಿದ್ದೂ ಅಲ್ಲದೆ, ದಂಡವನ್ನೂ ಕಟ್ಟದೇ, ನಮ್ಮ ಆಫೀಸಿಗೆ ಬಂದು ನಮಗೇ ಎದುರಾಡುತ್ತೀಯಾ? ನೀನು ಹೇಳಿದಂತೆ ನಾವು ಕೇಳಬೇಕಾ? ಇದು ನಮ್ಮ ಆಫೀಸು, ನಾನು ಹೇಳಿದಂತೆ ನೀನು ಕೇಳಬೇಕು" ಎಂದು ಅರಚಾಡತೊಡಗಿದ. ಅದಕ್ಕೆ ನಾನು "ಇದು ನಿನ್ನ ಆಫೀಸಲ್ಲ, ಭಾರತೀಯ ರೈಲ್ವೇಯದ್ದು. ಭಾರತೀಯ ರೈಲ್ವೇ ಭಾರತ ಸರ್ಕಾರದ್ದು. ಸರ್ಕಾರ ನಮ್ಮದು, ಹಾಗಾಗಿ ಈ ಆಫೀಸು ನಮ್ಮದು, ನೀನೊಬ್ಬ ಯಕಶ್ಚಿತ್ ನೌಕರ" ಎಂದೆ. ನನ್ನ ಮಾತನ್ನು ಕೇಳಿ ಆತನಿಗೆ ನನ್ನನ್ನು ಕಿತ್ತು ತಿನ್ನಬೇಕೆನ್ನುವಷ್ಟು ಸಿಟ್ಟು ಬರುತ್ತಿತ್ತು. ಅದು ಅವನ ಮುಖದಲ್ಲಿ ಎದ್ದು ಕಾಣುತ್ತಿತ್ತು. ಪಾಪ ಏನೂ ಮಾಡಲಾರದ ಪರಿಸ್ಥಿತಿಯಲ್ಲಿದ್ದ. ಕೊನೆಗೆ ಸಾವರಿಸಿಕೊಂಡು "ಯಾರು ನೀನು? ಏನು ಕೆಲಸ ಮಾಡ್ತೀಯಾ?" ಎಂದು ಕೇಳಿದ. ಅದಕ್ಕೆ ನಾನು "ಆರ್‌ಡಿಎಫ್ ಎಂಬ ಸಂಘಟನೆಯ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯ" ಎಂದು ಹೇಳಿದೆ. ಅದಕ್ಕವನು "ಶಿಕ್ಷೆಯಿಂದ, ದಂಡದಿಂದ ಬಚಾವಾಗುವುದಕ್ಕೆ ಇಂಥ ಸುಳ್ಳು ಹೇಳೋದು ಮಾಮೂಲಿ, ಅಂಥ ದೊಡ್ಡ ವ್ಯಕ್ತಿಯಾಗಿದ್ದರೆ ಜನರಲ್ ಬೋಗಿಯಲ್ಲಿ ಯಾಕೆ ಬರ್ತಾ ಇದ್ದೆ. ಎಸಿ ಕಂಪಾರ್ಟ್‌ಮೆಂಟ್‌ನಲ್ಲಿ ಬರ್ತಿದ್ದೆ" ಎಂದು ಮೂದಲಿಸಿದ. ಆವತ್ತು ನನಗೆ ನಿಜಕ್ಕೂ ಶೀತ, ತಲೆನೋವು, ಜ್ವರ ಬಂದಿತ್ತು. ಈತನೊಂದಿಗೆ ಗುದ್ದಾಡಿ ನನ್ನ ತಲೆನೋವು ಮತ್ತಷ್ಟು ಜಾಸ್ತಿಯಾಗಿತ್ತು. ಆತನಿಗೆ ಇಂಗ್ಲಿಷ್ ಬರುವುದಿಲ್ಲ ಎಂದು ನನಗೆ ಗೊತ್ತಿತ್ತಾದ್ದರಿಂದ ಇಂಗ್ಲಿಷ್ ಮಾತನಾಡಿದರೆ ಜಾಸ್ತಿ ಗೌರವ ಸಿಗುವ ನಮ್ಮ ಭಾರತದ ದುಸ್ಥಿತಿಯನ್ನು ಬಂಡವಾಳ ಮಾಡಿಕೊಂಡು ಅಲ್ಲಿಂದ ಪರಾರಿಯಾಗಲು ಯೋಚಿಸಿ **"See, I am down wit? fever. If you want to drag the process further, please get me admitted to a hospital. If anything happens to me, you will be held responsible"** ಎಂದೆ. ಇಂಗ್ಲಿಷ್ ಮಾತನಾಡಲು ಬಾರದಿದ್ದರೂ ನಾನು ಹೇಳಿದ್ದನ್ನು ಆತ ಅರ್ಥ ಮಾಡಿಕೊಳ್ಳುವಷ್ಟು ಇಂಗ್ಲಿಷಂತೂ ಆತನಿಗೆ ಬರ್ತಿತ್ತು. ನಾನು ಸುಳ್ಳು ಹೇಳುತ್ತಿದ್ದೇನೆ, ನಾಟಕವಾಡುತ್ತಿದ್ದೇನೆ ಎಂದುಕೊಂಡು ತಕ್ಷಣವೇ ಆತ "ಜೈಲಿಗೆ ಹೋಗೋದನ್ನು ತಪ್ಪಿಸಿಕೊಳ್ಳೋದಕ್ಕೆ ಚೆನ್ನಾಗಿದ್ದವರಿಗೂ ಜ್ವರ ಬರುತ್ತೆ" ಎಂದ. ನನಗೂ ಸಹನೆ ಮೀರುತ್ತಿತ್ತು. ನಾನೂ ತಕ್ಷಣವೇ "ನನಗೆ ಮೈಯಲ್ಲಿ ಹುಷಾರಿಲ್ಲ ಎಂಬುದನ್ನು ಖುದ್ದು ಅನುಭವಿಸುತ್ತಿರುವ ನಾನು ಹೇಳಬಲ್ಲೆ, ಅಥವಾ ಡಾಕ್ಟರಿಕೆ ಓದಿದ ಡಾಕ್ಟರ್ ಹೇಳಬಲ್ಲರು. ಟಿ... ಕಲೆಕ್ಟರ್ ಕೆಲಸ ಮಾಡುತ್ತಿರುವ ನೀನು ಹೇಗೆ ಹೇಳ್ತ... ನೀನ್ಯಾವ ಡಾಕ್ಟರಿಕೆ ಓದಿದ್ದೀಯ?" ಎಂದು ಅದನ್ನ... ಜೋರಾಗಿ ಕಿರುಚತೊಡಗಿದೆ. ನಾನು ಇಂಗ್ಲಿಷ್‌ನಲ್ಲೇ ಮ... ಮುಂದುವರೆಸಿದ್ದರಿಂದ ಆತ ಮೊದಲಿಗಿಂತ ಒಂದ... soft ಆಗಿ ವರ್ತಿಸತೊಡಗಿದ.

ವಾಸ್ತವದಲ್ಲಿ ಅವನಿಗೂ ನನ್ನಿಂದ ಮುಕ್ತಿ ಬೇಕ... ಆದರೆ, Ego ಅದಕ್ಕೆ ಅವಕಾಶ ಮಾಡಿಕೊಡುತ್ತಿರ... ಆತ ಕನಿಷ್ಠ ಒಂದು ತಾಸು ಗುದ್ದಾಡಿದ್ದಾನೆ. ಕೊ... ತಪ್ಪು ಮಾಡಿಯೂ ನಾನು ಒಂದು ಪೈಸಾನೂ ಕೊ... ಹಾಗೇ ಹೋದರೆ ಅವನ ಪರಿಸ್ಥಿತಿ ಏನಾಗಬೇಕು? ಅದ... ಆತ ನನ್ನನ್ನು ಬಿಡುವುದಕ್ಕೆ ತಯಾರಿರಲಿಲ್ಲ. "ಸರಿ, ... ಮೇಲೆ ಕೇಸ್ ಬುಕ್ ಮಾಡುತ್ತೇನೆ. ನ್ಯಾಯಾಧೀ... ಎದುರು ನಿಲ್ಲಿಸುತ್ತೇನೆ" ಎಂದು ಹೇಳಿದ. ಅದಕ್ಕೆ ನಾ... "ನಾನೂ ಅದಕ್ಕಾಗಿಯೇ ಕಾಯುತ್ತಿದ್ದೇನೆ. ಬೇಗ ಆ ಕೆ... ಮಾಡು. ನಾನೂ ನ್ಯಾಯಾಧೀಶರಿಗೆ ಒಂದಿಷ್ಟು ವಿಷ... ಹೇಳಬೇಕಿದೆ" ಎಂದೆ. ಅದಕ್ಕವನು "ಏನು ಹೇಳುತ್ತೀಯ..." ಎಂದ. ಅದಕ್ಕೆ ನಾನು "ನೋಡಿ ಸ್ವಾಮಿ. ನಾನು ತ... ಮಾಡಿದ್ದು ನಿಜ. ಅದಕ್ಕೆ 250 ದಂಡ ಕಟ್ಟುವುದಕ್ಕೆ ಸಿದ್ಧನಿದ್ದೆ. ಆದರೆ, ಈ ಟಿಕೆಟ್ ಕಲೆಕ್ಟರ್ ನನ್ನ ಕಣ್ಣೆದುರ... ಟಿಕೆಟ್ ರಹಿತ ಪ್ರಯಾಣಿಕರಿಂದ ತಲಾ 100 ರೂಪಾ... ಲಂಚ ತಿಂದು ಅವರನ್ನೆಲ್ಲಾ ಬಿಟ್ಟುಬಿಟ್ಟ. ನಾನು 2... ರೂಪಾಯಿ ದಂಡ ಕಟ್ಟಿದರೂ ಅದು ಆತನ ಜೇಬ... ಹೋಗುತ್ತಿತ್ತೇ ಹೊರತು ಭಾರತೀಯ ರೈಲ್ವೇ... ಸೇರುತ್ತಿರಲಿಲ್ಲ. ಹಾಗಾಗಿ, ನೇರವಾಗಿ ನ್ಯಾಯಾಲಯ... ಬಂದು ತಮ್ಮ ಎದುರೇ ದಂಡ ಕಟ್ಟೋಣ ಎಂದುಕೊಂ... ಇಲ್ಲಿಯವರೆಗೆ ಬಂದೆ ಎಂದು ಹೇಳುತ್ತೇನೆ" ಎಂದೆ. ನ... ಮಾತನ್ನು ಕೇಳಿ ಒಂದುಕ್ಷಣ ಆತ ತಬ್ಬಿಬ್ಬಾಗಿ "ನೀ... ಇದನ್ನೆಲ್ಲಾ ಹೇಳ್ತಿಯಾ?" ಎಂದು ಆಶ್ಚರ್ಯದಿಂದ ಕೇಳಿ... ಅದಕ್ಕೆ ನಾನು "ಮತ್ತೆ ಇಷ್ಟು ಹೊತ್ತು ನಿನ್ನ ಜೊ... ಕಾಲಹರಣ ಮಾಡೋಕೆ ನನಗೆ ಹುಚ್ಚು ನಾ... ಕಡಿದಿದೆಯಾ?" ಎಂದು ಖಾರವಾಗಿ ಉತ್ತರಿಸುತ್ತಾ ನ... ಟ್ರಾಲಿಬ್ಯಾಗ್ ಎತ್ತಿಕೊಂಡು ಅದರೊಳಗಿನಿಂದ ಹೊಸದಾ... ಖರೀದಿಸಿದ್ದ ಲ್ಯಾಪ್‌ಟಾಪ್ ತೆಗೆದು ಆನ್ ಮಾಡಿ... ಆಗಿನ್ನೂ ಲ್ಯಾಪ್‌ಟಾಪ್ ಜನಸಾಮಾನ್ಯರ ಬಳಕೆಯ... ವಸ್ತುವಾಗಿರಲಿಲ್ಲ. ಅದನ್ನು ಇಟ್ಟುಕೊಳ್ಳುವುದೇ ಒಂ... ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ನಾನು ಇಂಗ್ಲಿ... ಮಾತನಾಡುತ್ತಿದ್ದುದು, ಲ್ಯಾಪ್‌ಟಾಪ್ ಬಳಸುತ್ತಿದ್ದು... ನೋಡಿ ಆತ ಮತ್ತಷ್ಟು ತಬ್ಬಿಬ್ಬಾಗಿ ತಕ್ಷಣವೇ ಹಿಂದ... ಮುಂದು ನೋಡದೇ "ಮೊದಲು ಇದನ್ನು ಬಂ... ಮಾಡಿ ಇಲ್ಲಿಂದ ಹೊರಟು ಹೋಗು" ಎಂದ. ಆ... ನನ್ನೆದುರು ಅಂತಿಮವಾಗಿ ಬಗ್ಗಿದ್ದನ್ನು ಕಂಡು ಒಳಗೊಳ... ಖುಷಿಯಾದ ನಾನು ಆತನನ್ನು ಇನ್ನೊಂದಿಷ್ಟು ಬಗ್ಗಿಸು... ದಕ್ಕಾಗಿ "ಈಗ ತಾನೇ ಲ್ಯಾಪ್‌ಟಾಪ್ ಆನ್ ಮಾಡಿದ್ದೇ... ವಿಂಡೋಸ್ ಲೋಡ್ ಆಗಲಿಕ್ಕೆ ಕನಿಷ್ಠ ಐದು ನಿಮಿ... ಬೇಕು. ಆಮೇಲೆ ತಕ್ಷಣ ಆಫ್ ಮಾಡಿದರೆ ಶಟ್‌ಡೌನ್ ಆಗುವುದಕ್ಕೆ ಮತ್ತೆ ಐದು ನಿಮಿಷ ಬೇಕು. ಹೀಗಾ... ನೀನು ಈಗಲೇ ಹೋಗು ಎಂದರೂ ನಾನು ಇನ್ನು... ಹತ್ತು ನಿಮಿಷ ಇಲ್ಲಿಂದ ಹೊರಡಲಾಗುವುದಿಲ್ಲ" ಎಂದೆ... ನಾನು ಲ್ಯಾಪ್‌ಟಾಪ್ ಪ್ಯಾಕ್ ಮಾಡುವ ತನಕ ಆತ ನ... ಪಕ್ಕದಲ್ಲಿ ಒಂದೂ ಮಾತನಾಡದೇ ಕುಳಿತಿದ್ದ.

ಎಲ್ಲಾ ಪ್ಯಾಕ್ ಮಾಡಿ, ಬ್ಯಾಗ್ ಎತ್ತಿಕೊಂಡು ಇನ್ನೇನ... ಹೊರಡಬೇಕೆನ್ನುವಷ್ಟರಲ್ಲಿ ಆತ "ನೋಡು, ನಾನೇನು ತಪ್ಪು ಮಾಡಿಲ್ಲ ಎಂದು ಕಳೆದ ಒಂದು ಗಂಟೆಯಿಂ... ವಾದಿಸುತ್ತಿದ್ದೀಯ. ತಪ್ಪು ಮಾಡಿಯೂ ಒಂದು ಪೈಸ... ಕೊಡದೆ ಈಗ ವಾಪಾಸ್ ಹೋಗ್ತಿದ್ದೀಯ. ಕನಿ... ಹೋಗುವ ಮುನ್ನ ನೀನು ಮಾಡಿದ್ದು ತಪ್ಪು ಎಂದ... ಒಪ್ಪಿಕೊಂಡು ಹೋಗು" ಎಂದು ಹತಾಶೆಯಿಂದ ಕೇಳಿದ... ಅದಕ್ಕೆ ನಾನು "ಆಯಿತು, ನಾನು ತಪ್ಪು ಮಾಡಿದ್ದೇನೆಂದ... ಒಪ್ಪಿಕೊಳ್ಳುತ್ತೇನೆ. ಕೇವಲ ನಿನ್ನ ಎದುರು ಮಾತ್ರವ... ನಿನ್ನ ಸಹೋದ್ಯೋಗಿಗಳ ಎದುರೂ ಒಪ್ಪಿಕೊಳ್ಳುತ್ತೇನ... ಆದರೆ, ನೀನು ಟ್ರೇನಿನಲ್ಲಿ ಎಲ್ಲರಿಂದ ಕನಿಷ್ಠ ಒಂದು ಸಾವಿರ ರೂಪಾಯಿ ಲಂಚ ತಿಂದಿರುವೆಯಲ್ಲ, ಅದು ನಾನು ಮಾಡಿದ ತಪ್ಪಿಗಿಂತ ಎಷ್ಟೋ ಪಟ್ಟು ದೊಡ್ಡ ತಪ್ಪು ಎಂದು ನೀನೂ ಒಪ್ಪಿಕೊ. ನಿನ್ನ ಸಹೋದ್ಯೋಗಿಗ... ಎದುರು ನಾಚಿಕೆಯಾದರೆ, ಕನಿಷ್ಠ ನನ್ನೆದುರಾದರೂ ಒಪ್ಪಿಕೊ... ಎಂದೆ. ಅದಕ್ಕೆ ಆತ "ಮಾರಾಯ ಮೊದಲು ನೀನಿಲ್ಲಿಂದ ಹೊರಡು" ಎಂದಷ್ಟೇ ಹೇಳಿ ನನ್ನನ್ನು ಅಲ್ಲೇ ಬಿಟ್ಟು ಹೊರಟುಹೋದ.

ಆತ ಹೋಗುತ್ತಿದ್ದಂತೆಯೇ ಬ್ಯಾಗ್ ಎತ್ತಿಕೊಂಡು ಅಲ್ಲಿಂದ ಕಾಲ್ಕಿತ್ತೆ. ನಾನು ಮುಂಬೈ ಸೆಂಟ್ರಲ್ ಸ್ಟೇಷನ್‌ನಿಂದ ಮರಳಿ ದಾದರ್ ಸ್ಟೇಷನ್ ಕಡೆ ಲೋಕಲ್ ಟ್ರೇನ್‌ನಲ್ಲಿ ಬರಬೇಕಿತ್ತು. ನನ್ನಲ್ಲಿದ್ದ ಹಳೆಯ ಟಿಕೆಟ್ ಅನ್ನು ಆತ ನನಗೆ ಮರಳಿ ಕೊಟ್ಟಿರಲಿಲ್ಲ. ಹೇಗೂ ಆತನೊಂದಿಗೆ ಕನಿಷ್ಠ ಒಂದು ಗಂಟೆ ಗುದ್ದಾಡಿ ಗೆದ್ದ ಹುಮ್ಮಸ್ಸಿನಲ್ಲಿದ್ದದರಿಂದ ಲೋಕಲ್ ಟಿಕೆಟ್ ಪಡೆದುಕೊಳ್ಳದೇ ಟ್ರೇನ್ ಹತ್ತಿದೆ. ದಾದರ್‌ನಲ್ಲಿ ಬಂದು ಇಳಿಯುತ್ತಿದ್ದಂತೆಯೇ ಅಲ್ಲಿ ಲೋಕಲ್ ಟ್ರೇನ್ ಟಿಕೆಟ್ ಕಲೆಕ್ಟರ್‌ಗಳು ನನ್ನನ್ನು ಹಿಡಿದುಕೊಂಡುಬಿಟ್ಟರು. ಹಿಂದುಮುಂದು ನೋಡದೇ ಬಾಯ್ಮುಚ್ಚಿಕೊಂಡು 250 ರೂಪಾಯಿ ದಂಡ ಕಟ್ಟಿ ಮನೆಗೆ ಬಂದೆ...


ಪಿ. ಪೀರ್‌ಬಾಷ

ಳ್ಳಾರಿ ಜಿಲ್ಲೆಯ ಹಡಗಲಿಯವರಾದ ಪೀರ್‌ಬಾಷ ಪಿ. ಈವರೆಗೆ ಅವರು ನಾಲ್ಕು ಪುಸ್ತಕಗಳನ್ನು ಸ್ತಾರೆ. 'ದೇವಬಂತು ಪಾದಿಗೆ' (1992) ಹಾಗೂ ಣಕೋನಗಳ ನಡುವೆ' (2000) ಅವರ ಕವನ ಗಳು. 'ಉರಿಯ ಬೆಳಕು ಬಂಗಾಳ' (2005) ಕಥನವಾದರೆ, 'ಸಮಾಜವಾದಿ ಹೋರಾಟಗಾರರ ನೆನಪು (2007) ಹೆಸರೇ ಸೂಚಿಸುವಂತೆ ಸಂದರ್ಶನ . ಮೊದಲ ಎರಡು ಕೃತಿಗಳು ಪೀರ್ ಅವರ ಪ್ರವೃತ್ತಿಯ ಸೂಚಕ ವಾಗಿವೆ. ಕೊನೆಯ ಕಾಲಲ್ಲಿ ಚಕ್ರ ಕಟ್ಟಿಕೊಂಡು ತಿರುಗಾಡುವ ಪ್ರಯಾಸದಿಂದ ಹುಟ್ಟಿದವು. ಆದರೆ ಈ ಎಲ್ಲವೂ ರಾಜಕೀಯ ಚಟುವಟಿಕೆ, ಸೈದ್ಧಾಂತಿಕ ಬದ್ಧತೆ ಆಕ್ಟಿವಿಸಮ್‌ಗಳ ಭಾಗವಾಗಿಯೇ ಇವೆ. ಗಳಲ್ಲಿ ಭಾಗವಹಿಸುವಿಕೆಗೆ ಮ ತವಕಿಸುವ ಮತ್ತು ಕೊಳ್ಳುವ ಲೇಖಕರು ತಿಮಾರಿನಲ್ಲಿ ಕಡಿಮೆ.

ಸಾಮಾಜಿಕ ಕಾರ್ಯಕರ್ತ ನ ಪೀರ್, 80ರ ದಶಕದ ಗಗಳು ಕ್ಷೀಣವಾಗುವ ಲ್ಲಿ ಬರೆಯಲಾರಂಭಿಸಿ ಜ ಹೊತ್ತಿಗಾಗಲೇ, ನಾನಾ ರಿಂದ ಹೊಳಪು ಕಳೆದು ನ್ನ 'ಖಡ್ಗವಾಗಲಿ ಕಾವ್ಯ ಶೋಷಿಗೆ ಮಿಡಿವ ಪ್ರಾಣ ಆಶಯವನ್ನು ಅವರು ಪ್ಪಾಗಿ ಸ್ವೀಕರಿಸಿದವರು. ಪಕ್ಷಿಯಾಗಿ ಇಲ್ಲಿನ ಕೆಲವು ಲ್ಲಿ ಕಾಣುವ ದರ್ಗಾ ಮತ್ತು ಬ್ಬುನವರ ಪ್ರಭಾವಗಳಿವೆ. ಎರಡನೇ ಸಂಕಲನಕ್ಕೆ ರಾದ ರಂಜಾನ್ ದರ್ಗಾ ಎಸ್.ಎಸ್. ಹಿರೇಮಠ ಮುನ್ನುಡಿ ಮತ್ತು ಹಿನ್ನುಡಿ ವುದೂ ಗಮನಾರ್ಹ.

ಸು ಕ್ರಿಯೆಯ ಭಾಗವಾಗಿ ಕಾವ್ಯವನ್ನು ಬರೆಯುವ ಬರೆದ ಕಾವ್ಯ ರಾಜಕೀಯ ಆಶಯವನ್ನು ಾಳಿಸಬೇಕೆಂಬ ಅವರ ತುಯ್ತವು, ಮೊದಲನೇ ವಲ್ಲಿ ಒರಟೊರಟಾಗಿ ಪ್ರಕಟವಾಗಿದೆ. ಆದರೆ ಸಂಕಲನವು, ವಾಸ್ತವಕ್ಕೆ ಡಿಕ್ಕಿಹೊಡೆದು ಕೆಲವು ಮತ್ತು ಅತಿಉತ್ಸಾಹಗಳನ್ನು ಕಳೆದುಕೊಂಡು, ದ ವೈರುಧ್ಯಗಳನ್ನು ಧೇನಿಸುತ್ತ ಹುಟ್ಟಿದೆ. 'ಸಮತೆ ಸಾರುವ ಗಿಡಕೆ ಬೇರುಗಳೇ ನಾವಾಗಿ ದಾ ತುಂಬ ಹಸಿರವಾಗುವ' ಎಂದು ಕ್ರಾಂತಿಯ ಗಳನ್ನು ಸರಳ ಉಮೇದಿನಲ್ಲಿ ಬರೆಯುವ ಕವನಗಳಿವೆ; "ನನಗೆ 'ಗುಲಾಬಿ ಹೂಗಳ ಂತು ಬರೆಯಲು ಸಾಧ್ಯವಾದರೆ ನಾನು ಖಂಡಿತ ಸುತ್ತೇನೆ. ಗುಲಾಬಿ ನಮ್ಮ ಕನಸು. ಜಾಲಿ ವಾಲು" ಎಂಬ ಸಂಕಲ್ಪಗಳಿವೆ. ಸಾಮಾಜಿಕ ರ್ತರಾಗಿರುವ ಲೇಖಕರಲ್ಲಿ ಈ ಬಗೆಯ ಕರೆಗೊಡುವ ಧಾಟಿ, ಜವಾಬ್ದಾರಿ ನಿಭಾಯಿಸುವ ವೀರ ನಿಷ್ಠೆಗಳು ಸಹಜ ಎಂದು ಕಾಣುತ್ತದೆ. ಆದರೂ ಭಾವಾವೇಶ ಮತ್ತು ಅತಿಭಾರದ ಹೊಣೆಗಾರಿಕೆ ಭಾವಗಳು ಕಡಿಮೆಯಾಗಿ, ವಿಷಾದವೂ ವೇದನೆಯೂ ಚಿಂತನೆಯೂ ಎರಡನೇ ಸಂಕಲನದಲ್ಲಿ ಮಡುಗಟ್ಟಿಕೊಂಡುವು. ಈ ಕಾರಣಕ್ಕೆ ಇಲ್ಲಿನ ಕಾವ್ಯ ಹೆಚ್ಚು ಮೆಚ್ಯೂರ್ಡ್ ಕೂಡ ಆಗಿದೆ. ಭಾಷೆಯ ಬಳಸುವಿಕೆ ಮತ್ತು ಕವಿತೆ ರಚಿಸುವ ವಿಷಯದಲ್ಲಿ ಕವಿಗೆ ರೂಪದ ಮೇಲೆ ನಿಯಂತ್ರಣ ಸಾಧ್ಯವಾಗಿದೆ. ಇದನ್ನು 'ಪುಟ್ಟಪೆಟ್ಟಿಗೆ ನೆನಪು' ತರಹದ ಸರಳವೂ ಹೃದ್ಯವೂ ಆದ ಕವನದಲ್ಲಿ ನೋಡಬಹುದು. ಸಮುದಾಯ ಬದ್ಧತೆ ಮತ್ತು ಮಾನವತಾವಾದ ಪೀರ್ ಕಾವ್ಯದ ಲಕ್ಷಣ.

ಪೀರ್ ಕವಿತೆ ಬರೆಯುವುದಷ್ಟೇ ಅಲ್ಲ; ಗೋಷ್ಠಿಗಳಲ್ಲಿ ಅದನ್ನು ಚೆನ್ನಾಗಿ ಸಂವಹನವಾಗುವಂತೆ ವಾಚನ ಕೂಡ ಮಾಡುತ್ತಾರೆ. ಸಭೆಗಳಲ್ಲಿ ಸ್ಪಷ್ಟವಾಗಿ ಪರಿಣಾಮಕಾರಿಯಾಗಿ ಮಾತಾಡುವ ವಾಗ್ಮಿಯತೆ ಅವರಿಗೆ ಚಳವಳಿಗಳಿಂದ ಬಂದ ಕಲೆಯಿದ್ದೀತು; ತಾರ್ಕಿಕತೆ, ತಾತ್ವಿಕ ಖಚಿತತೆ ಮತ್ತು ನೇರತನ ಪೀರ್ ಅವರ ಮಾತು ಮತ್ತು ಬರೆಹದ ವಿಶಿಷ್ಟತೆ. ಇವು ಗದ್ಯಕ್ಕೂ ಚಳವಳಿಯ ಕ್ರಿಯಾಶೀಲತೆಗೂ ಅಗತ್ಯವೇ. ಆದರೆ ಕಾವ್ಯಕ್ಕೆ? ಕಾವ್ಯವು ವಿಚಾರ ಅವಿಚಾರಗಳ ಆಚೆಗಿನ ಭಾಷೆಯಲ್ಲೂ ಕೂಡ ಹುಟ್ಟುವಂತಹುದು. ಹೀಗಾಗಿ ತಾರ್ಕಿಕತೆ ಮತ್ತು ಅತಿಸ್ಪಷ್ಟತೆಗಳನ್ನು ಮೀರಿದ ನೆಲೆಯಲ್ಲಿ ಬರೆಹ ಮತ್ತು ಚಿಂತನೆಯನ್ನು ಕೊಂಡೊಯ್ಯಲು ಅವರಿಗೆ ತೊಡಕಾಗಿದೆ ಎಂದು ಅನಿಸುತ್ತದೆ. ಅವರ ಗದ್ಯಕ್ಕೆ ಈ ತೊಡಕನ್ನು ಮೀರುವುದಾಗಿಲ್ಲ. ಆದರೆ ಬಾಳಿನ ವೈರುಧ್ಯಗಳನ್ನು ಧೇನಿಸುವ ಚಿಂತನಶೀಲ ಕವಿತೆಗಳಾದ 'ತ್ರಿಕೋನದ ನಡುವೆ' 'ದೇವರೆಲ್ಲ ಮನುಷ್ಯರಾದ ದಿನ' 'ಅಮೇಜಾನಿನ ಹಾಗೆ' 'ರಾಮರಾಮ! ನೀನು ಮರವಾಗು' 'ಮಾ ನಿಷಾಧ' ಮುಂತಾದ ಇಲ್ಲಿನ ಶ್ರೇಷ್ಠ ಕವನಗಳಲ್ಲಿ ಈ ಮೀರುವಿಕೆ ಸಾಧ್ಯವಾಗಿದೆ.




ಕರ್ನಾಟಕದಲ್ಲಿ ಒಂದು ಕಾಲಕ್ಕೆ ರಾಜಕಾರಣವನ್ನು ತಮ್ಮ ಬದ್ಧತೆ ಮತ್ತು ಆಕ್ಟಿವಿಸಂಗಳಿಂದ ಆವರಿಸಿಕೊಂಡಿದ್ದ ಸಮಾಜವಾದಿಗಳು, ನಂತರ ನಾನಾ ಕಾರಣಗಳಿಂದ ಅಜ್ಞಾತವಾಸಕ್ಕೆ ಸರಿದರು. ಪೀರ್ ಅಂತಹವರನ್ನೆಲ್ಲ ಹುಡುಕಿ ಸಂದರ್ಶನ ಮಾಡಿ ಪ್ರಕಟಿಸಿದ ಸಂಪುಟವು ಕರ್ನಾಟಕದ ಚಳವಳಿಗಳ ಚರಿತ್ರೆಯ ದೃಷ್ಟಿಯಿಂದ ಮುಖ್ಯವಾಗಿದೆ. ಇದಕ್ಕಾಗಿ ಪೀರ್ ಮುಂಬೈ ಅಂಕೋಲೆ ಬೀದರ ಎಂದೆಲ್ಲ ಸುತ್ತಾಟ ಮಾಡಿದ್ದಾರೆ. ಇಲ್ಲಿ ಬಹಳಷ್ಟು ಚಳವಳಿಗಾರರಿಗೆ ಸಹಿತ ಅಪರಿಚಿತರಾಗಿರುವ ಪೊನ್ನಮ್ಮಾಳ್, ಕೆ.ಎಸ್.ಕಾರಂತ ಮುಂತಾದವರ ಸಂದರ್ಶನಗಳಿವೆ. ಇಲ್ಲಿ ಎರಡು ತಲೆಮಾರಿನ ನಡುವಣ ತಾತ್ವಿಕ ನೋಟಗಳ ಭಿನ್ನತೆ ಮತ್ತು ಈ ಕಾರಣದಿಂದಲೇ ಹುಟ್ಟಿರುವ ಚಕಮಕಿಗಳನ್ನು ಕಾಣಬಹುದು. ಕಮ್ಯುನಿಸ್ಟ್ ಗರಡಿಯಲ್ಲಿ ಪಳಗಿರುವ ಸಂದರ್ಶಕನು, ಕಮ್ಯುನಿಸ್ಟರನ್ನು ತೀವ್ರ ಟೀಕಿಸುತ್ತಿದ್ದ ಲೋಹಿಯಾವಾದಿಗಳ ಜತೆ ಮಾತಾಡಿರುವುದರಿಂದ ಇಲ್ಲೊಂದು ಬಗೆಯ ಸೈದ್ಧಾಂತಿಕ ಚಕಮಕಿ ಏರ್ಪಟ್ಟಿದೆ. ಆದರೆ ಕೆಲವು ಕಡೆ ಸಂದರ್ಶಕನ ವಯೋಸಹಜ ಕೆಚ್ಚಿನಿಂದಲೊ ಸಿದ್ಧಾಂತದ ಹಮ್ಮಿನಿಂದಲೊ ಮಾತುಕತೆ ವಿಚಾರಣೆಯ ಸ್ವರೂಪವನ್ನೂ ಪಡೆದುಕೊಂಡಿದೆ. ಆದರೂ ಈ ಹಿರಿಯ ಜೀವಗಳು ನಾಡನ್ನು ಕಟ್ಟಲು ತಮ್ಮ ಬದುಕನ್ನೇ ತೇದಿವೆ ಎಂಬ ಗೌರವ, ಇವರ ಚಿಂತನೆಗಳು ಔಟ್‌ಡೇಟೆಡ್ ಆಗಿವೆ ಎಂಬ ನಿರಾಸೆ, ಈಗ ಅವರಿರುವ ಅಸಹಾಯಕ ಸ್ಥಿತಿಯ ಬಗ್ಗೆ ಕಳಕಳಿ ಇವೆಲ್ಲವೂ ಬ್ಲೆಂಡ್ ಆಗಿದ್ದು ಸಂದರ್ಶನಗಳು ಮಹತ್ವದ ಸಾಂಸ್ಕೃತಿಕ ದಾಖಲೆಗಳಾಗಿವೆ. ಅಜ್ಜನನ್ನು ಪ್ರೀತಿಸುವ ಆದರೆ ತಾತ್ವಿಕವಾಗಿ ಒಪ್ಪದ ಮೊಮ್ಮಗನ ಜಗಳಗಳಂತಿವೆ. ಪೀರ್ ಇದಕ್ಕೆ ಬರೆದಿರುವ ಸುದೀರ್ಘ ಪ್ರಸ್ತಾವನೆಯು ಅವರ ಅಧ್ಯಯನಶೀಲತೆ, ಸೈದ್ಧಾಂತಿಕ ಸ್ಪಷ್ಟತೆ ಹಾಗೂ ಚಿಂತನಶೀಲತೆಯ ದ್ಯೋತಕವಾಗಿದೆ.

ಸಾಹಿತ್ಯ ಅಕೆಡಮಿ ಯುವ ಲೇಖಕರಿಗಾಗಿ ಪ್ರವಾಸ ಕಳಿಸುವ ಯೋಜನೆಯಲ್ಲಿ ಕೊಲ್ಕತೆಗೆ ಹೋಗಿ ಬರೆದ ಪ್ರವಾಸಕಥನ. ಪೀರ್‌ನ ಆಯ್ಕೆ ಬಂಗಾಳವಾಗಿರುವುದಕ್ಕೆ ಕಾರಣ ತನಗೆ ತಾನೇ ಸ್ಪಷ್ಟವಾಗಿದೆ. ಎಡಸಿದ್ಧಾಂತವು ರಾಜಕೀಯ ಪ್ರಯೋಗಕ್ಕೆ ಒಳಪಟ್ಟಿರುವ ರಾಜ್ಯಕ್ಕೆ ಹೋಗುವಾಗ ಸಹಜವಾಗಿ ಇದ್ದ ಭಾವನಾತ್ಮಕ ಉತ್ಸಾಹ, ಅಲ್ಲಿನ ವಾಸ್ತವವನ್ನು ಕಣ್ಣಾರೆ ಕಂಡಾಗ ಸಾಕಷ್ಟು ಕಡಿಮೆಯಾಗಿದೆ. ಆದರೂ ಆಳದಲ್ಲಿ ಬಂಗಾಳದ ರಾಜಕಾರಣದ ಬಗ್ಗೆ ಡಿಫೆನ್ಸಿವ್ ಆಗಿರುವುದೇ ಅಲ್ಲಿನ ನೋಟಗಳಿಗೆ ಮಿತಿಯನ್ನೂ ತಂದುಕೊಟ್ಟಿದೆ. ಇದರಲ್ಲಿ ಬಂಗಾಳದ ಲೇಖಕರು, ಬುದ್ಧಿಜೀವಿಗಳ ಸಂದರ್ಶನಗಳಿವೆ. ಆದರೆ ಅತ್ಯುತ್ತಮ ಭಾಗಗಳು ಕೊಲ್ಕತೆಯ ಬೀದಿ ಬದುಕಿನ ಚಿತ್ರಗಳೇ. ಇಲ್ಲಿನ ಉಜ್ವಲವಾದ ಭಾಗವೆಂದರೆ, ಪುಸ್ತಕ ಮೇಳಕ್ಕೆ ಬೆಂಕಿ ಬೀಳುವ ಪ್ರಸಂಗ. ಗದ್ಯವನ್ನೂ ಪದ್ಯದಂತೆ ಧ್ವನಿಪೂರ್ಣವಾಗಿ ಬಳಸಿರುವ ಪೀರ್, ಅನೇಕ ಒಳನೋಟಗಳನ್ನು ಇಲ್ಲಿ ಚೆಲ್ಲಿದ್ದಾರೆ. ಆದರೂ ಈ ಕಥನ ಅವರ ಕಾವ್ಯದಷ್ಟು ದೊಡ್ಡ ಸಾಧನೆ ಮಾಡಿದೆ ಅನಿಸುವುದಿಲ್ಲ.

"ನನ್ನನ್ನು ಹನಿಯಾಗಿ ಹೊತ್ತು ಹರಿದಿದ್ದ 'ಸಾವಿರಾರು ನದಿ'ಗಳೆಲ್ಲ ಈ ಹೊತ್ತು ಕೋಮುವಾದದ ಕಾವಿಗೆ ಬತ್ತಿ ಕೆರೆಯಂಗಳವಾದವು" ಎಂದು ಪೀರ್ ಒಂದೆಡೆ ನೋವುಣ್ಣುವುದುಂಟು. ಹಿರಿಯ ಲೇಖಕರು ವ್ಯವಸ್ಥೆಯ ಹೊಟ್ಟೆಯಲ್ಲಿ ಕರಗಿಹೋಗುತ್ತಿರುವ, ಇಂಟಗ್ರಿಟಿ ಕಳೆದುಕೊಳ್ಳುತ್ತಿರುವ ಬಗ್ಗೆ ಆಕ್ರೋಶವಿದೆ; ಚಳವಳಿಗಳು ಇಲ್ಲದಿರುವುದೇ ಹೊಸತಲೆಮಾರಿನ ಲೇಖಕರ ಅನೇಕ ತಾತ್ವಿಕ ಮತ್ತು ಬರೆಹದ ಬಿಕ್ಕಟ್ಟುಗಳಿಗೆ ಕಾರಣವೆಂದು ಕೂಡ ಅವರು ನಂಬಿದ್ದಾರೆ; ಆದ್ರೆ ಈ 'ಶೂನ್ಯಸ್ಥಿತಿ'ಯೇ ಹೊಸತಲೆಮಾರಿನ ಲೇಖಕರಿಗೆ ಚರಿತ್ರೆ ಒಡ್ಡಿರುವ ಆಹ್ವಾನ ಎಂದು ಪರಿಭಾವಿಸತೊಡಗಿದರೆ, ಈ ತಬ್ಬಲಿಭಾವ ಕಡಿಮೆಯಾದೀತೊ ಏನೊ?

ದಿ. ಎಸ್.ಎಸ್. ಹಿರೇಮಠ ಅವರು ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ತರುಣರನ್ನು ಕಮ್ಯುನಿಸ್ಟ್ ಚಿಂತನೆಯೊಳಗೆ ರೂಪಿಸಿದರು; ಅವರಿಗೆ ಕವಿತೆ ಬರೆಯುವುದಕ್ಕೂ ಪ್ರೇರೇಪಿಸಿದರು. ಅವರು ಬರೆದಿದ್ದನ್ನು ಪ್ರಕಟಿಸಿದರು. ಸಾರ್ವಜನಿಕ ಪ್ರಾಮುಖ್ಯತೆ ಇರುವ ಇಶ್ಯೂಗಳಿಗಾಗಿ ಬೀದಿಗಿಳಿಯುವ ಸೈದ್ಧಾಂತಿಕ ಸ್ಪಷ್ಟತೆ ಮತ್ತು ಕ್ರಿಯಾಶೀಲತೆ ಇರುವ ಒಂದು ಪಡೆಯನ್ನೂ ಕಟ್ಟಿದರು. ಈ ಪಡೆಯ ಸೈನಿಕರಲ್ಲಿ ಪೀರ್ ಒಬ್ಬರು. ಹೀಗೆ ಎಡಪಂಥೀಯ ಚಳವಳಿಯನ್ನು ಈ ಭಾಗದಲ್ಲಿ ಕಟ್ಟಿದ ಹಿರೇಮಠ, ಪೀರ್ ಮುಂತಾದ ಕವಿಗಳು, ನಂತರದ ದಿನಗಳಲ್ಲಿ ಕಮ್ಯುನಿಸ್ಟ್ ಪಕ್ಷ ರಾಜಕಾರಣದಿಂದ ದೂರಸರಿದಿದ್ದು, ಇದು ಪಕ್ಷ ರಾಜಕೀಯದ ಚೌಕಟ್ಟನ್ನು ಮೀರಿ ಹೋಗಿ ಸ್ವತಂತ್ರ ಚಿಂತನೆ ಮಾಡುವ ಮತ್ತು ಭಿನ್ನಮತವನ್ನು ನಿಷ್ಠುರವಾಗಿ ಹೇಳುವ ಲೇಖಕರ ಪಾಡಿನ ಪರಿಣಾಮವೂ ಇದ್ದೀತು. ಹಿರೇಮಠರ ಗರಡಿಯಲ್ಲಿ ಪಳಗಿದ ಪೀರ್‌ಗೆ ಪ್ರಶ್ನೆಮಾಡುವ, ಭಿನ್ನಮತ ಮಂಡಿಸುವ, ಪ್ರತಿಭಟಿಸುವ ಗುಣಗಳು ಸಹಜವಾಗೇ ಇವೆ. ಪೀರ್ ಮತ್ತು ಅವರ ಸಂಗಾತಿಗಳು ತಮ್ಮ ಈ ಬಂಡುಕೋರತನದಿಂದಲೂ ನೈತಿಕ ವ್ಯಕ್ತಿತ್ವದಿಂದಲೂ, ಭಾಷಣ, ಕಾವ್ಯ ಪುಸ್ತಕ ಪ್ರಕಟಣೆಗಳಿಂದಲೂ ಹಡಗಲಿಯನ್ನು ಜೀವಂತ ಇಟ್ಟಿರುವರು. ಕೋಮುವಾದ ಮತ್ತು ಮೂಲಭೂತವಾದಗಳ ಬಗ್ಗೆ ಖಚಿತ ವಿರೋಧವನ್ನು ಹೊಂದಿರುವರು. ಮಸೀದಿಯ ಮೀನಾರುಗಳಿಗೆ ಪ್ರಶ್ನೆ ಕೇಳುವ ಕವನವು ಬಹಳ ಅರ್ಥಪೂರ್ಣವಾಗಿದೆ. ಆದರೆ ಈ ಧಾರ್ಮಿಕ ಯಜಮಾನಿಕೆ ವಿರುದ್ಧ ಕಾವ್ಯ ತೋರುವ ಪ್ರತಿರೋಧಕ್ಕೆ ಹೋಲಿಸಿದರೆ, ಸಮುದಾಯಗಳ ದೈನಿಕ ಬದುಕಿನ ಭಾಗವಾಗಿರುವ ಸಾಂಸ್ಕೃತಿಕ ಲೋಕಗಳು ಇಲ್ಲದಿರುವುದು ಪೀರ್ ಬರೆಹದ ಕೊರತೆ ಅನಿಸುತ್ತದೆ. ಪ್ರವಾಸ ಕಥನದಲ್ಲಿ ಈ ಕೊರತೆ ನೀಗಿರುವುದನ್ನು ಕಂಡರೆ, ಕಾವ್ಯಪ್ರಕಾರಕ್ಕೇ ಈ ವಿಷಯದಲ್ಲಿ ಮಿತಿಗಳಿವೆಯೊ? ಆದರೂ ಪ್ರೀತಿಸಲು ಸಮುದಾಯಗಳ ಮೂರ್ತ ಬದುಕೇ ಕಾಣದೆ, ವಿರೋಧಿಸಲು ಬರೀ ಹಗೆಗಳೇ ಕಾಣುವ ಈ ಸ್ಥಿತಿಯ ಬಗ್ಗೆ, ಜನರ ಬದುಕಿನ ನಿತ್ಯವಿವರಗಳಿಗೆ ಹೋದರೆ ಧರ್ಮದ ಹುದುಲಲ್ಲಿ ಸಿಕ್ಕುವ ಆತಂಕವುಳ್ಳ ವೈಚಾರಿಕತೆ ಬಗ್ಗೆ ನಮ್ಮ ಲೇಖಕರು ಮರುಚಿಂತಿಸಬೇಕಿದೆ.



ನಾಮಧೇಯ



'ಮತ್ತೆ ಮತ್ತೆ ಬ್ರೆಕ್ಟ್' ಪುಸ್ತಕದಿಂದ
ಮೂಲ : ಬರ್ಟೋಲ್ಟ್ ಬ್ರೆಕ್ಟ್
ಕನ್ನಡಕ್ಕೆ : ಯು.ಆರ್. ಅನಂತಮೂರ್ತಿ

ಗೆ ಸ್ಟೇಷನ್ನಿನಲ್ಲೇ ಬೈ ಹೇಳಿ
ಕಪಿದ ಸಮುಕಿನಲ್ಲಿ
ಂದು ಬಂದು ಸಿಟಿಯೊಳಗೆ
ಗುಂಡಿ ಹಾಕಿಕೊ
ಮೊಂದನ್ನು ತಗೋ

ಮನೇ ಬಂದು ಬಾಗಿಲು ತಟ್ಟಿದರೂ

ಬಾಗಿಲು ತೆಗೀಬೇಡ


ಉಣ್ಣಲು ಸಿಕ್ಕಾಗ ಸಿಕ್ಕಿದನ್ನು ಹೊಟ್ಟೆ ತುಂಬಾ ತಿಂದು
ಬಿಡು
ಹಸಿದಿರಬೇಡ
ಅಕಸ್ಮಾತ್ ಮಳೆ ಬಂತೊ, ಯಾರ ಮನೆಯೊಳಗಾದರೂ
ಹೊಕ್ಕುಬಿಡು
ಸಿಕ್ಕ ಕುರ್ಚಿ ಮೇಲೆ
ಹೆಚ್ಚು ಹೊತ್ತು ಅಲ್ಲೆ ಊರಿರಬೇಡ
ನಿನ್ನ ಹ್ಯಾಟನ್ನ ಮರೀಬೇಡ

ಇಷ್ಟು ನೆನಪಿರಲಿ
ಯಾರಿಗೂ ನಿನ್ನ ಸುಳಿಹು ಹತ್ತದಿರಲಿ
ಏನಾದರೂ ಹೇಳಬೇಕಾಗಿ ಬಂದರೆ
ಅದನ್ನು ಎರಡು ಸಾರಿ ಹೇಳಬೇಡ
ನಿನ್ನ ಥರಾನೇ ಯೋಚಿಸೋರು ಸಿಕ್ಕರೆ
ನನಗದೇನೂ ಗೊತ್ತಿಲ್ಲ ಎಂದು ಬಿಡು

ತನ್ನ ಸಹಿಯನ್ನೇ ಹಾಕದವನನ್ನು
ತನ್ನ ಚಿತ್ರವೇ ಇಲ್ಲದವನನ್ನು
ಯಾರೂ ಅಲ್ಲದವನನ್ನು
ಹೇಗೆ ಹಿಡಿದಾರು ಹೇಳು?
ನಿನ್ನ ಗುರುತುಗಳನೆಲ್ಲ ಒರೆಸಿ ಹಾಕು

ನಿನ್ನ ಗೋರಿ ಮೇಲೆ
ಸತ್ತ ತಾರೀಖು
ಸತ್ತವನ ಹೆಸರು
ಅದಕ್ಕೊಂದು ಕಲ್ಲು
ಏನೂ ಬೇಡ
ಸತ್ತವನನ್ನೇ ಯಾರೆಂದು
ಪತ್ತೆ ಮಾಡಿ ಹಿಡಿಸಿಯಾರು! ಜೋಕೆ
ಇರಲೇ ಇಲ್ಲ ಎನ್ನುವ ಹಾಗೆ ಇದ್ದುಬಿಡು.





(ಜರ್ಮನಿಯಲ್ಲಿ ಫ್ಯಾಸಿಸಂ ಹರಡುತ್ತ ಇದ್ದಾಗಿನ ಸಂದರ್ಭದಲ್ಲಿ ಬಂದ ಪದ್ಯಗಳಲ್ಲಿ ಒಂದು)

'ರಾಜಕೀಯದ ಬಡತನ' ಅಲ್ಲ ರಾಜಕಾರಣದ ಬಡತನ

'ರಾಜಕೀಯದ ಬಡತನ' ಕೃತಿಯು ರಾಜಕೀಯ-ಅರ್ಥಶಾಸ್ತ್ರದ ನೆಲೆಯ (ಪೊಲಿಟ... ಎಕಾನಮಿ) ಭಿನ್ನ ನೋಟ ಮತ್ತು ವಿಶ್ಲೇಷಣೆಯೊಂದಿಗೆ ಕನ್ನಡದ ವೈಚಾರಿಕ ಲೋ... ಈವರೆಗೆ ಇದ್ದ ದೃಷ್ಟಿಕೋನದ ಬರವನ್ನಂತೂ ಕಡಿಮೆ ಮಾಡುವಲ್ಲಿ ಒಂದು ಕೊ... ಯಾಗಿದೆ. ಎಲ್ಲವನ್ನೂ ಓದಿ ಮುಗಿಸಿದ ಮೇಲೆ ಇದು ಮಧ್ಯಮ ವರ್ಗದವರನ್ನು ಉದ್ದೇ... ಬರೆದದ್ದೇ ಆಗಿದ್ದಲ್ಲಿ ಅಕಾಡೆಮಿಕ್ ರೀತಿಯ ಬರಹ ಮತ್ತು ಅಡಿಟಿಪ್ಪಣಿಯ ಶೈ... ಬದಲು ಜನಸ್ನೇಹೀ ಶೈಲಿಯನ್ನು ಅಳವಡಿಸಿಕೊಂಡಿದ್ದರೆ ಇನ್ನೂ ಹೆಚ್ಚು ಜನರನ್ನು ತಲುಪ...

'ರಾಜಕೀಯದ ಬಡತನ' ಡಾ.ಚಂದ್ರ ಪೂಜಾರಿಯವರು ಬರೆದಿರುವ ಒಂದು ವಿಭಿನ್ನವಾದ ಪುಸ್ತಕ. ಹಂಪಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿರುವ ಚಂದ್ರ ಪೂಜಾರಿಯವರು ಸ್ವಾತಂತ್ರ್ಯ ಬಂದು ಆರು ದಶಕಗಳೇ ಉರುಳಿದರೂ ಇನ್ನು ಮುಂದುವರೆಯುತ್ತಿರುವ ಬಡತನದ ಕಾರಣಗಳನ್ನು ಅನಾವರಣಗೊಳಿಸುತ್ತಾ ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಲೇಖನಗಳೇ ಇಲ್ಲಿ 'ರಾಜಕೀಯದ ಬಡತನ'ವನ್ನು ವಿವರಿಸುವ ಅಧ್ಯಾಯಗಳಾಗಿವೆ. ಆ ಎಲ್ಲಾ ಲೇಖನಗಳನ್ನು ಲೇಖಕರು ಮತ್ತೊಮ್ಮೆ ಪರಾಮರ್ಶಿಸಿ ಪುನರ್‌ರಚಿಸಿರುವುದರಿಂದ ಅವು ಬಿಡಿಬಿಡಿ ಲೇಖನಗಳಾಗದೆ ಪುಸ್ತಕಕ್ಕೆ ಒಟ್ಟಂದವನ್ನು-ಒಟ್ಟರ್ಥವನ್ನೂ ಕೊಡುವಂತಾಗಿದೆ.

ಈ ಪುಸ್ತಕದಲ್ಲಿ 'ಪ್ರಸ್ತಾವನೆ' ಮತ್ತು 'ಕೊನೆಯ ಕೆಲವು ವಿಚಾರಗಳ'ನ್ನು ಹೊರತುಪಡಿಸಿ ಏಳು ಅಧ್ಯಾಯಗಳಿವೆ. ಪ್ರತಿ ಅಧ್ಯಾಯಕ್ಕೂ ಒಂದು ಉದ್ದೇಶವಿರುವುದರಿಂದ ಪುಸ್ತಕದ ಒಟ್ಟು ಪ್ರತಿಪಾದನೆಯನ್ನು ಸಂಗ್ರಹಿಸಿ ಹೇಳುವುದಕ್ಕಿಂತ ಪ್ರತಿ ಅಧ್ಯಾಯವನ್ನು ವಿಶ್ಲೇಷಿಸುವುದು ಹೆಚ್ಚಿಗೆ ಅನುಕೂಲಕಾರಿಯಾಗಿರುತ್ತದೆ.

ತಮ್ಮ ಪ್ರಸ್ತಾವನೆಯಲ್ಲೇ ಲೇಖಕರು "ಬಹುತೇಕರಿಗೆ ಮೂಲಭೂತ ಸವಲತ್ತುಗಳ ಕೊರತೆ, ಕೆಲವರಿಗೆ ಅದು ಹೆಚ್ಚಿನ ಪ್ರಮಾಣದಲ್ಲಿ ದೊರಕುವ ರೀತಿಯಲ್ಲಿ ನಮ್ಮ ಸಾಮಾಜಿಕ ರಾಜಕೀಯ ಮತ್ತು ಆರ್ಥಿಕ ಸಂಬಂಧಗಳನ್ನು ಕಟ್ಟಿಕೊಂಡಿದ್ದೇವೆ. ಇದರ ಪರಿವರ್ತನೆಯ ಬಗೆಗೆ ನಮ್ಮ ರಾಜಕೀಯ ಪ್ರಕ್ರಿಯೆಗಳು ಗಮನಹರಿಸದಿದ್ದರೆ ಬಡತನ ಯಥಾರೂಪದಲ್ಲೇ ಮುಂದುವರೆಯುತ್ತದೆ" ಎಂದು ಪ್ರತಿಪಾದಿಸುತ್ತಾ ಮುಂದಿನ ಅಧ್ಯಾಯಗಳಿಗೆ ಮುನ್ನುಡಿ ಬರೆಯುತ್ತಾರೆ.


'ಅಧಿಕಾರ ಮತ್ತು ಜ್ಞಾನ' ಎಂಬ ತಮ್ಮ ಎರಡನೇ ಅಧ್ಯಾಯದಲ್ಲಿ ಹೇಗೆ ನಮ್ಮ ಸಮಾಜದಲ್ಲಿ ಜ್ಞಾನಕ್ಕೆ ಅಧಿಕಾರಕ್ಕಿಂತ ಹೆಚ್ಚಿನ ಮನ್ನಣೆ ನೀಡಲಾಗಿದೆ ಮತ್ತು ಜ್ಞಾನ ಸಂಗ್ರಹವನ್ನು ಸಕಾರಾತ್ಮಕ ಪ್ರಕ್ರಿಯೆಯನ್ನಾಗಿಯೂ, ಅಧಿಕಾರ ಸಂಪಾದನೆಯನ್ನು ನಕಾರಾತ್ಮಕ ಪ್ರಕ್ರಿಯೆಯನ್ನಾಗಿಯೂ ಚಿತ್ರಿಸುತ್ತಾ ಬರಲಾಗಿದೆ ಎಂಬುದನ್ನು ಉದಾಹರಣೆಗಳ ಸಮೇತ ಮುಂದಿಡುತ್ತಾರೆ. ಇದರ ಹಿಂದೆ ಈವರೆಗೆ ಅಧಿಕಾರ ಪಡೆಯದ ಜನ ಅಧಿಕಾರ ಪಡೆಯಲು ಯತ್ನಿಸುವುದನ್ನೇ ಕೀಳಾದದ್ದು ಎಂದು ಬಿಂಬಿಸುವ ಸನ್ನಾಹವಿದೆ ಎಂಬುದು ಲೇಖಕರ ವಾದ. ಅಧಿಕಾರವೆಂಬುದು ಕೇವಲ ವಿಧಾನಸೌಧದಲ್ಲಿ ಮಾತ್ರವಿದೆ ಎಂದು ಅರ್ಥಮಾಡಿಕೊಳ್ಳುವುದು ತಪ್ಪು ಎಂದು ಸರಿಯಾಗಿಯೇ ಪ್ರತಿಪಾದಿಸುವ ಚಂದ್ರ ಪೂಜಾರಿಯವರು ತಮ್ಮ ವಾದಕ್ಕೆ ಪೂರಕವಾಗಿ ಫೂಕೋ, ವೆಬರ್‌ನಂತಹ ಚಿಂತಕರ ವಾದಗಳನ್ನು ಬಳಸಿಕೊಳ್ಳುತ್ತಾರೆ. ಒಬ್ಬರಿಗೆ ಅಧಿಕಾರ ದಕ್ಕಬೇಕಾದರೆ ಮತ್ತೊಬ್ಬರ ಅಧಿಕಾರ ಮೊಟಕಾಗಬೇಕೆಂಬ ವಾದಕ್ಕಿಂತ ಒಟ್ಟಾರೆ ಅಧಿಕಾರ ಕೇಂದ್ರದಲ್ಲಿ ಅಧಿಕಾರ ಸಂಚಯ ಹೆಚ್ಚಾದಷ್ಟು ಒಟ್ಟಾರೆಯಾಗಿ ಎಲ್ಲರಿಗೂ ದಕ್ಕುವ ಅಧಿಕಾರ ಹೆಚ್ಚಾಗುತ್ತದೆಂಬ ವೆಬರ್‌ನ ವಾದ ಸೂಕ್ತವಾದದ್ದೆಂದು ಎತ್ತಿ ಹಿಡಿಯುತ್ತಾರೆ. ಆದರೆ ಇದರಿಂದ ಅಧಿಕಾರ ಪಡೆಯಲು ಸಂಘರ್ಷದ ಅಗತ್ಯವನ್ನೇ ನಿರಾಕರಿಸಿದಂತಾಗಿ ಯಥಾಸ್ಥಿತಿಯನ್ನು ಮುಂದುವರೆಸಿದಂತಾಗುವುದಿಲ್ಲವೇ ಎಂಬ ಅಂಶವನ್ನು ಲೇಖಕರು ಹೆಚ್ಚಾಗಿ ಪರಿಶೀಲನೆಗೆ ಒಡ್ಡುವುದಿಲ್ಲ.

'ಸಾಮಾನ್ಯರ ಚುನಾವಣಾ ರಾಜಕೀಯ' ಎಂಬ ಅಧ್ಯಾಯದಲ್ಲಿ ಇತ್ತೀಚಿನ ಚುನಾವಣೆಯಲ್ಲಿ ಹಂಪಿಯ ಬಳಿಯ ಕಮಲಾಪುರದ ಎರಡು ಹಳ್ಳಿಗಳಲ್ಲಿ ಸಾಮಾನ್ಯ ಜನತೆ ಓಟು ಮಾಡಿದ ರೀತಿಯನ್ನು ಕ್ಷೇತ್ರಾಧ್ಯಯನ ಮತ್ತು ಅಂಕಿಅಂಶ ವಿಜ್ಞಾನವನ್ನು ಬಳಸಿಕೊಂಡು ವಿಶ್ಲೇಷಣೆ ಮಾಡಿದ್ದಾರೆ. ಸಾಮಾನ್ಯ ಜನರೂ ಸಹ ರಾಜಕೀಯದ ಬಗ್ಗೆ ಮಾಧ್ಯಮದವರ ರೀತಿ ಮತ್ತು ಮಧ್ಯಮವರ್ಗದ ರೀತಿ ಯೋಚಿಸುತ್ತಾರೆಯೇ ಎಂಬುದನ್ನು ಹೊರಗೆಡುವುದೆ ಈ ಅಧ್ಯಯನದ ಮುಖ್ಯ ಉದ್ದೇಶ. ಈ ಅಧ್ಯಯನವು ಸಾಮಾನ್ಯ ಜನರಿಗೆ ರಾಜಕಾರಣಿಗಳ ಸ್ವಾರ್ಥದ ಬಗೆಗೆ ಮಧ್ಯಮ ವರ್ಗದವರಂತೆ ತಿರಸ್ಕಾರದ ಭಾವನೆಯೇ ಇದ್ದರೂ ರಾಜಕೀಯದಿಂದ ತಮ್ಮ ಬದುಕು ಹಸನಾಗಬೇಕೆಂಬ ನಿರೀಕ್ಷೆಯೂ ಇದೆಯೆಂಬುದನ್ನು ಬೆಳಕಿಗೆ ತರುತ್ತದೆ. ಆದರೆ ಅದರಿಂದ ಬಡವರು ರಾಜಕಾರಣದಲ್ಲಿ ತೊಡಗಲು ತೊಡಕಾಗಿರುವ ಅಂಶಗಳನ್ನು ನಿವಾರಿಸಲು ಮಧ್ಯಮವರ್ಗ ಪ್ರಯತ್ನಪಡಬೇಕೆಂಬ ತೀರ್ಮಾನಕ್ಕೆ ಲೇಖಕರು ಬಂದಿರುವುದು ಮಾತ್ರ ಏಕೋ ಪೂರ್ವ ನಿರ್ಧಾರಿತವಾದಂತೆ ಕಾಣುತ್ತದೆ.

'ಕೋಮುವಾದಿ ರಾಜಕೀಯದ ಸುತ್ತಮುತ್ತ' ಎಂಬ ಮೂರನೇ ಅಧ್ಯಾಯದಲ್ಲಿ ಈ ಕೆಳಗಿನ ಪ್ರಮುಖ ಅಂಶಗಳನ್ನು ಲೇಖಕರು ಸಾಬೀತುಮಾಡುತ್ತಾರೆ: ಭಾರತದ ರಾಜಕಾರಣದಲ್ಲಿ ಭೂಸುಧಾರಣೆ ಇತ್ಯಾದಿ ನೀತಿಗಳಿಂದಾಗಿ ರಾಜಕಾರಣದಲ್ಲಿ ಶೂದ್ರ ಮತ್ತು ಕೆಳವರ್ಗದ ಜನ ಸಬಲೀಕರಣಗೊಂಡು ಮೇಲ್ಜಾತಿ ಮತ್ತು ಮೇಲ್ವರ್ಗದ ಸ್ಥಾನಮಾನಗಳಿಗೆ ಸವಾಲು ಹಾಕುತ್ತಿದ್ದಂತೆ ಮೇಲ್ವರ್ಗ ಮತ್ತು ಮೇಲ್ಜಾತಿ ಜನ ಮತ್ತೆ ಕೆಳವರ್ಗದವರನ್ನು ತಮ್ಮ ಅಧೀನದಲ್ಲಿರಿಸಿಕೊಳ್ಳಲು ಧರ್ಮಾಧಾರಿತ ಕೋಮುವಾದವನ್ನು ಹುಟ್ಟುಹಾಕಿದರು. ಕೋಮುವಾದವೆಂದರೆ ಕೇವಲ ಅಲ್ಪಸಂಖ್ಯಾತರ ಮೇಲಿನ ಆಕ್ರಮಣ ಎಂಬ ತಿಳಿವಳಿಕೆ ಇರುವಾಗ ಈ ಗ್ರಹಿಕೆ ಹೇಗೆ ಅದು ಕೆಳವರ್ಗದ ಹಿಂದೂಗಳ ಹಿತಾಸಕ್ತಿಗೂ ವಿರುದ್ಧವಾದದ್ದು ಎಂಬುದನ್ನು ಬೆಳಕಿಗೆ ತರುತ್ತದೆ. ಆದ್ದರಿಂದಲೇ ಭಯೋತ್ಪಾದನೆ, ನಕ್ಸಲಿಸಂ ಮತ್ತು ಕೋಮುವಾದಗಳೆಲ್ಲವೂ ಹಿಂಸಾವಾದಿ ರಾಜಕೀಯವೇ ಆಗಿದ್ದರೂ ಆಳುವವರ್ಗ ಮತ್ತು ಅದರ ಎಲ್ಲಾ ಪಕ್ಷಗಳು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಕೋಮುವಾದಕ್ಕೆ ಕುಮ್ಮಕ್ಕಾಗಿರುತ್ತವೆ ಮತ್ತು ಇತರ ಹಿಂಸಾವಾದಿ ರಾಜಕೀಯಗಳ ಮೇಲೆ ತೋರುವಂಥ ನಿರ್ದಾಕ್ಷಿಣ್ಯ ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ಕರ್ನಾಟಕದ ಇತ್ತೀಚಿನ ವಿದ್ಯಮಾನಗಳನ್ನು ಇಟ್ಟುಕೊಂಡು ಲೇಖಕರು ಸಾಬೀತುಪಡಿಸುತ್ತಾರೆ. ಆದ್ದರಿಂದಲೇ ನಕ್ಸಲ್ ರಾಜಕಾರಣವು ಮೇಲ್ವರ್ಗದ ಆಧಿಪತ್ಯವನ್ನು ಶಾಶ್ವತಗೊಳಿಸುವ ಚೌಕಟ್ಟನ್ನೇ ಮುರಿಯುವ ಉದ್ದೇಶ ಹೊಂದಿರುವುದರಿಂದ ನಕ್ಸಲರನ್ನು ಕಂಡಲ್ಲಿ ಗುಂಡಿಕ್ಕಿ ಕೊಲ್ಲುವ ನೀತಿಯನ್ನು ಎಲ್ಲಾ ಸರ್ಕಾರಗಳೂ ಅನುಸರಿಸುತ್ತವೆ ಎಂದು ಲೇಖಕರು ಮನವರಿಕೆ ಮಾಡಿಕೊಡುತ್ತಾರೆ. ಆದರೆ ಈ ವಿವರಣೆ ಪ್ರಭುತ್ವದ ಬಗ್ಗೆ ಮೊದಲ ಅಧ್ಯಾಯದಲ್ಲಿ ಅವರು ತೆಗೆದುಕೊಳ್ಳುವ ವೆಬರಿಯನ್ ವ್ಯಾಖ್ಯಾನಕ್ಕೆ ವಿರುದ್ಧವಾಗಿರುವ ವಿಪರ್ಯಾಸ ಇದರಲ್ಲಿದೆ.



ರಾಜಕೀಯ ಬಡತನ
ಲೇಖಕರು : ಡಾ.ಎಂ.ಚಂದ್ರಪೂಜಾರಿ
ಪುಟಗಳು : 202 ಬೆಲೆ : 160/-
ಪ್ರಕಾಶಕರು : ಸಿದ್ಧಾರ್ಥ ಪ್ರಕಾಶನ
ಗಿರಿಕೃಪ, ಶಂಕರ್ ಕಾಲೋನಿ,
ಎಂ.ಪಿ.ಪ್ರಕಾಶ್‌ನಗರ, ಹೊಸಪೇಟೆ-01


ಡಾ.ಎಂ.ಚಂದ್ರಪೂಜಾರಿ

'ಬಡತನ: ಅಧಿಕಾರದ ಅಡಿಪಾಯ' ಎಂಬ ಅಧ್ಯಾಯದಲ್ಲಿ ಹೇಗೆ ಬಡತನವನ್ನು ಕೇವಲ ಆರ್ಥಿಕ ಬಡತನವೆಂದು ವಿಶ್ಲೇಷಿಸುತ್ತಾ ಅದನ್ನು ಮಾತ್ರ ಗುರಿಯಾಗಿರಿಸಿಕೊಂಡು ನೆಪಮಾತ್ರದ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿರುವುದೇ ಬಡತನದ ಮುಂದುವರಿಕೆಗೆ ಕಾರಣವಾಗಿದೆ ಎಂಬುದನ್ನು ವಿವರಿಸಲಾಗಿದೆ. ವಾಸ್ತವವಾಗಿ ಬಡತನವೆಂಬುದು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಸಮಾನತೆಗಳಿಂದ ಹುಟ್ಟಿಕೊಳ್ಳುತ್ತದೆ. ಈ ಅಸಮಾನತೆಗಳು ಬಡವರಿಗೆ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ವಾತಂತ್ರ್ಯವನ್ನೂ, ನಿರಾಕರಿಸುತ್ತದಾದ್ದರಿಂದ ಬಡತನವು ಹುಟ್ಟಿಕೊಳ್ಳುವ ಸಂದರ್ಭ ಮುಂದುವರೆಯುತ್ತಲೇ ಹೋಗುತ್ತದೆ. ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸಮಾನತೆ ಮತ್ತು ಸ್ವಾತಂತ್ರ್ಯದ ನಡುವೆ ನೇರ ಸಂಬಂಧವಿದೆ. ಅಸಮಾನತೆ ಮತ್ತು ಅಸ್ವಾತಂತ್ರ್ಯಗಳು ಜನರಿಗೆ ಅವಕಾಶಗಳನ್ನು ನಿರಾಕರಿಸುತ್ತದೆ. ಇದರಿಂದ ಸಂಪನ್ಮೂಲ ವಿತರಣೆಯ ಪ್ರಕ್ರಿಯೆಯಲ್ಲಿ ಬಡವರು ಪರಿಣಾಮಕಾರಿಯಾಗಿ ಭಾಗವಹಿಸಲು ಸಾಧ್ಯವಿಲ್ಲ. ಇದು ಬಡವರನ್ನು ಶಾಶ್ವತ ಪರಾವಲಂಬನ ಸ್ಥಿತಿಯಲ್ಲಿ ಹಿಡಿದಿರಿಸುತ್ತದೆ ಎಂದು ಲೇಖಕರು ಉದಾಹರಣೆ ಮತ್ತು ಅಂಕಿಅಂಶಗಳ ಸಮೇತ ಸಶಕ್ತವಾಗಿ ವಾದಿಸುತ್ತಾರೆ.

'ಮೀಸಲಾತಿ: ಸೀಮಿತ ಪರಿವರ್ತನೆಯ ಸಾಧನ' ಎಂಬ ಅಧ್ಯಾಯದಲ್ಲಿ ಪ್ರತಿ ಮೂರು ದಶಕಗಳಿಗೊಮ್ಮೆ ಎದ್ದೇಳುವ ಮೀಸಲಾತಿ ವಿವಾದಗಳು ಮೀಸಲಾತಿಯ ವಿರುದ್ಧ ಎತ್ತುವ ಮೂರು ವಾದಗಳನ್ನು - ಮೀಸಲಾತಿ ಪ್ರತಿಭಾಹೀನರಿಗೆ ಮಣೆಹಾಕುತ್ತದೆ. ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಕಡ್ಡಾಯ ಮಾಡುವ ಅಧಿಕಾರ ಸರ್ಕಾರಕ್ಕಿಲ್ಲ ಮತ್ತು ಮೀಸಲಾತಿ ಪಡೆದವರು ದಕ್ಷತೆಯಿಂದ ಕೆಲಸ ಮಾಡುವುದಿಲ್ಲ- ಯಶಸ್ವಿಯಾಗಿ ಅಲ್ಲಗಳೆಯುತ್ತದೆ.

'ಕರ್ನಾಟಕದ ಅಭಿವೃದ್ಧಿ ರಾಜಕಾರಣ' ಎಂಬ ಅಧ್ಯಾಯದಲ್ಲಿ ಕಳೆದ ಆರು ದಶಕಗಳಲ್ಲಿ ಹೇಗೆ ಕರ್ನಾಟಕ ತನ್ನ ಅಭಿವೃದ್ಧಿ ನೀತಿಯಲ್ಲಿ ಯಾವುದೇ ಜನಪರ ತಾತ್ವಿಕತೆಯನ್ನು ಅಳವಡಿಸಿಕೊಂಡಿಲ್ಲ ಎಂಬುದನ್ನು ಬಯಲಿಗೆಳೆಯುತ್ತಾರೆ. ನಂಜುಂಡಪ್ಪ ವರದಿಯೂ ಸಹ ಎಲ್ಲಾ ಬಗೆಯ ಅಸಮಾನತೆಗಳಿಗೆ ಕೇವಲ ಏಕಮುಖ ಬಂಡವಾಳ ನಿಯೋಜನೆ ಮಾತ್ರ ಪರಿಹಾರ ಎಂಬ ನೀತಿಯನ್ನು ಅನುಸರಿಸಿತು ಎಂಬ ಬಗ್ಗೆ ಸಖೇದಾಶ್ಚರ್ಯವನ್ನು ವ್ಯಕ್ತಪಡಿಸುತ್ತಾರೆ.

'ಬಹುಜನ ರಾಜಕೀಯ- ಸ್ಥಳೀಯ ಸರ್ಕಾರ' ಎಂಬ ಕೊನೆ ಅಧ್ಯಾಯದಲ್ಲಿ ಕರ್ನಾಟಕದ ಆರು ದಶಕಗಳ ಅಭಿವೃದ್ಧಿಯ ಬಗೆಗೆ ಹಲವಾರು ಉಪಯುಕ್ತ ಮಾಹಿತಿಗಳನ್ನು ನೀಡಲಾಗಿದೆ. ವಿಕೇಂದ್ರೀಕರಣದ ಹೆಸರಲ್ಲಿ ವಿಶ್ವವಿದ್ಯಾಲಯಗಳು, ಅಭಿವೃದ್ಧಿ ಮಂಡಳಿಗಳು ರಚಿತವಾದರೂ ಪ್ರಾದೇಶಿಕ ಅಸಮಾನತೆಯಲ್ಲಿ ಬದಲಾವಣೆ ಬರದಿರುವುದಕ್ಕೆ ಈ ಯೋಜನೆಗಳು ಅಸಮಾನತೆಯನ್ನು ಹುಟ್ಟಿಹಾಕುವ ಪರಿಸರವನ್ನು ಬದಲಿಸುವ ಉದ್ದೇಶವನ್ನೇ ಹೊಂದಿರಲಿಲ್ಲವೆಂಬುದನ್ನು ಲೇಖಕರು ಕೇರಳದ ಹೋಲಿಕೆಯಲ್ಲಿ ಬಿಚ್ಚಿಡುತ್ತಾರೆ. ಹೀಗಾಗಿ ಮೇಲ್ ಅಧಿಕಾರದ ರಚನೆಯ ವಿಕೇಂದ್ರೀಕರಣವಾಗುವ ಬದಲು ಸ್ಥಳೀಯ ಸರ್ಕಾರ ರಚನೆಯೇ ಇದೆಲ್ಲಕ್ಕೂ ಪರಿಹಾರವೆಂಬುದನ್ನು ಸೂಚಿಸುತ್ತಾರೆ.

ಪುಸ್ತಕದ ಕೊನೆಯಲ್ಲಿ ಬರೆದಿರುವ "ಕೊನೆಯ ಕೆಲವು ವಿಚಾರಗಳಲ್ಲಿ" ಇಡೀ ಪುಸ್ತಕ ಗ್ರಾಮೀಣ ಬಡತನ ಬಗ್ಗೆಯೇ ಇದ್ದರೂ ಮಧ್ಯಮ ವರ್ಗದವರನ್ನು ಉದ್ದೇಶಿಸಿ ಬರೆದಿರುವ ಕಾರಣವನ್ನು ಸ್ಪಷ್ಟಪಡಿಸುತ್ತಾರೆ. ಮಧ್ಯಮ ವರ್ಗ ಇವೆಲ್ಲವನ್ನು ಅರ್ಥಮಾಡಿಕೊಂಡು ಸಕ್ರಿಯವಾಗಿ ರಾಜಕಾರಣದಲ್ಲಿ ಭಾಗವಹಿಸಿದರೆ 'ರಾಜಕೀಯದ ಬಡತನ' ತೀರಬಹುದೆಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ.

ಕೆಲವು ವೈರುಧ್ಯಗಳು: ಹೀಗೆ ಬಡತನದ ಬಗ್ಗೆ ವಿದ್ವತ್‌ಪೂರ್ಣ ವಿಶ್ಲೇಷಣೆಯುಳ್ಳ, ಕಾಳಜಿಯುಳ್ಳ ಪುಸ್ತಕವೊಂದನ್ನು ಡಾ.ಚಂದ್ರ ಪೂಜಾರಿಯವರು ನೀಡಿದ್ದಾರೆ. ಈ ಪುಸ್ತಕದ ಹಿಂದಿರುವ ಕಾಳಜಿ ಹಾಗೂ ಬಹುಪಾಲು ವಿಶ್ಲೇಷಣೆಗಳು ಪ್ರಶ್ನಾತೀತವಾದರೂ ಕೆಲವು ಅಧ್ಯಾಯಗಳಲ್ಲಿ ಅಂತಿಮವಾಗಿ ಮಾಡುವ ತೀರ್ಮಾನಗಳು ಪರಸ್ಪರ ವಿರುದ್ಧವೆಂಬಂತೆ ಕಂಡುಬರುತ್ತದೆ. ಅದರಲ್ಲೂ ಮುಖ್ಯವಾಗಿ ರಾಜ್ಯಾಧಿಕಾರದ ಬಗ್ಗೆ ವೆಬರ್ ಹೇಳುವ ರೀತಿ ಕೇಂದ್ರದಲ್ಲಿ ಅದು ಹೆಚ್ಚೆಚ್ಚು ಸಂಚಯ ಆದಷ್ಟು ಅದು ಎಲ್ಲರಿಗೂ ದಕ್ಕುತ್ತದೆ ಎಂಬ ವ್ಯಾಖ್ಯಾನವನ್ನು ಲೇಖಕರೂ ಒಪ್ಪುತ್ತಾರೆ. ಆದರೆ ಇಡೀ ಪುಸ್ತಕದಲ್ಲಿನ ವಿಶ್ಲೇಷಣೆ ಅಧಿಕಾರ ಕೇಂದ್ರದಲ್ಲಿ ಹೆಚ್ಚು ಸಂಚಯ ಆದಷ್ಟೂ ಬಡಜನತೆ ಇದ್ದಬದ್ದ ಅ... ಮತ್ತು ಸಂಪನ್ಮೂಲಗಳನ್ನು ಕಳೆದುಕೊಳ್ಳುತ್ತಾ ಬರು... ಎಂಬುದನ್ನೇ ಸೂಚಿಸುತ್ತದೆ.

ಅದೇ ರೀತಿ ಮೊದಲ ಅಧ್ಯಾಯಗಳಲ್ಲಿ ... ಉದಾರವಾದಿ ಯುಗದಲ್ಲಿ ಆರ್ಥಿಕ ಅಭಿವೃದ್ಧಿ... ರಾಜಕೀಯಕ್ಕೆ ಮತ್ತು ಸರ್ಕಾರಕ್ಕೆ ಪಾತ್ರ ಕಡಿಮೆಯಾಗ... ಎಂದು ವಾದಿಸುವ ಲೇಖಕರೇ ನಂತರದಲ್ಲಿ ಸ... ಹಾಗೂ ರಾಜಕೀಯ ಹೇಗೆ ಕಾರ್ಪೊರೇಟ್ ಬಂಡ... ಹಿಗ್ಗುವಲ್ಲಿ ಪ್ರಧಾನ ಪಾತ್ರ ವಹಿಸುತ್ತಿದೆ ಎಂಬು... ಸಾಬೀತು ಮಾಡುತ್ತಾರೆ.

ಅಲ್ಲದೆ ಕೆಲವು ಪೂರ್ತಿ ಸಮ್ಮತವಾಗದ ... ವಾದಗಳನ್ನು ಲೇಖಕರು ಮುಂದಿಡುತ್ತಾರೆ. ಅ... ಜನತೆ ಸಮುದಾಯವಾಗಿ ಅಲ್ಲದೆ ವ್ಯಕ್ತಿಗಳಾಗಿ ತೀವ... ತೆಗೆದುಕೊಳ್ಳುವ ಸ್ಥಿತಿ ಬಂದಾಗ ಪ್ರಜಾತ... ಉತ್ತಮಗೊಳ್ಳುತ್ತದೆ ಎಂಬ ಲೇಖಕರ ವಾದ ... ಧರ್ಮಾಧಾರಿತ ರಾಜಕಾರಣದ ಕೆಟ್ಟ ಪರಿಣಾಮಗ... ನೋಡಿ ಉದ್ಭವವಾಗಿದೆ ಎಂದುಕೊಂಡರೂ ಸಮುದ... ಗಳಾಗಿಯೇ ಜನತೆ ಶೋಷಣೆಗೊಳಗಾಗುತ್ತಿ... ಭಾರತದಂಥ ಮೂರನೇ ಪ್ರಪಂಚದ ರಾಷ್ಟ್ರಗಳಲ್ಲಿ ... ಪ್ರಗತಿಪರ ಪಾತ್ರವೂ ಇದೆ ಎಂಬುದನ್ನೂ ಮರೆಯ... ವುದಿಲ್ಲ.

ಅದೇ ರೀತಿ ಸ್ಥಳೀಯ ಸರ್ಕಾರದ ಕಲ್ಪನೆಯ... ಸಹ ಲೇಖಕರು ಅತ್ಯಂತ ರೋಮ್ಯಾಂಟಿಕ್ ನೆಲೆ... ಮಾಡಿಕೊಂಡಿದ್ದಾರೆ ಎನಿಸುತ್ತದೆ. ಗ್ರಾಮೀಣ ಪರಿಸ್ಥಿತಿ... ರಾಜಕೀಯ ಮತ್ತು ಆರ್ಥಿಕ ಸಮೀಕರಣ ಇರುವಂತೆ... ಬಿಟ್ಟುಕೊಂಡು ಸ್ಥಳೀಯ ಸರ್ಕಾರದ ರಚನೆಯ... ಏನಾಗಬಹುದು ಎಂಬ ಊಹೆಯೇ ಭಯಾನಕವಾದ... ಇದನ್ನು ಬರೆಯುವಾಗ ನನ್ನ ಕಣ್ಣಮುಂದೆ ಹರಿಯ... ಮತ್ತು ಉತ್ತರ ಪ್ರದೇಶಗಳಲ್ಲಿ ಜಾತಿ ಪಂಚಾಯತಿ... ನಡೆಸುತ್ತಿರುವ 'ನೈತಿಕ ಹತ್ಯೆ'ಗಳೇ ಕಾಣುತ್ತಿವೆ.

ಇದಲ್ಲದೆ ಕೇರಳ ಮತ್ತು ಪ.ಬಂಗಾಳದ ಮಾದರಿ... ಈ ಹಿಂದೆ ಆದರ್ಶಮಯವಾಗಿದ್ದರೂ ಪ್ರಸ್ತು... ಸಂಸದೀಯ ಎಡಪಕ್ಷಗಳೂ ಜಾಗತೀಕರಣದ ... ಮಾರುಕಟ್ಟೆಯೆಂಬ ಬಂಡವಾಳವಾದಿ ನೀತಿಯನ್ನೇ ಅನು... ಸಲು ಪ್ರಾರಂಭಿಸಿದ ಮೇಲೆ ಅಲ್ಲಿನ ವಿಕೇಂದ್ರೀಕರಣ... ಹಲ್ಲು ಕಿತ್ತ ಹಾವೇ ಆಗಿದೆ. ಅಷ್ಟು ಮಾತ್ರವ... ಪ್ರಜಾತಾಂತ್ರೀಕರಣವೆಂಬುದು ಒಂದು ನಿರಂತರ ಪ್ರ... ಯೆಂಬುದನ್ನು ಅರ್ಥಮಾಡಿಕೊಳ್ಳದಿರುವುದರಿಂದ... ಹಿಂದೊಮ್ಮೆ ಜನಪರವಾಗಿದ್ದ ರಚನೆಗಳೇ ಈಗ ಶೋ... ರಚನೆಗಳಾಗಿ ಪರಿಣಮಿಸಿವೆ.

ಇದಲ್ಲದೆ ಮಧ್ಯಮವರ್ಗಕ್ಕೆ ಸಮಾಜದ ಪ್ರಜಾತಾ... ಕರಣದಲ್ಲಿ ಒಂದು ಪ್ರಮುಖ ಪಾತ್ರವಿರುವ... ನಿಜವಾದರೂ ನಿರ್ಣಾಯಕವಾದದ್ದು ಜನಸಾಮಾ... ಪ್ರಜ್ಞಾವಂತಿಕೆ ಮತ್ತು ವಿವೇಕಗಳೇ. ಇವು ಪರ್ಯಾ... ರಾಜಕಾರಣವನ್ನು ಹುಟ್ಟುಹಾಕಿದರೆ ಮಾತ್ರ ಅಂ... ಪರಿಹಾರ ಸಾಧ್ಯ.

ಅದೇನೇ ಇದ್ದರೂ 'ರಾಜಕೀಯದ ಬಡತನ' ಕೃ... ರಾಜಕೀಯ-ಅರ್ಥಶಾಸ್ತ್ರದ ನೆಲೆಯ (ಪೊಲಿಟ... ಎಕಾನಮಿ) ಭಿನ್ನ ನೋಟ ಮತ್ತು ವಿಶ್ಲೇಷಣೆಯೊ... ಕನ್ನಡದ ವೈಚಾರಿಕಲೋಕದಲ್ಲಿ 'ಈವರೆಗೆ ... ದೃಷ್ಟಿಕೋನದ ಬರವನ್ನಂತೂ ಕಡಿಮೆ ಮಾಡುವಲ್ಲಿ ... ಕೊಡುಗೆಯಾಗಿದೆ. ಎಲ್ಲವನ್ನೂ ಓದಿ ಮುಗಿಸಿದ ಮ... ಇದು ಮಧ್ಯಮ ವರ್ಗದವರನ್ನು ಉದ್ದೇಶಿಸಿ ಬರೆ... ಆಗಿದ್ದಲ್ಲಿ ಅಕಾಡೆಮಿಕ್ ರೀತಿಯ ಬರಹ ಮ... ಅಡಿಟಿಪ್ಪಣಿಯ ಶೈಲಿಯ ಬದಲು ಜನಸ್ನೇಹೀ ಶೈಲಿಯ... ಅಳವಡಿಸಿಕೊಂಡಿದ್ದರೆ ಇನ್ನೂ ಹೆಚ್ಚು ಜನರನ್ನು ತಲುಪು... ಎನಿಸಿತು.

● ಶಿವಸುಂದ...

...ವು ಮಾಡೋ ಕ್ಯಲಸಕ್ಕೆ ಟ್ರೈನಿಂಗ್ ಬ್ಯಾರೆ ಕೇಡು

...ರ್ಕಾರದ ಮಂತ್ರಿಗಳಿಗೆಲ್ಲಾ ಆದಳಿತ ನಡೆಸುವ ...ಕೊಡುವ ಕಾರ್ಯಾಗಾರ ಸುತ್ತೂರು ಮಠದಲ್ಲಿ ...ದೆ ಎಂಬ ವಿಷಯದ ಬಗ್ಗೆ ಯೋಚಿಸುತ್ತಾ ...ಗ್ರಿ.

...ಊ ಬಜೆಪಿ ಜನಗಳಿಗೆ ಆದಳತ ಮಾಡಕ್ಕೆ ...ಬಂದಂಗಾಯ್ತು" ಎಂದ.

...ಟ್ಟುಪುರಾಣ

...ಲು ಸೀ ಮೆ

▸ಬಿ. ಚಂದ್ರೇಗೌಡ

...ನ್ನ ಮುದಾಗಿ ಹೇಳ್ತಾಯಿದ್ದಿ ಅದ್ಯಲ್ಲಾರಿಗೂ ...ಯಾ."

...ತ್ತು ಸರಿಕಣಮಾವ. ಈಗ ಅವುರೆ ಒಪ್ಪಿ ...ಲ್ಲ ಹೇಳು."

...ರೊಪ್ಪಿಗಂಡರೂ?"

...ಗಳದು ಅಂದ್ರೆ ಅಂಗಲ್ಲಾ. ಯಲ್ಲಾ ಮಂತ್ರಿ ...ತ್ತೂರ ಮಠಕ್ಕೆ ಕರಕಂಡೋಗಿ ಸಾಲಾಗಿ ಕುಂಡ್ರಿಸಿ, ... ತಗಂಡು, ಮೋದಿ ಕರಸಿ ಪಾಠ ಮಾಡಿದರಂತೆ."

...ಪಾಠ ಮಾಡಿದ್ರೂ?" ಎಂದಳು ಜುಮ್ಮಿ.

...ಆಡಳತ ಯಂಗೆ ಮಾಡಬೇಕು, ಜನ ಯಂಗೆ ...ಬೇಕು, ಅಧಿಕಾರಿಗಳ ಯಂಗೆ ಬಳಸಿಗಬೇಕು ...ದಿ ಗುಜರಾತಿನಿಂದ ಬಂದು ಹೇಳಿಕೊಟ್ಟನಂತೆ."

...ಗರೆ ಇಲ್ಲಿವರಿಗೂ ಏನು ಮಾಡತಿದ್ರು ..."

...ಕಣ ಮಾವ ಈಗ ಆಗಿರದು. ಈ ಬಜೆಪಿ ... ಇಷ್ಟು ದಿನ ಏನೂ ಗೊತ್ತಿಲ್ಲದೆಯೂ ...ಅನ್ನದು ಸಾಬೀತಾಯ್ತು" ಎಂದು ಉಗ್ರಿ.

...ರಿಗೆ ಗೊತ್ತಿರಲಿಲ್ಲ ಸರಿ, ಅಧಿಕಾರಿಗಳು ಕತ್ತೆ ...ದ್ರೇನ್ಲ" ಎಂದ ಸೀರ.

...ಮುಂಡೆ ಮಕ್ಕಳು ಅಧಿಕಾರಿಗಳನೂ ಸರಿಯಾಗಿ ...ಕ್ಕೆ ಹೋಗಿಲ್ಲ ಕಣ ಮಾವ. ಎಲ್ಲಿ ನಮ್ಮ ...ಗೊತ್ತಾಯ್ತದೊ ಅಂತ ಸುಮ್ಮನಾಗಿಬುಟ್ಟವುರೆ. ...ಲ್ಲಾ ಮಂತ್ರಿಗಳ ಖಾತೆನೂ ಹಾಳುಬದ್ದೋಗ್ಯವಂತೆ. ...ಕ ಖಾತೆ ತಗಂಡಿಯಾ ಅದು ಆರೆಸೆಸ್‌ನೋರ ...ಶಿ. ಕೃಷಿ ಸಚಿವನಂತೂ ನನಿಗೇನು ಗೊತ್ತಿಲ್ಲ ... ಇನ್ನು ರೆಡ್ಡಿಗಳ ಕತೆ ಕೇಳಂಗಿಲ್ಲ. ಹಿಂಗಾಗಿ ...ಮೋದಿ ಟ್ರೀಟ್‌ಮೆಂಟೇ ಸರಿ ಅಂತ ಎಡೂರಪ್ಪ ...ಕರಸಿದ್ನಂತೆ."

...ನ್ಯಾರ್ಲ?" ಎಂದಳು ಜುಮ್ಮಿ.

"ಓ, ನಿನಿಗೀಗ ಹಳೆ ಕತೆನೆ ಹೇಳಬೇಕಾಯ್ತವ್ವ. ಅವುನು ಗುಜರಾತಿನ ಮುಖ್ಯಮಂತ್ರಿ ಕಣೇ. ಹಿಂದೆ ಗೋದ್ರಾದತ್ರ ರೈಲಿಗೆ ಬೆಂಕಿಬದ್ದಿತ್ತು, ಅದರ್ವಳಗೆ ರಾಮಸೇವಕರಿದ್ದರಂತೆ. ಅವುರ್ಯಲ್ಲ ಸತ್ತೋದ್ರು."

"ಜೀವ ಬ್ಯರಕೆ ಸುಟ್ಟೋದ್ರು ಅನ್ನ."

"ಊ. ಆಗ ಇದು ಸಾಬರ ಕ್ಯಲಸವೆಯಾ ಅಂತ ಗುಜರಾತಿನ ಹಿಂದೂಗಳು ಸಾಬರ ಮ್ಯಾಲೆ ಬಿದ್ರು. ಬಿದ್ರೂ ಅಂದ್ರೆ ಅಂಗಿಂಗಲ್ಲ ಕಣೆ. ಮನಿಗಳಿಗೆ ಬೆಂಕಿ ಹಚಿದ್ರು, ಬಸರಿರು ಬಾಣತಿರು ಅಂದೆ ಬೆಂಕಿ ವಳಿಕೆ ನೂಕಿದ್ರು" ಎಂದು ಉಗ್ರಿ ಹೇಳುವಾಗ ಲೊಚಗರಿದ ಜುಮ್ಮಿ

"ಆಯ್ಯೋ ರಾಮ" ಎಂದಳು.

"ರಾಮ ರಾಮ ಅನ್ನೊರೆ ಕಣೆ ಅಂಗೆ ಮಾಡಿದ್ದು. ಆ ಟೇಮಲ್ಲಿ ಇದೇ ಮೋದಿ ಮುಖ್ಯಮಂತ್ರಿಯಾಗಿದ್ದ. ಅವುನು ಏನು ಮಾಡಿದ ಅಂದ್ರೇ ಗಲಭೆ ತಡಿಯಕ್ಕೆ ಹೋಗಲಿಲ್ಲ, ಸಾಬರ ಧ್ವಂಸ ಮಾಡಕ್ಕೆ ಅವುಕಾಸ ಮಾಡಿಕೊಟ್ಟ. ಗಲಭೆ ಮಾಡೋರ ಜ್ವತಿಗೆ ಪೊಲೀಸ್‌ನೋರು ಸೇರಿಕೊಂಡು, ಹೆಚ್ಚುಕಮ್ಮಿ ಮೂರು ಸವುರ ಜನ ಸತ್ಯಕಣೆ ಆ ಟೇಮಲ್ಲಿ. ಇಲ್ಲಿಗೂ ಕೆಲುವುರು ಓಡಿಬಂದ್ರು. ಅವುರ್ಯಲ್ಲ ಬೆಂಗಳೂರ ಸಿಟಿ ಮಾರ್ಕೆಟತ್ರ ಮಸೀದಿ ಅದೆ ನೋಡು ಅಲ್ಲಿ ಕೂತವುರೆ" ಎಂದ ಉಗ್ರಿ.

"ನಿಜವೇನ್ಲ?" ಎಂದ ಕಾಳಮಾವ.

"ನಿಜಕಣ ಮಾವ. ಕಾನೂನ ಕೈಗೆತ್ತಿಗೊಂಡು ಜನ ರಕ್ಷಣೆ ಮಾಡಬೇಕಾದ ಮುಖ್ಯಮಂತ್ರಿ ಜನಗಳ ಸಾಯಕ್ಕೆ ಅವುಕಾಸ ಕೊಟ್ಟ. ಅಂಥೊನ್ನ ಕರಸಿ ಪಾಠ ಹೇಳಿಸಿಗುತ್ತವೆ ಅಂದ್ರೆ ಅವುನಿನ್ನೇನು ಪಾಠ ಮಾಡಿದ್ದನೂ, ಇವಿನ್ನೇನು ಕೇಳಿತಿದ್ದವ್ರೂ ಲ್ಯಕ್ಕ ಹಾಕು."

"ನೋಡು ಮತ್ತೆ, ದ್ಯಾವೇಗೌಡನಂಥೋರ ಕರದು ಹೇಳಿಸಿಗಂಡಿದ್ರೆ ಏನು ಮಾನಕಮ್ಮಿಯಾಗದೆ?" ಎಂದ ಕಾಳಮಾವ.

"ನಾವು ಮದ್ಲನೆ ಸತಿ ಮಂಡ್ಯು ಪಂಚಾತಿಗೆ ಗೆದ್ದು ಬಂದಾಗ ಅಂಗೆ ಮಾಡಿದ್ರು ಕಂಡ್ಯ" ಎಂದಳು ಜುಮ್ಮಿ.

"ಅದ ಸುರುಮಾಡಿದ್ದು ಜಾಮದಾರ ಭರತ್‌ಲಾಲ್ ಮೀನಾ ಅನ್ನೊ ಅಧಿಕಾರಿ ಕಣೆ. ಅಂಗೆ ನೋಡಿದ್ರೆ ಅಧಿಕಾರಿಗಳಿಗೆ ಎಷ್ಟು ಅನುಭವದೆ ಅಂದ್ರೆ ಅವುರೆ ಬೇಕಾದ್ರೆ ಈ ರಾಜಕಾರಣಿಗಳಿಗೆ ಟ್ರೈನಿಂಗ್ ಕೊಡಬಲ್ಲರು. ಅವುರನ್ಯಲ್ಲ ಬುಟ್ಟು ಮೋದಿ ಕರದು ಮಾನಕಳಕಂಡವಲ್ಲ ಹೇಳು."

"ಇರೋದ ಪಕ್ಷದವು ಏನು ಮಾಡ್ತ ಅವೆ?"

"ಅವು ಕೂಗಾಡಿ ಸುಮ್ಮನಾದೊ ಅತ್ತಗೆ. ಆ ಕಾಂಗ್ರೆಸ್‌ನವು ಇದ್ದಕ್ಕಿದ್ದಂಗೆ ಮುದುಕನಿಗೆ ಪೌರುಸ ಬಂದಂಗೆ ಹೋಗಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಿದ್ರು. ಅವುನ್ಯಲ್ಲ ಪೊಲೀಸ್‌ನೋರು ಹಿಡಿದು ಮುನಿಸಿಪಾಲಿಟಿ ನಾಯಿ ತುಂಬೊ ಗೋಡನ್ನಿಗೆ ತುಂಬದ್ರಂತೆ."

"ಅಗೊಳೊ, ನಾಯಿತಂಬೊ ಗೋಡನ್ನಿಗಾಕಿದ್ರೇ?"

"ಅಂತೂ ಪೊಲೀಸ್‌ನೋರು ಯಂಗವುರೆ ಅಂತ ಕಾಂಗ್ರೆಸ್‌ನೋರಿಗೆ ಈಗ ಗೊತ್ತಾಗಿರಬೇಕು" ಎಂದು ವಾಟಿಸ್ಸೆ ಬಂದ.

"ಅವ್ಯಾಕೆ ಇದಾನ ಸಭೆಗೆ ಮುತ್ತಿಗೆ ಹಾಕಕ್ಕೋಗಿದ್ರೊ? ಅವುರೇನು ನಮ್ಮಂಗಾ. ಯಮ್ಮೆಲ್ಲೆಗಳಿಲ್ಲವೆ?" ಎಂದ ಕಾಳಮಾವ.

"ಯಮ್ಮೆಲ್ಲೆಗಳಷ್ಟೇ ಅಲ್ಲ ದ್ವಡಪ್ಪಾ, ಅವುರಲ್ಲಿ ಭಾಳ ಜನ ಮಾಜಿ ಮಂತ್ರಿಗಳಿದ್ರು. ಅವುರನ್ಯಲ್ಲ ಪೊಲೀಸ್‌ನೋರು ಯಳಕಂಡೋಗಿ ನಾಯಿಶೆಡ್ಡಿಗೆ ತುಂಬದ್ರು."

"ಇಸಿಸಿ, ತಿರಗ ಅದ್ನೆ ಹೇಳತಿಯಲ್ಲಾ, ಇವು ಮುತ್ತಿಗೆ ಹಾಕಿದ್ಯಾಕೆ? ಅವು ನಾಯಿ ಶೆಡ್ಡಿಗಾಕಿದ್ಯಾಕೆ ಅಂತ?"

"ಓ ಅದಾ, ಈ ಎಡೂರಪ್ಪ ನೀನು ಈವರಿಗೂ ಕಂಡರಿದಂತ ಮುಖ್ಯಮಂತ್ರಿ. ವಿಧಾನಸಭೆ ಕರಿತನೆ. ಅದೂ ಮೂರು ದಿನ. ಆ ಮೂರು ದಿನದಲ್ಲಿ ಇವುನ ಸರಕಾರ ಮಾಡಿರೊ ಹಗರಣ ಮಾತಾಡಕ್ಕೆ ಒಂದು ತಿಂಗಳು ಬೇಕು, ಮೂರು ದಿನದಲ್ಲಿ ಮಾತಾಡಕ್ಯಾಗದಿಲ್ಲ, ಅದ್ಕೆ ಈಚೆಗೆ ಬಂದು ಏನಂದಾ ಅಂದ್ರೆ, ವಿರೋಧಪಕ್ಷ ಸರಿಯಾಗಿ ಕ್ಯಲಸ ಮಾಡದಿಲ್ಲ ಅಂದ. ಅದ್ಕೆ ಇವುರು ಹೋಗಿ ಮುತ್ತಿಗೆ ಹಾಕಿದ್ರು. ಅವುರಿಡದು ನಾಯಿ ಶೆಡ್ಡಿಗೆ ತುಂಬಿದ್ರು."

"ಇವುರಿಗೆ ಇರೋದ ಮಾಡಕ್ಕೆ ಬರದಿಲ್ಲ, ಅವುರಿಗೆ ಆಡಳಿತ ಮಾಡಕ್ಕೆ ಬರದಿಲ್ಲ ಅನ್ನಂಗಾಯ್ತು."

"ನಿಜ ಕಣ ಮಾವ ನೀನೇಳಿದ್ದು. ಈ ಬಜೆಪಿಗಳಿಗೆ ಯಾವತ್ತೂ ಆಡಳಿತ ಮಾಡಿ ಗೊತ್ತೆಯಿಲ್ಲ, ಅದೇ ತರ ಈ ವಿರೋಧ ಪಕ್ಷದ ಕ್ಯಲಸ ಮಾಡ್ತಯಿರೋರಿಗೆ ವಿರೋಧ ಮಾಡಿ ಗೊತ್ತಿಲ್ಲ. ಅದ್ಕೆ ಇಬ್ಬರಿಗೂ ಟ್ರೈನಿಂಗ್ ಬೇಕಾಗ್ಯದೆ" ಎಂದ ಉಗ್ರಿ.

"ಅವುರೇನೊ ಟ್ರೇನಿಂಗ್ ತಗತ್ತಾ ಅವುರೆ. ಇವುರ ದೇಳು?" ಎಂದ ಸೀರ.

"ಬಜೆಪಿಗಳಿಗೆ ಟ್ರೈನಿಂಗ್ ಕೊಡಕ್ಕೆ ನಮ್ಮ ಚುಂಚನಗಿರಿ ಮಠ ಸೆಲೆಕ್ಟ್ ಮಾಡಿಕಂಡಿದ್ರಂತೆ ದ್ವಡಪ್ಪ, ಆದ್ರೆ ಮಠದಲ್ಲಿದ್ದೊರು ಭಾಳ ಯೋಚನೆ ಮಾಡಿ, ಅದಲದ್ದೂ ದೇವೇಗೌಡ್ರಿಗೆ ಹೆದ್ರಿಕಂಡು ಇಲ್ಲಿ ಬ್ಯಾಡಿ ಇನ್ನೆಲ್ಲಾರ ಮಾಡಿ ಅಂತ ಕಳಿಸಿದರಂತೆ" ಎಂದ ವಾಟಿಸ್ಸೆ.

"ಚುಂಚನಗಿರಿಲೇನಾರ ಮಾಡಿದ್ರೆ ಭಾಳ ಕಷ್ಟೆಸುದು ಬರದು. ಮದ್ಲೆ ಸ್ವಾಮಿ ಕಂಡ್ರೆ ದ್ಯಾವೇಗೌಡ್ರಿಗಾಗದಿಲ್ಲ" ಎಂದ ಉಗ್ರಿ.

"ದ್ಯಾವೇಗೌಡನಿಗ್ಯಾಕಾಗದಿಲ್ಲಾ?" ಎಂದಳು ಜುಮ್ಮಿ.

"ಆಗದಿಲ್ಲ ಅಂದ್ರೆ ವಾದಕ್ಕೆ ಬೇಯ್ತಿರಲಿಲ್ಲಾ ಕಣೆ. ಯಾಕೆ ಅಂದ್ರೆ ದ್ಯಾವೇಗೌಡ್ರು ಕ್ಯಂಗೇರಿ ಸ್ವಾಮಿಯ ಚುಂಚನಗಿರಿ ಸ್ವಾಮಿ ಎದ್ರಿಗೆ ಎತ್ತಿ ಕಟ್ಟಿದ್ರು. ಆದ್ರೆ ಆ ಸ್ವಾಮಿ ಕಾಲವೇ ಕೊಡ್ತಿಲ್ಲ, ಅಂಗೆ ಮಡಕೊಂಡೊ. ಈ ಮುದಿ ಎತ್ತ ಚುಂಚನಗಿರಿ ಗೂಳಿ ಎದ್ರಿಗೆ ನಿಲ್ಸಕ್ಯಾಗದಿಲ್ಲ ಅಂತ ಗೌಡ್ರು ಸುಮ್ಮನಾದ್ರತ್ತಗೆ. ಆದ್ರೆ ಯಾವಾಗ ಸ್ವಾಮಿ ಕೇಣಿ ಕರದು ಸನುಮಾನ ಮಾಡಿದ್ರೊ ಅವತ್ತಿಂದ ತಿರಗ ಗೌಡ್ರು ತಿರುಗಿ ಬಿದ್ದವುರೆ."

"ಕೇಣಿಗೆ ಸನುಮಾನ ಮಾಡಿದ್ರೆ, ಅವುನಿಗ್ಯಾಕೆ ವಟ್ಟೆಉರೀ?"

"ಕೇಣಿಗೂ, ದ್ಯಾವೇಗೌಡ್ರಿಗೂ ರಸ್ತೆ ಗಲಾಟ ಹತ್ತಿಗಂಡು ಬಾಳ ದಿನದಿಂದ ನ್ಯಡಿತಾ ಅದೆ. ಅಂತದ್ರಲ್ಲಿ ಅವುನ್ನ ಕರದು ಸನುಮಾನ ಮಾಡಿದ್ರೆ ಗೌಡ್ರು ಸುಮ್ಮನಿದ್ದರೆ?"




"ಚುಂಚನಗಿರಿ ಸ್ವಾಮಿ ಸನುಮಾನವ ಸುಮ್ಮಸುಮ್ಮನೆ ಮಾಡದಿಲ್ಲ ಕಣ್ರೊ. ಕೇಣಿ ಐದಾರು ಕೋಟಿ ರೂಪಾಯಿ ಖರ್ಚು ಮಾಡಿ ಹಾಸ್ಟಲ್ ಕಟ್ಟಿಸಿ ಕೊಡ್ತಿನಿ ಅಂದ, ಅದ್ಕೆ ಸನ್ನಮಾನ ಮಾಡಿದ್ರು" ಎಂದ ಉಗ್ರಿ.

"ಏನಾರ ಮಾಡ್ನಿ ಎಡ್ಯೂರಪ್ಪನ ಕಳ್ಳ ಕಾಕರ ಟೀಮ ಮಠಕ್ಕೆ ಕರದು ಟ್ರೈನಿಂಗ ಕೊಡಕ್ಕೆ ಅವುಕಾಸ ಕೊಡಲಿಲ್ಲವಲ್ಲ ಹೇಳು."

"ಆ ಸುತ್ತೂರು ಸ್ವಾಮಿ ಹೆಚ್ಚುಕಮ್ಮಿ ಎಡೂರಪ್ಪನ ಸರಕಾರ ಇದ್ದಂಗೆ ಇದ್ದನಂತೆ. ಹಾಳುಬಿದ್ದ ಭೂಮಿ ಎಲ್ಯದೆ ಅಂತ ಹುಡುಕ್ತನಂತೆ. ಅಂಥೋನು ಈ ಎಡೂರನ ಪಟಾಲಂ ಕರದು ಟ್ರೈನಿಂಗ್ ಕೊಡಕ್ಕೆ ಜಾಗ ಕೊಡದ್ರಲ್ಲಿ ಏನು ಇಶೇಷಾ ಇಲ್ಲ ಬುಡು. ಮುಂದೊಂದಿನ ಆ ಮಠನು ರೈಡ್ ಮಾಡಿಸಿಗತ್ತದೆ. ಯಾಕೊ ಯಡ್ಡಿ ಸವಾಸ ಮಾಡಿದ ಮಠದ ಮ್ಯಾಲೆ ರೈಡಾಯ್ತಯಿದ್ದತಂತೆ. ನೋಡು ಈಗಾಗ್ಲೆ ಸಿರಿಗೆರೆ ಮಠ ರೈಡಾಯ್ತು."


"ಸಿರಿಗೆರೆ ಸ್ವಾಮಿ ಸುತ್ತೂರು ಸ್ವಾಮಿ ಒಂಥರ ಬ್ರದರ್ಸ್ ಇದ್ದಂಗೆ. ಅವರು ಎಮ್ಮೆಲ್ಲೆ ಯಲಕ್ಷನಿಗೆ ನಿಲ್ಲದು ವಳ್ಳೆದು." ●




"ಬೇಡಿ!"

ಇದನ್ನು ನಗುತ್ತಾ ಬರೆಯುತ್ತಿದ್ದೇನೆ. ನಾವು ಕೆಲವು ಸಲ ಮೂಲೆಯಲ್ಲಿ ಜಾಗ ಉಳಿದರೆ, ಪುಟದ ಅಂದ ಹೆಚ್ಚಿಸಲು ಸ್ವಲ್ಪ ರಂಜಕವಾದ ...ಗಳನ್ನು ಅಚ್ಚು ಮಾಡುವುದುಂಟು. ಇವೆಲ್ಲ ಪ್ರಖ್ಯಾತ ...ಗ್ರಾಫರ್‌ಗಳು (ಸಿಸಿಲ್ ಬೀಟನ್, ಮೈಕೆಲ್ ಬುಸೆಲ್, ರಾಸ್ ...ಸೋಲಿಯರ್) ತೆಗೆದ ಫೋಟೋಗಳು. ಮಾನವ ದೇಹದ ... ತೋರುವ ಚಿತ್ರಗಳು. ನಾವು ಎಂದೂ ಕೀಳುಮಟ್ಟದ ...ತ್ರಗಳನ್ನು, ಕೆಟ್ಟ ಅಭಿರುಚಿಯ ಜನ ತೆಗೆದ ಚಿತ್ರಗಳನ್ನು ...

...ರಾತು ಸ್ವೀಕರಿಸದೆ ಇರುವ ನಮ್ಮ ಪತ್ರಿಕೆಯಲ್ಲಿ ಭಾರತದಲ್ಲಿ ...ವಾಗುತ್ತಿರುವ 'ಕಾಮಸೂತ್ರ'ಗಳನ್ನು ಪ್ರಕಟಿಸಲಾಗುವುದಿಲ್ಲ, ನೀವು ...ನ್ನು ನೋಡಿರಬಹುದು. ಅವುಗಳು ಕೀಳು ಅಭಿರುಚಿಯ ಚಿತ್ರಗಳು ... ಹೇಳುತ್ತಿಲ್ಲ; ಫೋಟೋ ಗುಣಮಟ್ಟದ ಬಗ್ಗೆ ಮಾತ್ರ ಹೇಳುತ್ತಿದ್ದೇನೆ. ... ಇಬ್ಬರು ಮೂವರು ಅವಿವೇಕಿಗಳು ಕಾರ್ಡ್ ಬರೆದು ನಮ್ಮ ...ಗ್ಗೆ ಗೊಣಗುತ್ತಲೇ ಇರುವುದರಿಂದ ಪ್ರಖ್ಯಾತ ಬೇಡಿ ಇರುವ ಈ ...ವನ್ನು ಇಲ್ಲಿ ಚಿಕ್ಕದಾಗಿ ಕೊಡುತ್ತಿದ್ದೇನೆ. ಇದನ್ನೂ ನೋಡಿ ... ಇಲ್ಲಿ ಇರುವುದು ಬರೀ ಚಿತ್ರವಲ್ಲ, ACTION!



ಜೊತೆಯ ಸಾಹಿತಿಗಳು



ನಮ್ಮ ಕಾಲದ ಕೆಲವರು ಸಾಹಿತಿಗಳು ಸುದ್ದಿಯ ಮೂಲಕವೇ ಪ್ರಖ್ಯಾತರಾಗಿರುತ್ತಾರೆ. ಒಮ್ಮೆ ಹೆಸರು ಬಂದೊಡನೆ ಅವರ ಪ್ರತಿಯೊಂದು ಕೃತಿಯೂ ವಿಮರ್ಶಕರಿಗೆ ಅರ್ಥಪೂರ್ಣವಾಗಿ ಕಾಣತೊಡಗುತ್ತವೆ. ಅಂಥವರಲ್ಲಿ ಅಗ್ರಗಣ್ಯರು ವಿ.ಎಸ್. ನಾಯ್‌ಪಾಲ್ ಮತ್ತು ಸಲ್ಮಾನ್ ರಶ್ದಿ. ನಾಯ್‌ಪಾಲ್‌ರ ಕೃತಿಗಳಲ್ಲಿ ವಿವರಗಳಿದ್ದರೂ ಅರ್ಥಪೂರ್ಣವಾಗುವುದಿಲ್ಲ; ಸ್ವಪ್ರತಿಷ್ಠೆಯ ಗ್ರಹಿಕೆಯಿಂದ ಎಲ್ಲವೂ ಕಡಹಡೆದ ಅನುಭವಗಳೆನ್ನಿಸುತ್ತದೆ. ಸಲ್ಮಾನ್ ರಶ್ದಿಯೂ ಅಷ್ಟೆ. ಈತನ 'ಸೇಟನಿಕ್ ವರ್ಸಸ್' ಕಲೆ ಪ್ರತಿಷ್ಠೆಯ ಪುಸ್ತಕ, ಬೆಂಕಿಗೆ ಕೈಹಾಕಿ ಚೀರಿಕೊಳ್ಳುವ ವ್ಯಸನದ್ದು. ಹಾಗೆಯೇ ಬಹಳ ಹೆಸರು ಗಳಿಸಿರುವ 'ಮಿಡ್‌ನೈಟ್ ಚಿಲ್ಡ್ರನ್' ನೋಡಿ. ಇಲ್ಲಿಯ ಮುಖ್ಯ ದೃಶ್ಯಗಳೆಲ್ಲ ಒಂದಲ್ಲ ಒಂದು ಕಡೆ ಸ್ಪ್ಯಾನಿಶ್ ಲೇಖಕ ಗಾರ್ಸಿಯಾ ಮಾರ್ಕ್ವೆಸ್‌ನಲ್ಲಿ ಸಿಗುತ್ತವೆ. ಕಥೆ ಹೇಳುವ ಶೈಲಿ ಕೂಡ ಅವನಿಂದ ಪಡೆದದ್ದು.

ಸಮಕಾಲೀನ ಲೇಖಕರ ಬಗ್ಗೆ, ವ್ಯಕ್ತಿಗಳ ಬಗ್ಗೆ ಕರಾರುವಾಕ್ಕಾಗಿ ಹೇಳುವುದು ಕಷ್ಟ. ಒಂದು ರೀತಿಯಲ್ಲಿ ನಮ್ಮೆಲ್ಲರ ಅನುಭವವೂ ಒಂದೇ; ಕೆಲವರು ಲೇಖಕರಿಗೆ ಹೆಚ್ಚು ದಕ್ಕುತ್ತದೆ, ಇನ್ನು ಕೆಲವರಿಗೆ ಕಡಿಮೆ ಸಿಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ ನಮ್ಮಲ್ಲಿ ಸ್ವಲ್ಪವೂ ಹತ್ತಾರ ಹುಟ್ಟಿಸದಿರುವ, ತನ್ನ ವಲಯಕ್ಕೆ ಪೂರ್ತಿ ನಿಷ್ಠನಾದ ಲೇಖಕ ಗಾರ್ಸಿಯಾ ಮಾರ್ಕ್ವೆಸ್. 'ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್' ಬರೆದ ವ್ಯಕ್ತಿಗೆ 1982 ರಲ್ಲೇ ನೊಬೆಲ್ ಬಹುಮಾನ ಸಿಕ್ಕಿತು. ಅದನ್ನು ಅಪ್ಪಿಕೊಂಡು ಈತ ಸುಮ್ಮನೆ ಕೂರಬಹುದಿತ್ತು, ಮಾರ್ಕ್ವೆಸ್ ಹಾಗೆ ಮಾಡಲಿಲ್ಲ. ತನ್ನ ಮೊದಲ ಕತೆ, ಕಾದಂಬರಿಗಳಷ್ಟೇ ಗಂಭೀರವಾಗಿ, ಅರ್ಥಪೂರ್ಣವಾಗಿ ಬರೆಯುತ್ತಲೇ ಹೋದ–ಈತನ 'ಲವ್ ಇನ್ ದಿ ಟೈಮ್ ಆಫ್ ಕಾಲರಾ' ಮತ್ತು 'ದಿ ಜನರಲ್ ಇನ್ ಹಿಸ್ ಲ್ಯಾಬರಿಂತ್' ಕಾದಂಬರಿಗಳು ತಮ್ಮ ದಟ್ಟ ಮಾಹಿತಿ, ಅನುಭವದಿಂದ ನಮ್ಮನ್ನು ಅಲ್ಲಾಡಿಸುತ್ತವೆ. ನಾನು ಈಗ ಓದುತ್ತಿರುವ, ನನ್ನೆದುರಿಗಿರುವ ಎರಡನೆಯ ಪುಸ್ತಕ ನೋಡಿ ಅಚ್ಚರಿಯಾಗುತ್ತದೆ. ಸುಮಾರು ಹತ್ತು ವರ್ಷ ತನ್ನ ನಾಡಿನ ಮಹಾನ್ ನಾಯಕ ಸೈಮನ್ ಬೊಲಿವಾರ್ ಬಗ್ಗೆ ಸಂಶೋಧನೆ ನಡೆಸಿ, ಅಸಂಖ್ಯಾತ ಜನರನ್ನು ಸಂಪರ್ಕಿಸಿ ಬರೆಯುತ್ತಾನೆ. ದಕ್ಷಿಣ ಅಮೆರಿಕಾದ ಐದು ದೇಶಗಳಿಗೆ ನಾಯಕನಾಗಿದ್ದ ಬೊಲಿವಾರ್‌ನ ಜೀವನದ ದ್ವಂದ್ವಗಳನ್ನು ಅಭ್ಯಸಿಸಿ ಕಾದಂಬರಿ ಕಟ್ಟುತ್ತಾನೆ. ಇನ್ನೊಬ್ಬ ನಾನು ಮೆಚ್ಚುವ ವ್ಯಕ್ತಿ ಯಾವುದೇ ಹಿಂಜರಿಕೆ ಇಲ್ಲದೆ ಹೊಗಳುವ ಮಹಾನುಭಾವ ಇದ್ದಾನೆ. ಈತ ಮೂಲಭೂತವಾಗಿ ಲೇಖಕನಲ್ಲ– ಕೃಷಿಕ. ಫುಕುವೋಕಾ ಈ ನಾಗರಿಕತೆಗೆ ಎಷ್ಟು ಮುಖ್ಯ ಎಂಬುದನ್ನು ಬಲ್ಲಿರಿ; ಇಡೀ ಜಗತ್ತು ನೆಲಕ್ಕೆ ವಿಷ ಸುರಿಯುತ್ತಿರುವಾಗ ಈ ಫುಕುವೋಕಾ ಭೂಮಿಯನ್ನು ಪ್ರೀತಿಸಿದ. ಈ ಪ್ರೀತಿಯ ನೆಲದಿಂದ ನೈಸರ್ಗಿಕವಾಗಿ ಬೆಳೆಯುವುದನ್ನು ಕಂಡುಹಿಡಿದ. ಇದು ಭೂಮಿಯ ಕೃಷಿ ಮಾತ್ರವಲ್ಲ, ಮನುಷ್ಯನ ವ್ಯಕ್ತಿತ್ವದ ಕೃಷಿ; ಈ ಬದುಕಿಗೆ ಯಾವುದು ಮುಖ್ಯ, ಯಾವುದು ಗೌಣ ಎಂಬ ಶೋಧನೆ. ಫುಕುವೋಕಾಗೆ ಈಗ 82 ವರ್ಷ. ಈತ ಬರೆದ ಪುಸ್ತಕಗಳು (ಒನ್ ಸ್ಟ್ರಾ ರೆವಲ್ಯೂಷನ್ ಮುಂತಾದವು) ಯಾವುದೇ ಶ್ರೇಷ್ಠ ಕಾದಂಬರಿಯಷ್ಟೇ ಮುಖ್ಯ ಎಂದು ನಾನು ತಿಳಿದಿದ್ದೇನೆ.

–ಡಿಸೆಂಬರ್ 15, 1991

ನಾಯಿ ಶೆಡ್ಡಿನಲ್ಲಿದ್ದೋನೆ ನಾಯಕ

ಆಡಳಿತದಲ್ಲಿರುವವರು ಪೊಲೀಸರನ್ನು ಜೀತದಾಳುಗಳಿಗಿಂತಲೂ ಕೀಳಾಗಿ ನಡೆಸಿಕೊಳ್ಳುತ್ತಾರೆ. ಪೊಲೀಸ್ ಅಧಿಕಾರಿಗಳನ್ನು ಫುಟ್ಬಾಲ್ ಚೆಂಡಿನಂತೆ ಬಳಸಿಕೊಂಡು ನಿಯಮಬಾಹಿರವಾಗಿ ವರ್ಗಾವಣೆ ಮಾಡಲಾಗುತ್ತಿದೆ. ಇದರಿಂದಾಗಿ ಕಾನೂನು ವ್ಯವಸ್ಥೆ ಕುಸಿಯುವಂತಾಗಿದೆ ಎಂದು ರಾಜ್ಯಪಾಲರು ಕಳವಳ ವ್ಯಕ್ತಪಡಿಸಿದ್ದಾರೆ. ಈ ಹಿಂದೆ ಅಲ್ಪಸಂಖ್ಯಾತರು ಆತಂಕದ ನೆರಳಿನಲ್ಲಿ ಬದುಕುವಂತಾಗಿದೆ ಎಂದು ಹೇಳಿದ್ದರು. ಅವರ ಈ ಹೇಳಿಕೆಗಳು ವ್ಯವಸ್ಥಿತವಾಗಿ ಚರ್ಚ್‌ಗಳ ಮೇಲೆ ನಡೆಯುತ್ತಿರುವ ದಾಳಿ, ದೈನಿಕ ಧಾರಾವಾಹಿಯಂತೆ ಬರುತ್ತಿರುವ ಪೊಲೀಸ್ ಅಧಿಕಾರಿಗಳ ವರ್ಗಾವಣೆ ಪಟ್ಟಿ ನೋಡಿದರೆ ಸತ್ಯವೇ ಆಗಿದೆ ಎಂದು ಜನಸಾಮಾನ್ಯರಿಗೆ ಅಪ್ಯಾಯಮಾನವಾಗಿರಬಹುದು. ಮುಖ್ಯಮಂತ್ರಿಗಳಿಗೆ

ಅಣಕ

►► ಎಚ್.ಎಲ್. ಕೇಶವಮೂರ್ತಿ

ಇದು ಕಾದಸೀಸ ಕಿವಿಗೆ ಸುರಿದಂತೆ ಆಗಿದೆ.

ಶೋಭಾಯಮಾನವಾದ ಜಂಬೂ ಸವಾರಿಯನ್ನು ಕಣ್ತುಂಬಿಸಿಕೊಂಡು ಮೈಮನಗಳಿಗೆ ಆನಂದ ತರಿಸೋಣ ಎಂದು ಮೈಸೂರಿಗೆ ದಯಮಾಡಿಸಿದರೂ ಇಂತಹದ್ದೇ ಪ್ರಶ್ನೆಯನ್ನು ಮಾಧ್ಯಮದವರೂ ಕೇಳಿದಾಗ ಅವರು ಕೆಂಡಾಮಂಡಲ ಆದರಂತೆ. ಎಂತಹವರೂ ಆಗಬೇಕಾಗಿದ್ದೆ. ರಾಷ್ಟ್ರಮಟ್ಟದ ಇಂಗ್ಲಿಷ್ ನಿಯತಕಾಲಿಕವೊಂದು ಭೇಷ್ ಆಡಳಿತ ನಡೆಸುತ್ತಿದ್ದೀರಿ ಎಂದು ಪ್ರಶಸ್ತಿ ನೀಡಿದ್ದರೂ ಅದನ್ನು ಪರಿಗಣಿಸದೇ ರಾಜ್ಯಪಾಲರ ಮಾತನ್ನೇ ಹಿಡಿದು ಪ್ರಶ್ನಿಸುವವರನ್ನು ಕಂಡರೆ ಕೋಪಬಾರದೆ ಇದ್ದೀತೆ. ಅದಕ್ಕೂ ಮಿಗಿಲಾಗಿ ಪ್ರಶಸ್ತಿ ದೊರೆತಿರುವುದನ್ನು ತಾನಾಗಿಯೇ ಮತ್ತೆ ಮತ್ತೆ ಹೇಳಿಕೊಳ್ಳಬೇಕಾದ ದುಸ್ಥಿತಿ ಇದಕ್ಕೆ ತುಪ್ಪ ಹುಯ್ದಂತೆ ಮಾಡಿತಂತೆ. ನಾನರಿಯನೆ ಆ ರಾಜ್ಯಪಾಲನನ್ನು ಅನ್ನುವ ಧಾಟಿಯಲ್ಲೇ ಉತ್ತರಿಸಿದರಂತೆ. ಪೊಲೀಸರ ಆಂತರಿಕ ಆಡಳಿತದಲ್ಲಿ ಸರ್ಕಾರ ಮೂಗು ತೂರಿಸುವುದಿಲ್ಲ. ಮಹಾ ನಿರ್ದೇಶಕರ ತೀರ್ಮಾನವೇ ಅಂತಿಮ ಎಂದು ಸಾರಿ, ಮಾಹಿತಿ ಕೊರತೆಯಿಂದ ರಾಜ್ಯಪಾಲರು ಇಂತಹ ಹೇಳಿಕೆ ನೀಡಿದ್ದಾರೆ ಎಂಬುದಾಗಿ ಮುಖ ಊದಿಸಿಕೊಂಡೇ ಉತ್ತರಿಸಿದರಂತೆ. ಮಹಾಜನತೆ ಇದನ್ನು ತೀರ್ಮಾನಿಸಲಿ ಎಂದು ಉರುವಾರಿ ಮುಸಡೀನಲೇ ಉಸುರಿದರಂತೆ. ಪೊಲೀಸ್ ಮಹಾನಿರ್ದೇಶಕರು ನಿಮ್ಮ ಮಾತಿನಂತೆ ನಡೆಯುವತನಕ ಅವರ ಮಾತೇ ಅಂತಿಮ ಎಂದ ನಿಮ್ಮ ಮಾತಿನ ಅರ್ಥ ಏನು ಯಾರೂ ಕೇಳಲಿಲ್ಲವಂತೆ. ಉರಿಮುಸುಡಿ ನೋಡೇ ಭಯದಿಂದಲೋ ಅಥವಾ ಇವನ ಬಾಯಿಯಿಂದ ಇನ್ನೇನು ಬರಲು ಸಾಧ್ಯ ಅಂತಾನೋ ಯಾರೂ ಈ ಕುರಿತು ಪ್ರಶ್ನಾವಳಿ ಮುಂದುವರೆಸದೇ ಇರಬಹುದು.

ಯಡ್ಯೂರಪ್ಪ V/s ಎಚ್.ಆರ್. ಭಾರದ್ವಾಜ್ ಜಟಾಪಟಿ ಈಗ ಜನಸಾಮಾನ್ಯರ ಎದುರು ಬಂದಿದೆ. ಅವರ ಆಡಳಿತ ವೈಖರಿನೇ ಇಂತಹದ್ದು, ಇದ್ದಕ್ಕಿದ್ದಂತೆ ಜನರ ತೀರ್ಮಾನ ಮುಖ್ಯ ಅನ್ನಿಸಿಬಿಡುತ್ತೆ. ನಿಮ್ಮದು ರ್‍ಯಾಸ್ಕಲ್ ಸರ್ಕಾರ ಅಂದಿದ್ದಾರಲ್ಲ ಅಂತ ಯಾರೋ ಕೇಳಿದ್ದಕ್ಕೆ ಎಷ್ಟೊಂದು ನಮ್ರತೆ, ನಯದಿಂದ ಉತ್ತರಿಸಿದರು ಈ ಯಡ್ಯೂರಪ್ಪ! 'ಅದನ್ನ ಜನತೆ ತೀರ್ಮಾನಕ್ಕೆ ಬಿಟ್ಟಿದ್ದೀನಿ' ಅಂದಿದ್ದರು! ಈಗಲೂ ಜನತೆಯ ತೀರ್ಮಾನಕ್ಕೆ ಬಿಟ್ಟಿದ್ದಾರೆ.

ಈಗ ಜನ ಅಂದರೆ ನಾವು ನೀವು ನ್ಯಾಯ ಹೇಳಬೇಕಾಗಿದೆ. ಆದರೆ ಒಂದು ರೀತಿಯ ಆರ್ಥಿಕ ಆಮಿಷವೂ ಇಲ್ಲಿಲ್ಲ. ಸರ್ಕಾರ ಇಕ್ಕಟ್ಟಿಗೆ ಸಿಕ್ಕಿದಾಗ ಘೋಷಿಸುವ 'ನಿವೃತ್ತ ನ್ಯಾಯಾಧೀಶರಿಂದ ತನಿಖೆ' ಇದಲ್ಲ. ಇಂತಹ ನ್ಯಾಯಾಧೀಶರ ತನಿಖೆಯಿಂದ ಏನು ಹೊರಬರಬಹುದು ಎಂದು ಎಲ್ಲರಿಗೂ ತಿಳಿದಿರುವುದೇ. ಆದರೂ ಎಲ್ಲರಿಗೂ ಒಂದು ರೀತಿಯ ತೃಪ್ತಿ. ವಿಪಕ್ಷಗಳಿಗೆ ಸರ್ಕಾರದ ಮಾನ ಹರಾಜು ಹಾಕಿದೆವು ಎಂಬ ತೃಪ್ತಿ; ಇದರಿಂದ ಅಂತೂಇಂತೂ ಪಾರಾದೆವಲ್ಲ ಎಂದು ಸರ್ಕಾರಕ್ಕೆ ತೃಪ್ತಿ; ನ್ಯಾಯಾಧೀಶರಿಗೆ ಒಂದೆರಡು ಮೂರು ವರ್ಷ ಇದರ ನೆಪದಲ್ಲಿ ಐಷಾರಾಮಿ ಜೀವನ ನಡೆಸಬಹುದಲ್ಲ ಎಂಬ ತೃಪ್ತಿ! ಎಲ್ಲರಿಗೂ ತೃಪ್ತಿಯೋ ತೃಪ್ತಿ!

ಅರೆ, ನೊಂದವರು ಅಂತ ಇರ್ತಾರಲ್ಲ ಅವರ ಸುಳಿವೇ ಕಾಣಿಸುತ್ತಿಲ್ಲವಲ್ಲ ಎಂದು ಕೊರಗಬೇಕಿಲ್ಲ. ಸಮಯ ಸಂದರ್ಭ, ವ್ಯಕ್ತಿಯ ಹಿನ್ನೆಲೆ–ಮುನ್ನೆಲೆ ಇವುಗಳ ಆಧಾರದ ಮೇಲೆ ನೊಂದವರಿಗೆ ಏನಾದರೂ ಸಿಗಬಹುದು.

ವೀರಪ್ಪನ್ ಸತ್ತರೂ ಅವನ ನೆರಳು ಮಾತ್ರ ಇನ್ನೂ ಜೀವಂತವಾಗಿದೆ. ಅದು ಕೆಲವರಿಗೆ ಸುಖಸಂಪತ್ತನ್ನು ಹಲವರಿಗೆ ಕಡುದಾರಿದ್ರ್ಯದ ಕಷ್ಟಕೋಟಲೆಗಳನ್ನೂ ಕೊಡುತ್ತಲೇ ಇದೆ. ನಾಗಪ್ಪ ಮರಣದ ನಂತರ ತನಿಖೆಗೆ ಎಂದು ಘನ ಸರ್ಕಾರ ಒಂದು ಆಯೋಗ ರಚಿಸಿತ್ತಲ್ಲ, 'ಅದು ಇತ್ತೀಚೆಗೆ ವರದಿ ನೀಡಿದೆಯಂತೆ. ದಯಾಳುಗಳಾದ ನ್ಯಾಯಾಧೀಶರು ವರದಿಯ ಮಧ್ಯೆ 'ನೊಂದವರಿಗೆ ಸರ್ಕಾರ ಸೂಕ್ತ ಪರಿಹಾರ ನೀಡಬೇಕು' ಎಂದು ಒಂದು ಸಾಲು ಸೇರಿಸಿದ್ದಾರಂತೆ. ಇಲ್ಲಿ ನೊಂದವರು ಯಾರು ಎಂಬ ಪ್ರಶ್ನೆಗೆ ಅವಕಾಶವೇ ಇಲ್ಲ, ಪ್ರಮೀಳಾ ನಾಗಪ್ಪ ಅವರೇ ಅವರು! ಅವರಿಗೆ ತಮ್ಮ ಪತಿದೇವರ ಹೆಸರನ್ನು ಚಿರಸ್ಥಾಯಿಯಾಗಿ ಉಳಿಸಬೇಕೆಂಬ ಉಮೇದು. ಅವರ ಹೆಸರಿನ ವಿದ್ಯಾಲಯ ಮಾಡಿದರೆ ಇದು ಸಾಧ್ಯ ಅನ್ನಿಸಿತಂತೆ. ಯಾಕೋ ಏನೋ ಗೊತ್ತಿಲ್ಲ, ಎಲ್ಲರಿಗೂ ಅಕ್ಷರದಾನವೇ ಹೆಚ್ಚು ಪ್ರಯೋಜನಕಾರಿ ಇತ್ತೀಚೆಗೆ ಅನ್ನಿಸುತ್ತಿದೆ. ಅದರಂತೆ ಅವರಿಗೂ ಆಗಿರಬೇಕು. ಅದಕ್ಕೆ ಭೂಮಿ ಬೇಕು. ಹನೂರಿನಲ್ಲಿ ಅವರದ್ದೇ ಸಾಕಷ್ಟು ಭೂಮಿ ಇದೆಯಲ್ಲ, ಅಲ್ಲಿ ಸ್ಥಾಪಿಸಿದರೆ ಗ್ರಾಮೀಣ ಅಭಿವೃದ್ಧಿನೂ ಆಗುತ್ತದೆ; ತಾನು ಹುಟ್ಟಿ ಬೆಳೆದ ಮಣ್ಣಿನಲ್ಲಿ ಇಂತಹ ಕಾರ್ಯ ನಡೆಯುತ್ತಿದೆಯಲ್ಲಾ ಅಂತ ಅವರ ಆತ್ಮಕ್ಕೂ ತೃಪ್ತಿ ಎಂದು ನಮಗೆ ನಿಮಗೆ ಅನ್ನಿಸಬಹುದು. ಆದರೆ ಪ್ರಮೀಳಾ ಅವರಿಗೆ ತನ್ನ ಪತಿದೇವರ ಕೀರ್ತಿ ದೇಶವಿದೇಶಗಳಲ್ಲೂ ಮೆರೀಲಿ ಅನ್ನೋ ಹಂಬಲ. ಹನೂರು ಅಂತಹ ಕೊಂಪೆಯಲ್ಲಿ ವಿದ್ಯಾಸಂಸ್ಥೆ ಸ್ಥಾಪಿಸಿದರೆ ಮೂಸಿ ನೋಡುವವರು ಯಾರು ಅಂತಾನೋ ಏನೋ.. ಹತ್ತು ಎಕರೆ ಭೂಮಿಯನ್ನು ನೀಡುವಂತೆ ಸರ್ಕಾರವನ್ನು ಕೋರಿದ್ದಾರಂತೆ. ಎಲ್ಲಿ ಅಂತೀರಿ... ಬೆಂಗಳೂರಿನ ಸುತ್ತಮುತ್ತಲಿನಲ್ಲಿ! ಹಣಕಾಸಿನ ವಿಷಯ ಇಲ್ಲಿ ಅಸ್ಯತಾ ಅನ್ನಿಸುತ್ತೆ, ತಮ್ಮದೇ ಪಕ್ಷದವರು ಅದೂ ಪ್ರಮೀಳಾ ನಾಗಪ್ಪ ಕೇಳಿದರೆ ಇಲ್ಲ ಅನ್ನೋಕೆ ಯಡ್ಯೂರಪ್ಪನ ಹೆಂಗರುಳು ಬಿಡಬೇಕಲ್ಲ, ಕೊಡಲು ಒಪ್ಪಿದೆಯಂತೆ!

ಇಂತಹ ಭಾಗ್ಯ ನಮಗಿಲ್ಲವಾದರೂ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಇತ್ತೀಚಿನ ಘಟನೆಗಳ ಆಧಾರದ ಮೇಲೆ ಒಂದು ಸ್ಪಷ್ಟ ನಿರ್ಣಯಕ್ಕೆ ಬರಬೇಕಾಗಿದೆ.

ಮೊನ್ನೆ ಮೊನ್ನೆ ಏನಾಯಿತು. ಕಾಂಗ್ರೆಸ್ ನಾಯಕರು ಶಕ್ತಿಕೇಂದ್ರವಾದ ವಿಧಾನ ಸೌಧಕ್ಕೆ ದಿಗ್ಬಂಧನ ಹಾಕ್ತೀವಿ ಅಂತ ವೀರಾವೇಶದಿಂದ ಹೊರಟರಲ್ಲ, ವಿಧಾನಸೌಧಕ್ಕೆ ಪೊಲೀಸರ ಸರ್ಪಗಾವಲು ಇತ್ತು, ನಾವು ಮಾಡಬೇಕಾದ ಕೆಲಸಾನ ಪೊಲೀಸಿನವರೇ ಮಾಡಿದ್ದಾರಲ್ಲ ಎಂದು ತೆಪ್ಪನೆ ಹೋಗಿದ್ದರೂ ಆಗುತ್ತಿತ್ತು, ಮಾತಿಗೆ ತಪ್ಪದ ವೀರರಲ್ಲ



ಅವರು. ಮುತ್ತಿಗೆ ಹಾಕಲು ಹೊರಟರು. ಇಲ್ಲಿ ಯಡ್ಯೂರಪ್ಪನ ಸಂವಿಧಾನ ಪ್ರೀತಿಯನ್ನು ಒಪ್ಪಬೇಕು. ಸುಮ್ಮಸುಮ್ಮನೆ ಅವರ ಮೇಲೆ ಆರೋಪ ಮಾಡಬಾರದು. ಪ್ರಜಾಪ್ರಭುತ್ವದಲ್ಲಿ ಪ್ರತಿಭಟಿಸುವ ಹಕ್ಕು ಎಲ್ಲರಿಗೂ ಇದೆ ಎಂದು ಸಾರಿದರು. ಆದರೆ ಶಾಂತಿ ಸುವ್ಯವಸ್ಥೆ ಕಾಪಾಡಬೇಕಲ್ಲ ಎಲ್ಲವನ್ನೂ ನೀವೇ ನಿಭಾಯಿಸಿ ಎಂದು ಬೆಂಗಳೂರಿನ ಪೊಲೀಸ್ ಆಯುಕ್ತ ಶಂಕರ ಬಿದರಿಗೆ ಸಂಪೂರ್ಣ ಅಧಿಕಾರ ನೀಡಿದರು. ಆಡಳಿತದಲ್ಲಿ ಮುಖ್ಯಮಂತ್ರಿಯಾಗಲೀ, ಗೃಹಮಂತ್ರಿಯಾಗಲೀ ಮೂಗು ತೂರಿಸಲಿಲ್ಲ!

ಪೊಲೀಸ್ನೋರು ಭದ್ರತೆ ಕಾಪಾಡಬೇಕಲ್ಲ ಅಂತಾವ ಪ್ರತಿಭಟನಾಕಾರರನ್ನೆಲ್ಲ ಕರ್‍ದು ಪೊಲೀಸ್ ವ್ಯಾನಿಗೆ ಕುರಿ ತುಂಬಿದಂಗೆ ತುಂಬಿ ಆಡುಗೋಡಿ ನಾಯಿ ಶೆಡ್ಡಿಗೆ ಕೂಡಿದರು. ಅದು ನಾಯಿ ಶೆಡ್ಡೇ ಇರಬಹುದು. ಅಲ್ಲಿದ್ದಿರಬಹುದಾದ ಗಲೀಜನ್ನೆಲ್ಲ ಬೆಳಗ್ಗೆನೇ ಗುಡಿಸಿಹಾಕಿ ಕಾಂಗ್ರೆಸ್ ನಾಯಕರ ಸ್ವಾಗತಕ್ಕೆ ಅಣಿಗೊಳಿಸಿದ್ದರು. ನಾಯಿಗಳು ನೀಡಿದ್ದ ತೀರ್ಥಪ್ರಸಾದಗಳಿಂದ ಉಂಟಾಗುವ ಕಮಟುವಾಸನೆ ಇನ್ನೂ ಇತ್ತು ಎಂಬುದು ಕಾಂಗ್ರೆಸ್ ಆರೋಪ. ಅದು ನಾಯಿಗಳ ತಪ್ಪೇ ಹೊರತು ಪೊಲೀಸನವರ ತಪ್ಪಲ್ಲ!

ಪೊಲೀಸ್ನೋರು ಇಲ್ಲಿ ಸ್ವಲ್ಪ ಯಾಮಾರಿದ
ಅನ್ನಿಸುತ್ತೆ, ನಾಯಿ ಶೆಡ್ಡಿನಲ್ಲಿ ಅವರನ್ನೆಲ್ಲ ಇಟ್ಟಿರಲ
ಎಂದು ಪದೇಪದೇ ಅಧಿಕಾರಸ್ಥರು ಹೇಳುತ್ತಲೇ ಇದ್ದರ
ಏನು ಮಾಡ್ತೀರಿ. ಹಾಳಾದ ಟಿವಿಯವರು ನಾಯಿಶೆ
ಅಂತ ಬರೆದಿರುವ ಬೋರ್ಡ್‌ಅನ್ನ ಪದೇಪದ
ತೋರಿಸಿದರು. ಅದನ್ನು ಮೊದಲೇ ತೆಗೆಸಬೇಕಿತ್ತು, ಇ
ಮಾಧ್ಯಮದವರನ್ನು ಸರಿಯಾಗಿ ನೋಡಿಕೊಳ್ಳಬೇಕಾಗಿತ
ಇದ್ಯಾವುದನ್ನೂ ಮಾಡಲಿಲ್ಲವಾಗಿ ನಾಯಿಶೆಡ್ಡಿನ
ನಾಯಕರನ್ನು ಕೂಡಿ ಹಾಕಿದ್ದು ಸೃಷ್ಟಿ ಆಯಿತು. ಇದನ
ಘೋರ ಅಪರಾಧ ಎಂದು ಪರಿಗಣಿಸಿದ ಇಲಾ
ಒಂದಿಬ್ಬರು ಅಬ್ಬೇಪಾರಿ ಪ್ಯಾದೆಗಳನ್ನು ಅಮಾನತ್ತಿನಲ್ಲಿಟ್ಟ
ತನ್ನ ಮರ್ಯಾದೆ ಉಳಿಸಿಕೊಳ್ಳುತ್ತೆ ಎನ್ನುವುದರಲ್ಲಿ ಸಂಶಯ
ಇಲ್ಲ!

ಇನ್ನು ಊಟ, ನೀರು ಕುರಿತಂತೆ ಸಂಭಾವಿತ ಶಂಕ
ಬಿದರಿಯವರೇ ಹೇಳಿದ್ದಾರೆ. ಎಲ್ಲರಿಗೂ ಅಡಿಗಾಸ
ಹೋಟೆಲ್‌ನಿಂದಲೇ ಊಟ ತರಿಸಿದ್ದರಂತೆ. ಬಿಸ್ಲೆರಿ ನೀ
ಕುಡಿಸಿದ್ರಂತೆ. ಎಂತಹ ಉದಾರತೆ! ಈ ಬಿದರಿ ಅನ್ನೋನ
ಏನು ಅಡಿಗಾಸ್ ಹೋಟೆಲ್‌ಗೆ, ಬಿಸ್ಲೇರಿ ಕಂಪೆನಿ
ಪಾರ್ಟನರ್ ಆಗಿದ್ದಾನ ಅಂತ ಕೆಲವರು ಕೇಳ್ತಾರೆ. ಹ
ಇರೋರು ಎಲ್ಲೆಲ್ಲೊ ಹೂಡಿರ್ತಾರೆ ನಮಗೆ ತಿಳೀದ
ಅನ್ನೋ ಉತ್ತರವನ್ನು ಮಾತ್ರ ನೀಡಬಹುದು. ಇನ
ಶೌಚಾಲಯದ ಪ್ರಶ್ನೆ. ಇದು ಅಪ್ರಸ್ತುತ. ನಾಯಿಗಳೇನ
ಶೌಚಾಲಯ 'ಬೇಕು ಅಂತ ಬೇಡಿಕೆ ಇಟ್ಟಿದ್ದವಾ ಅ
ಕಟ್ಟಿಸಿರೋಕೆ. ಅವುಗಳಂಗೆ ಹೇಗೋ ಸುಧಾರಿಸಿಕೊ
ಬೇಕಪ್ಪ, ಇದರಲ್ಲಿ ಪೊಲೀಸ್ ವರಿಷ್ಠಾಧಿಕಾರಿಗ
ಅಪರಾಧ ಎಳ್ಳಷ್ಟೂ ಇಲ್ಲ.

'ಬಿದರಿ ನೀನ್ಯಾರಿಗೊಲ್ಲದವನೋ' ಅಂತ ಹೇಳದ
ವಿಧಿ ಇಲ್ಲ. ಆಡಳಿತ ಪಕ್ಷದವರಿಗೆ ಅವರನ್ನು ಕಂಡ
ಮುದ್ದಿಡೋಣ ಅನ್ನುತ್ತೆ. ಪೂರ್ವಾಗ್ರಹಪೀಡಿತರಾಗದ
ಪರಾಮರ್ಶಿಸಿದರೆ ವಿಪಕ್ಷಗಳಿಗೂ ಇವರು ಮುದ್ದಿನ
ಮಣೀನೆ! ಈ ಪ್ರಸಂಗದಲ್ಲಿ ಕಾಂಗ್ರೆಸ್ ನಾಯಕರ
ಮಾನಾನ ಎಷ್ಟು ಪಸಂದಾಗಿ ಕಾಪಾಡಿದ್ರು ನೋಡಿ
'ಅರೆಸ್ಟ್ ಮಾಡಿ ಬಿಟ್ಟುಬಿಟ್ರೆ' ಜನನಾಯಕರ ಮೇಲ
ಅಪವಾದ ಹೊರಿಸಿಯಾರು ಅನ್ನೋ ಆತಂಕ ಅವರಿಗೆ
'ಇದೇನು ಹಿಂಗೋಗಿ ಹಂಗೆ ಬಂದ್ರಲ್ಲಾ' ಅಂತ
ಮುಖಮುರೀತಾವೆ ಅಂತಾವ ಅವರು ಏನು ಮಾಡಿದ್ರು
ಸಂಜೆವರೆಗೂ ನಾಯಿಶೆಡ್ಡಿನಲ್ಲೇ ಕೂಡಿಹಾಕಿದ್ದರು! ಜನ
ಏನು ಮಾಡ್ತಾರೆ ಈಗ ನಾಯಿಶೆಡ್ಡಿನಲ್ಲಿದ್ದೋನ
ನಾಯಕ–ಅಂತಾರೆ! ಬಿದರಿ ಅವರ ಅಮೃತವಾಣಿ ಇಷ್ಟಕ್ಕೇ
ನಿಂತಿಲ್ಲ, ಅವರ ದೃಷ್ಟೀಲಿ ನಾಯಿಶೆಡ್ಡು ಅಂದರೆ ತರಬೇತಿ
ಕೇಂದ್ರ ಇದ್ದಂಗೆ. ಮುಂದೆ ಅಧಿಕಾರದಲ್ಲಿ ಬರೋರಿಗೆ
ಇವೆಲ್ಲ ಅನುಭವ ಆಗಿರಬೇಕು ಅನ್ನೋದು ಅವರ
ನಂಬಿಕೆ. ಅವರು ಐಪಿಎಸ್ ತರಬೇತಿನೂ ಇದೇ ರೀತಿ
ಪಡೆದಿರಬಹುದು! ತಮ್ಮ ಅನುಭವಾಮೃತವನ್ನು ರಾಜ್ಯಕ್ಕೆ
ಹರಡುತ್ತಿರೋದು ನಮ್ಮ ಪುಣ್ಯ!

ಅಂದಮೇಲೆ ನಮ್ಮ ಘನ ಸರ್ಕಾರ ಪೊಲೀಸ್
ಇಲಾಖೆಯ ಆಂತರಿಕ ಆಡಳಿತ ಮಾತ್ರ ಅಲ್ಲ,
ರಾಜ್ಯಾಡಳಿತವನ್ನೇ ಪೊಲೀಸು ವರಿಷ್ಠಾಧಿಕಾರಿಗಳಿಗೆ
ನೀಡಿದ್ದಾರೆ ಎಂದರೂ ತಪ್ಪಲ್ಲ, ಮಾನ್ಯ ಗೃಹ ಸಚಿವರು,
ಘನತೆವೆತ್ತ ಮುಖ್ಯಮಂತ್ರಿಗಳು ಇದನ್ನು
ಸಮರ್ಥಿಸಿಕೊಂಡಿದ್ದಾರೆ. ಇವುಗಳನ್ನೆಲ್ಲ ಕೂಲಂಕಷವಾಗಿ
ಪರಿಶೀಲಿಸಿ ಸನ್ಮಾನ್ಯ ರಾಜ್ಯಪಾಲರ ಹೇಳಿಕೆಯಲ್ಲಿ ಯಾವ
ಹುರುಳೂ ಇಲ್ಲ ಎಂದು ತೀರ್ಮಾನ ಹೇಳಲಾಗಿದೆ!

ರೈನ್‌ಬೋನಲ್ಲಿ ಕರ್ಕಶ........

ಕನ್ನಡದ ಹೆಮ್ಮೆಯ FM- Rainbow ಇತ್ತೀಚೆಗೆ ತನ್ನ ಎಂಟನೆಯ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದೆ. ಈ ಸಂತೋಷದಲ್ಲಿಯೇ ನನ್ನದೊಂದು ಅಪಸ್ವರ.

ಬೆಳ್ಳಂಬೆಳಿಗ್ಗೆಯೇ 'ಅಯ್ಯಯ್ಯೊ' ಎಂದು ಅತ್ತೆ ಸೊಸೆ ಜಗಳದಂತೆ ನರಳುತ್ತಾ ಆರಂಭವಾಗುವ ಈ ವಾಹಿನಿ ಭಕ್ತಿಗೀತೆ, ಭಾವಗೀತೆಯೊಂದಿಗೆ ಮುಂದುವರೆಯುತ್ತದೆ. ಈ ಕಾರ್ಯಕ್ರಮಗಳಲ್ಲಿ ಬೆಂಗಳೂರಿನ ಕಲಾವಿದರಿಗೆ, ಬೆಂಗಳೂರಿನ ಆಗುಹೋಗುಗಳಿಗೆ ಸಿಂಹಪಾಲು. ಅಂದ್ರೆ, ಈ ರೇಡಿಯೋದವರ ಪ್ರಕಾರ ಕರ್ನಾಟಕ, ಕನ್ನಡವೆಂದರೆ ಬೆಂಗಳೂರು ಮಾತ್ರ. ಭಾವಗೀತೆಗಳಲ್ಲಿ ಸಿ. ಅಶ್ವಥರವರ ಸರಾಸರಿ ಎರಡು ಹಾಡಿರುತ್ತವೆ. ಅವರು ಕಿರುಚಲು ಧ್ವನಿ ಕೇಳಿ ಮುಂಜಾನೆಯೇ ಮನಸ್ಸು ಮುದುಡಿಬಿಡುತ್ತದೆ. ಇದು ಬಿಟ್ಟರೆ ನೈಶಿಲ ಭಟ್ಟರ ಸವಕಲು ಪದ್ಯಗಳು. ಈ ಕ್ಯಾಸೆಟ್ ಕವಿಗಳ ಪ್ರಕಾರ ಭಾವಗೀತೆಗಳೆಂದರೆ ಹೆಣ್ಣು ಗಂಡು, ಪ್ರೀತಿ ಪ್ರೇಮಗಳಷ್ಟೇ.

ತಮ್ಮ ವಿಶಿಷ್ಟವಾದ ಕಂಚಿನ ಕಂಠ ಮತ್ತು ಸೃಜನಶೀಲತೆಯಿಂದ ಮನೆಮಾತಾಗಿರುವ ಉದಯಾದ್ರಿ ಯಂಥವರು ಇರುವಾಗಲೂ ಈ ವಾಹಿನಿ ಏಕೆ ಕರ್ಕಶವಾಗುತ್ತಿದೆ ಅರ್ಥವಾಗುತ್ತಿಲ್ಲ.

-ಪ್ರಕಾಶ ಬಿಸ್ನಾಗರ, ಬೆಂಗಳೂರು

ಹೊಗಳಿಕೆ
ತೆಗಳಿಕೆ

ಆಂಧ್ರದ ಸಿಎಂ ವೈಎಸ್‌ಆರ್‌ನ ರಕ್ತಸಿಕ್ತ ಬದುಕು ಹೆಲಿಕಾಪ್ಟರ್ ದುರಂತದಲ್ಲಿ ಎಷ್ಟೊಂದು ಭೀಕರವಾಗಿ ಕೊನೆಗೊಂಡಿತು ಎಂಬುದು ಪತ್ರಿಕೆಯ ಸೆಪ್ಟೆಂಬರ್ ೩೦ರ ತಮ್ಮ ಸಂಚಿಕೆಯಲ್ಲಿ ಅಪಘಾತದ ಭೀಕರ ದೃಶ್ಯ ನೋಡಿ ದಾಗ ಕಣ್ಣಿಗೆ ಕಟ್ಟುತ್ತದೆ. ಆಧುನಿಕ ತಂತ್ರಜ್ಞಾನದ ಸಹಾಯ ವಿಲ್ಲದಿರುತ್ತಿರದಿದ್ದರೆ ನಲ್ಲಮಲ್ಲ ಘನಘೋರ ಅರಣ್ಯದಲ್ಲಿ ಅಪಘಾತದ ನಿಖರ ಸ್ಥಳ ಹುಡುಕಿ ತೆಗೆಯಲು ಒಂದು ವಾರವಾದರೂ ಬೇಕಾಗುತ್ತಿತ್ತಂತೆ. ಅಷ್ಟರೊಳಗೆ ಕಾಡಿನ ಪ್ರಾಣಿಗಳು ಎಲ್ಲರ ಶವಗಳನ್ನು ಸಂಪೂರ್ಣವಾಗಿ ತಿಂದು ಮುಗಿಸುತ್ತಿದ್ದವು. ರೆಡ್ಡಿಯ ಜೊತೆಗಿದ್ದ ಅವರ ಭದ್ರತಾ ಅಧಿಕಾರಿಯ ಮೊಬೈಲ್‌ಗೆ ಬಂದ ಕೊಟ್ಟ ಕೊನೆಯ ಎಸ್ಸೆಮ್ಮೆಸ್‌ನ ಸಿಗ್ನಲ್‌ನ ಜಾಡು ಹಿಡಿದು ಹುಡುಕಿದ್ದರಿಂದ ಆ ದಟ್ಟಡವಿಯಲ್ಲಿ ಹೆಲಿಕಾಪ್ಟರ್ ಪತನವಾದ ಸ್ಥಳ ಪತ್ತೆ ಯಾಗಲು ಸಾಧ್ಯವಾಯಿತಂತೆ. ಇದು ಆಧುನಿಕ ತಂತ್ರ ಜ್ಞಾನದ ಸರಿಯಾದ ಬಳಕೆಯಿಂದ ಪಡೆಯಬಹುದಾದ ಅದ್ಭುತ ಫಲಿತಾಂಶ.

-ಶಿವಕುಮಾರ್ ಕೆ. ಯರಗಟ್ಟಿ, ಗೋಕಾಕ್

(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆ ಕಳಿಸಬಹುದು)

►►►11 ... ಸರ್ಕಾರದ ಸಮರ

ಲಕ್ಷಾಂತರ ಆದಿವಾಸಿಗಳು ತಮ್ಮ ಮನೆಮಠ ಕಳೆದುಕೊಂಡು ನಿರಾಶ್ರಿತರಾದರು.

ಇದೆಲ್ಲದರಿಂದಾಗಿ ಅಳಿದುಳಿದ ಆದಿವಾಸಿಗಳೂ ಕೂಡ ತಮ್ಮ ಜೀವರಕ್ಷಣೆಗಾಗಿ ನಕ್ಸಲರ ದಳಗಳನ್ನು ಸೇರಿ ಅವರ ಬಲವನ್ನು ಹೆಚ್ಚಿಸಿದ್ದೂ ಆಯಿತು. ಒಂದು ಅಂದಾಜಿನ ಪ್ರಕಾರ ಸಲ್ವಾ ಜುಡಂ ಅನ್ನು ಪ್ರಾರಂಭಿಸುವ ಮುನ್ನ ಛತ್ತೀಸಗಢದ ದಕ್ಷಿಣ ಭಾಗದಲ್ಲಿ ಕೇವಲ 500 ನಕ್ಸಲರಿದ್ದರೆ, ಈಗ ಅವರ ಸಂಖ್ಯೆ ಹತ್ತಾರು ಸಾವಿರ ದಾಟಿದೆ. ಇನ್ನು ದೇಶದ 200 ಜಿಲ್ಲೆಗಳಲ್ಲಿ ಅವರ ಸಂಖ್ಯಾಬಲ ಎಷ್ಟಿರಬಹುದೆಂದು ಊಹಿಸಬಹುದಷ್ಟೇ.

ಆದರೆ ವಾಸ್ತವವಾಗಿ ಮಾವೋವಾದಿಗಳ ಬೆಂಬಲಕ್ಕೆ ನಿಂತಿರುವವರೆಲ್ಲರಿಗೂ ಮಾವೋವಾದಿ ಸಿದ್ಧಾಂತದ ಸಂಪೂರ್ಣ ಅರಿವಿದೆ ಎಂದೇನೂ ಅಲ್ಲ, ಆದರೆ ನಮ್ಮ ಅರವತ್ತು ವರ್ಷದ ಪ್ರಜಾಸತ್ತೆಯ ಯಾವುದೇ ಸಂಸ್ಥೆಗಳು ಅವರ ಮೂಲಭೂತ ಅವಶ್ಯಕತೆಗಳನ್ನೂ ಈಡೇರಿಸದೆ, ಅವರನ್ನೇ ಶತ್ರುಗಳೆಂಬಂತೆ ಕೊಲ್ಲುತ್ತಿರುವಾಗ ಅವರ ಕಷ್ಟನಷ್ಟಗಳಿಗೆ ಸ್ಪಂದಿಸಿದವರು ನಕ್ಸಲರು.

ಈಗ ಭಾರತ ಸರ್ಕಾರ ಸಾರಲಿರುವ ಯುದ್ಧ ಪ್ರದೇಶದಲ್ಲಿ ಕನಿಷ್ಠ ಒಂದೂವರೆ ಲಕ್ಷದಷ್ಟು ಅಮಾಯಕರು ವಾಸಿಸುತ್ತಿದ್ದಾರೆ. ಅವರಲ್ಲಿ ಅದೆಷ್ಟು ಜನ ಈ ಯುದ್ಧದಲ್ಲಿ ಬಲಿಯಾಗುತ್ತಾರೋ, ಹಾಗೆ ಬಲಿಯಾದವರ ಸಂಬಂಧಿಕರಲ್ಲಿ ಅದೆಷ್ಟು ಮಂದಿ ಬಂದೂಕು ಹಿಡಿದು ಸರ್ಕಾರದ ವಿರುದ್ಧ ಬಂಡಾಯವೇಳುತ್ತಾರೋ? ಬಲ್ಲವರ್‍ಯಾರು?

ಇನ್ನೊಂದು ವಿಪರ್ಯಾಸವನ್ನು ಗಮನಿಸಿ: ಈ ಯುದ್ಧದಲ್ಲಿ ಒಂದೆಡೆ ಬಡತನದಿಂದ ಪಾರಾಗಲು ಪೊಲೀಸ್ ಪಡೆಯನ್ನೋ ಸೈನ್ಯವನ್ನೋ ಸೇರಿರುವ ಯುವಕರು ಇದ್ದಾರೆ. ಇನ್ನೊಂದೆಡೆ ತಮ್ಮ ಭೂಮಿಯನ್ನು ರಕ್ಷಿಸಿಕೊಳ್ಳಲು ಸಜ್ಜಾಗಿರುವ ಆದಿವಾಸಿಗಳಿದ್ದಾರೆ. ಅಂದರೆ ಈ ಯುದ್ಧದಲ್ಲಿ ಎರಡೂ ಕಡೆ ಸಾಯಲಿರುವವರೆಲ್ಲ ಬಡತನದ ಬೇಗೆಯಲ್ಲಿ ಬೆಂದ ಅಮಾಯಕ ಭಾರತೀಯರೆ.

ಒಂದಂತೂ ಸತ್ಯ: ತನ್ನ ದೇಶದ ಬಡಜನರ ಬೇಡಿಕೆಗಳನ್ನು ಈಡೇರಿಸಿ ಅವರನ್ನೂ ಪ್ರಜಾಪ್ರಭುತ್ವದ ವ್ಯವಸ್ಥೆಯ ಪಾಲುದಾರರನ್ನಾಗಿಸಬೇಕಿದ್ದ ಸರ್ಕಾರ ಇವತ್ತು ಅವರ ವಿರುದ್ಧವೇ ಯುದ್ಧ ಸಾರುತ್ತಿದೆ.

ಇದು ಬರಲಿರುವ ರಕ್ತದೋಕುಳಿಯ ಮೊದಲ ಅಧ್ಯಾಯ ಮಾತ್ರ. ಇದು ಅಂತ್ಯಗೊಳ್ಳುವ ಮುನ್ನ ಇನ್ನೆಷ್ಟು ಅಧ್ಯಾಯಗಳನ್ನು ರಕ್ತಪಾತವನ್ನು ಭಾರತೀಯರು ನೋಡಬೇಕಿದೆಯೋ.....

ಆದರೆ ಯಾವುದೇ ಯುದ್ಧದಲ್ಲಿ ಮೊದಲು ಸಾಯುವುದು ಸತ್ಯ ಸತ್ಯವಂತರು. ಈ ಯುದ್ಧದಲ್ಲಿ ನ್ಯಾಯ, ನೀತಿ, ನೆಮ್ಮದಿ, ಕನಸುಗಳೂ ಸಾಯಲಿವೆ. ಅದು ಈ ದೇಶದ ಬಹು ದೊಡ್ಡ ದುರಂತ..

ಸಿನಿ Bits




ಯುವ'ಕನ ಶತಕ

ಬಿದಾರು ಕೋಟಿ ರೂಪಾಯಿಗಳ ಖರ್ಚಿನಲ್ಲಿ ರಾಗಿದ್ದ 'ಯುವ' ಎಂಬ ಸಿನಿಮಾ ಗಡೆಗೊಂಡದ್ದೇ ಬಹುತೇಕರಿಗೆ ಗೊತ್ತಾಗಿಲ್ಲ. ಈ ಹಾಡುಗಳು ಹಿಟ್ ಆಗಿದ್ದರೂ, ಪ್ರಚಾರದ ತೆಯಿಂದ ಜನ ಚಿತ್ರಮಂದಿರಗಳ ಕಡೆ ದಷ್ಟರಲ್ಲಿ ಸಿನಿಮಾ ಎತ್ತಂಗಡಿಯಾಗಿತ್ತು. ಆದರೂ ಚಿತ್ರ ಸಂಯೋಜಿತ ಶತದಿನಗಳನ್ನು ಪೂರೈಸಿದೆ. ದೆ ಈ ಸಿನಿಮಾ ಎಲ್ಲ ಥಿಯೇಟರ್‌ಗಳಲ್ಲೂ ಸೇರಿ ನೂರು ದಿನ ಓಡಿದೆಯಂತೆ.

ಅಂದಹಾಗೆ, ಈ ಚಿತ್ರದ ಶತದಿನ ಸಮಾರಂಭವನ್ನು ಟಕದ ಯಾವ ಮೂಲೆಯಲ್ಲೂ ನಡೆಸದ ಅದರ ಂಡ ಮತ್ತು ಆದರ ನಾಯಕ ಕಾರ್ತಿಕ್ ಶೆಟ್ಟಿ ಬೆಯಲ್ಲಿ ದೊಡ್ಡ ಸಮಾರಂಭವನ್ನು ನಡೆಸಿ ಅಲ್ಲಿ ಗುರು ಚೇತಾ ಯಜ್ಞೇಶ್ ಶೆಟ್ಟಿಗೆ ಸನ್ಮಾನಿಸುವ ಲಕ ಆಚರಿಸಿಕೊಂಡಿದ್ದಾರೆ.

ೂವರ ಪೈಪೋಟಿ

ಮುಂದಿನವಾರ ಅಂದರೆ




ಬರುವ ಶುಕ್ರವಾರದಂದು ಮೂರು ಜನರ ಅದೃಷ್ಟ ಪರೀಕ್ಷೆಯಾಗಲಿದೆ. ಮಾಜಿ ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಸಿ.ಪಾಟೀಲ್ ಶಾಸಕರಾದ ನಂತರ ಮತ್ತೆ ಮುಖಕ್ಕೆ ಬಣ್ಣ ಹಚ್ಚಿ 'ಸೆಲ್ಯೂಟ್' ಎಂಬ ಚಿತ್ರದ ಮುಖಾಂತರ ಪ್ರೇಕ್ಷಕರ ಮುಂದೆ ಬರಲಿದ್ದಾರೆ.

ದಕ್ಕೆ ವ್ಯತಿರಿಕ್ತವಾಗಿ ಹಾಸ್ಯನಟ ಜಗ್ಗೇಶ್ ರಣಿಯಾದ ನಂತರ ಮುಖಕ್ಕೆ ಬಣ್ಣ ಹಚ್ಚಿ ವ ಬಗ್ಗೆ ಆಸಕ್ತಿ ಕಳೆದುಕೊಂಡಂತಿದ್ದು ತನ್ನ ಗೆ ತನ್ನ ಮುದ್ದಿನ ಮಗ ರಾಜ್‌ನನ್ನು ಹೀರೋ ದ್ದಾರೆ. ಈತ ನಟಿಸಿರುವ ಚಿತ್ರ ಈ ವಾರ ಾಲಿದೆ. ಜಗ್ಗೇಶ್ ತರಹ ಗುರುರಾಜ್ ಕೂಡಾ ರ ಮನಸ್ಸನ್ನು ಗೆಲ್ಲುತ್ತಾನೋ ಈತನೂ ನಾರಾಯಣ್ ತರಹ ಫೇಲಾಗುತ್ತಾನೋ ಎಂದು ಬೇಕಿದೆ.



ಾಗೆಯೇ ದಿಶೂಂ... ದಿಶೂಂ... ಇಮೇಜ್‌ನಿಂದ




ಹೊರಬರಲು ಪ್ರಯತ್ನಿಸುತ್ತಿರುವ ಚಾಲೆಂಜಿಂಗ್ ಸ್ಟಾರ್ ದರ್ಶನ್ 'ಅಭಯ್' ಚಿತ್ರದಲ್ಲಿ ಹಾಸ್ಯಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಪಾತ್ರವನ್ನು ಆತನ ಅಭಿಮಾನಿಗಳು ಒಪ್ಪುತ್ತಾರೋ ಇಲ್ಲವೋ ಎಂಬ ಗುಮಾನಿ ಹಂಚಿಕೆದಾರರಿಗಿದೆ.

ಒಂದಂತೂ ನಿಜ, 'ಸೆಲ್ಯೂಟ್' ನೋಡಲು ಹೋಗಿ ಬಿ.ಸಿ.ಪಾಟೀಲರ ಕರು, ಕಾಂಗ್ರೆಸ್ ಕಾರ್ಯಕರ್ತರು ಅಂತ ಷ್ಟು ಜನ ಥಿಯೇಟರ್‌ನಲ್ಲಿ ಜಮಾಯಿಸಬಹುದು. 'ಗಿಲ್ಲಿ' ಚಿತ್ರಕ್ಕೂ ಜಗ್ಗೇಶ್ ಅಭಿಮಾನಿಗಳೂ ಕಾರ್ಯಕರ್ತರು ಬರಬಹುದು. ಆದರೆ ಈ [illegible] ನೋಡಲು ನಿಜವಾದ ಪ್ರೇಕ್ಷಕರು [illegible] ಇಲ್ಲವೋ ಎಂಬುದು ಶುಕ್ರವಾರ [illegible] ನಂತರ ಗೊತ್ತಾಗುತ್ತದೆ.

ಹಾಡುಹಕ್ಕಿಗೆ 80

ಗಾತಾರಹೇ ಮೇರಾ ದಿಲ್



'ಆಜಾರೆ... ಆಜಾರೆ ಮೇರೆ ದಿಲಭರೋ ಆಜಾ...' ಎಂದು ಪ್ರೇಮಿಗಳು ಒಬ್ಬರನ್ನೊಬ್ಬರು ಬರಸೆಳೆಯುವ ಅತಿಸುಂದರ ಹಾಡು ಎಂದೆಂದಿಗೂ ಎವರ್‌ಗ್ರೀನ್. ಹಾಗೆಯೇ 'ಸುನ್ ಸಾಹಿಬಾ ಸುನ್....ಪ್ಯಾರ್‌ಸೆ ಸುನ್' ಎಂಬ ಹಾಡು ಕೂಡಾ. ಹೇಳುತ್ತಾ ಹೋದರೆ ಇಂಥ ಸಹಸ್ರ ಸಹಸ್ರ ಹಾಡುಗಳೇ ಉದಾಹರಣೆಗಳಾಗಿಬಿಡುತ್ತವೆ.

ಸರಿಸುಮಾರು ಆರೂವರೆ ದಶಕಗಳ ಕಾಲ ಭಾರತೀಯ ಸಂಗೀತಲೋಕದ ಧ್ರುವತಾರೆಯಂತೆ ಕಂಗೊಳಿಸಿದ ಲತಾ ಮಂಗೇಶ್ಕರ್ ಎಂಬ ಹಾಡುಹಕ್ಕಿಗೆ ಈಗ ಎಂಭತ್ತರ ಹರೆಯ!

ಭಾರತದ ಇಪ್ಪತ್ತೆರಡಕ್ಕೂ ಹೆಚ್ಚು ಭಾಷೆಗಳಲ್ಲಿ ಸುಮಾರು ಮೂವತ್ತೈದು ಸಾವಿರದಷ್ಟು ಹಾಡುಗಳನ್ನು ಹಾಡಿರುವ ಲತಾ ಮಂಗೇಶ್ಕರ್ ಎಂಬ ಯಶಸ್ವೀ ಹೆಣ್ಣುಮಗಳೂ ಕೂಡ ಬದುಕು ಕಟ್ಟಿಕೊಳ್ಳಲು ಹೆಣಗಾಡಿದವರೇ.

1929ರ ಸೆಪ್ಟೆಂಬರ್ **28**ರಂದು ಹುಟ್ಟಿದ ಲತಾ ಮಂಗೇಶ್ಕರ್ ತೀರ ಸಣ್ಣ ವಯಸ್ಸಿಗೇ ದೊಡ್ಡ ರೀತಿಯ ಕಷ್ಟಗಳನ್ನು ಎದುರಿಸಿದಾಕೆ. ಆಕೆಯ ತಂದೆ ದೀನಾನಾಥ್ 'ಬಲವಂತ್ ಸಂಗೀತ ಮಂಡಳಿ' ಎಂಬ ಪುಟ್ಟದೊಂದು ಸಂಸ್ಥೆಯನ್ನು ಕಟ್ಟಿಕೊಂಡು, ಹಲವು ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಒಮ್ಮೆ 'ಸಂಗೀತ ಸೌಭದ್ರ' ಎಂಬ ನಾಟಕದ ಪಾತ್ರಧಾರಿಯೊಬ್ಬರು ಕೈಕೊಟ್ಟಿದ್ದರಿಂದ ಆ ಪಾತ್ರವನ್ನು ಲತಾ ಮಾಡಬೇಕಾಗಿ ಬಂದಿತ್ತು. ನಂತರ ಪುಣ್ಯಪ್ರಭಾವ, ಗುರುಕುಲ್ ಮುಂತಾದ ರಂಗಪ್ರಯೋಗಗಳಲ್ಲೂ ಲತಾ ಕಾಣಿಸಿಕೊಂಡಿದ್ದರು. ಶಾಲೆಗೆ ಹೋದ ಎರಡನೇ ದಿನವೇ ಶಿಕ್ಷಕರು ಗದರಿದರು ಎಂಬ ಕಾರಣಕ್ಕೆ ಲತಾ ಮಂಗೇಶ್ಕರ್ ಇನ್ನೆಂದೂ ಶಾಲೆಗೆ ಹೋಗುವ ಮನಸ್ಸು ಮಾಡಲೇ ಇಲ್ಲ. ಹೀಗಾಗಿ ಲತಾ ಮಂಗೇಶ್ಕರ್ ಶಾಶ್ವತವಾಗಿ ಔಪಚಾರಿಕ ಶಿಕ್ಷಣದಿಂದ ದೂರವೇ ಉಳಿದುಬಿಟ್ಟರು.



ಹದಿಮೂರು ವರ್ಷದ ಚಿಕ್ಕವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡ ಲತಾ ಮಂಗೇಶ್ಕರ್ ಕುಟುಂಬ ಅದೆಷ್ಟು ಕಷ್ಟಕ್ಕೆ ಬಿತ್ತೆಂದರೆ, ಸಂಗೀತ ಪಾಠಕ್ಕೆ ಟ್ರೈನಿನಲ್ಲಿ ಹೋದರೆ ದುಡ್ಡು ಖರ್ಚಾಗುತ್ತದೆ ಎಂದು ದೂರದ ಜಾಗೆಗಳಿಗೆ ನಡೆದೇಹೋಗುತ್ತಿದ್ದರಂತೆ. ಹಾಗೆ ಉಳಿಸಿದ ಹಣದಲ್ಲಿ ಮನೆಗೆ ಬೇಕಾದ ಅಡುಗೆ ಸಾಮಗ್ರಿ, ತರಕಾರಿಗಳನ್ನು ಕೊಂಡುಕೊಳ್ಳುತ್ತಿದ್ದರಂತೆ. 'ಹಳೇದನ್ನ ಮರೀಬಾರ್ದು' ಎನ್ನುವಹಾಗೆ ಅಂದು ಒಪ್ಪೊತ್ತಿನ ಊಟಕ್ಕೂ ಪರದಾಡಿದ ದಿನಗಳನ್ನು ಲತಾ ಮಂಗೇಶ್ಕರ್ ಆಗಾಗ ನೆನೆಯುತ್ತಲೇ ಇರುತ್ತಾರೆ. ಯಶಸ್ಸು, ಖ್ಯಾತಿಯನ್ನು ತಲೆಗೇರಿಸಿಕೊಳ್ಳದೇ ಅಂದಿನ ದಿನಗಳನ್ನು ಆಗಾಗ ಹಿಂತಿರುಗಿ ನೋಡುವ ಲತಾ ಅವರ ಜೀವನಶೈಲಿಯೇ ಈಗಲೂ ಅವರನ್ನು ಇಷ್ಟೊಂದು ಸರಳವಾಗಿಟ್ಟಂತಿದೆ.

ಮೊದಮೊದಲು ನಾಟಕಗಳಲ್ಲಿ ಅಭಿನಯಿಸುತ್ತಾ ಬದುಕಿಗಾಗಿ ಹೋರಾಡುತ್ತಿದ್ದ ಲತಾ ಮಂಗೇಶ್ಕರ್ ತಾವಿದ್ದ ಇಂದೋರ್‌ನಿಂದ ಪುಣೆ, ಅಲ್ಲಿಂದ ಕೊಲ್ಹಾಪುರಕ್ಕೆ ವಲಸೆ ಹೋಗಬೇಕಾಗಿಬಂದಿತ್ತು. ತಾಯಿ, ಮೂವರು ಸಹೋದರಿಯರು ಮತು ಒಬ್ಬ ತಮ್ಮ ಹೀಗೆ ದೊಡ್ಡ ಕುಟುಂಬವನ್ನು ಸಾಕಬೇಕಾದ ಹೊಣೆ ಲತಾರ ಮೇಲೇ ಇತ್ತಾದ್ದರಿಂದ ಕೆಲವು ಮರಾಠಿ ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ನಟಿಸಲು ಆರಂಭಿಸಿದರು. ಅದು ೪೦ರ ದಶಕದ ಆರಂಭ. ಲತಾ ತಾನೊಬ್ಬ ಹಾಡುಗಾರ್ತಿಯಾಗಿ ಹೊರಹೊಮ್ಮಬೇಕು ಎಂದು ಹಪಹಪಿಸುತ್ತಿದ್ದ ದಿನಗಳವು. ಆದರೆ ಇವರ ಸಣ್ಣದನಿ ಅಂದಿನ ಚಿತ್ರನಟಿಯರಿಗೆ ಹೊಂದುವುದಿಲ್ಲ ಎಂಬ ಕಾರಣಕ್ಕೆ ಬಹುತೇಕ ಸಿನಿಮಾ ಮಂದಿ ಲತಾ ಅವರಿಗೆ ಅವಕಾಶವನ್ನೇ ನೀಡಿರಲಿಲ್ಲ. ಭಾರತ ವಿಭಜನೆಗೊಂಡ ನಂತರ ಹಲವು ಹಾಡುಗಾರರು ಬಾಂಬೆಯನ್ನು ತ್ಯಜಿಸಿ ಲಾಹೋರ್‌ಗೆ ಗುಳೆ ಹೊರಟನಂತರವಷ್ಟೇ ಲತಾ ಮಂಗೇಶ್ಕರ್ ಅವರ ಅದೃಷ್ಟ ಖುಲಾಯಿಸಿದ್ದು.

1949ರಲ್ಲಿ 'ಕಿತೀ ಸಾಲ್' ಎಂಬ ಮರಾಠಿ ಸಿನಿಮಾದಲ್ಲಿ ಹಾಡುವ ಅವಕಾಶವನ್ನು ಗಿಟ್ಟಿಸಿಕೊಂಡ ಲತಾ ಮಂಗೇಶ್ಕರ್‌ಗೆ ಹಿಂದಿಯಲ್ಲೂ ಒಂದು ಮಟ್ಟದ ಅವಕಾಶ ಮತ್ತು ಯಶಸ್ಸು ದೊರೆಯಿತು. ಬರಬರುತ್ತಾ ಲತಾ ಮಂಗೇಶ್ಕರ್‌ರ ಗಾನಸುಧೆಗೆ ಹಿಂದಿ ಚಿತ್ರಪ್ರೇಮಿಗಳೆಲ್ಲ ವ್ಯಸನಿಗಳಾಗಿಹೋದರು. ಆಕೆಯ ಹಾಡು ಕೇಳಲಿಕ್ಕೆ ಜನ ರೇಡಿಯೋ ಆನ್ ಮಾಡಿಕೊಂಡು ದಿನಗಟ್ಟಲೆ ಕಾಯುವಂತಾಯಿತು.

ಲತಾ ಅವರು ಹಾಡಿದ 'ಯಾದ್ ರಖನಾ ಆಂದ್ ತಾರೋಂ ಯೆ ಸುಹಾನಿ ರಾತ್ ಹೈ....' ಹಾಡು ಕಿವಿಗೆ ಬೀಳುತ್ತಿದ್ದಂತೇ ರಚ್ಚೆಹಿಡಿದ ಮಕ್ಕಳೂ ಜೋಗುಳಕ್ಕೆ ಬಿದ್ದಂತೆ ನಿದ್ರೆಗೆ ಜಾರಿಬಿಡುತ್ತಿದ್ದವು; ಎಂಥ ಕಟುಕನೂ ಕರ್ಣಾನಂದಗೊಳ್ಳುತ್ತಿದ್ದ. 'ಆಜ್ ಫಿರ್ ಜೀನೆ ಕಾ ತಮನ್ನಾ ಹೈ...' ಹಾಡಿನ ಸಾಲುಗಳು ಲತಾರ ಸ್ವರ ಮಾಧುರ್ಯದಿಂದ ಹೊರಹೊಮ್ಮುತ್ತಿದ್ದರೆ ಜೀವನಾಸಕ್ತಿ ಕಳೆಕೊಂಡವರ ಮುಖದಲ್ಲೂ ಜೀವಕಳೆ ಕಾಣಿಸುತ್ತಿತ್ತು. 'ಆಯೆ ಮೇರೆ ದೇಶ್ ಕೆ ವತನ್ ಕೆ ಲೋಗೋಂ' ಎಂಬ ಹಾಡನ್ನು ಒಮ್ಮೆ ಕೇಳಿದರೆ ದೇಶದ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲದ ಪರಮ ಉಡಾಳನಿಗೂ 'ನಾನು, ನನ್ನ ದೇಶ' ಎಂಬ ಭಾವನೆ ಮೂಡದಿರಲು ಸಾಧ್ಯವಿಲ್ಲ. ಕನ್ನಡದಲ್ಲೂ ಲತಾ ಮಂಗೇಶ್ಕರ್ ಹಾಡಿದ 'ಬೆಳ್ಳನೆ ಬೆಳಗಾಯಿತು' ಹಾಡನ್ನು ಕನ್ನಡದ ಕೇಳುಗ ಹೇಗೆತಾನೆ ಮರೆಯಲು ಸಾಧ್ಯ?

ಶಾಲೆಯ ಮೆಟ್ಟಿಲೇ ಏರದ ಅವಿದ್ಯಾವಂತ ಹೆಣ್ಣುಮಗಳೊಬ್ಬಳು ನ್ಯೂಯಾರ್ಕ್ ವಿಶ್ವವಿದ್ಯಾಲಯ ಸೇರಿದಂತೆ ಪ್ರಪಂಚದ ಆರು ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಪದ್ಮಭೂಷಣ, ದಾದಾ ಸಾಹೇಬ್ ಫಾಲ್ಕೆ ಸೇರಿದಂತೆ 'ಎರಡನೇ ಭಾರತರತ್ನ ಪಡೆದ ಮಹಿಳೆ' ಎಂಬ ಹಿರಿಮೆ ಕೂಡ ಲತಾ ಮಂಗೇಶ್ಕರ್ ಅವರದ್ದು.

ವಯಸ್ಸು ಎಂಭತ್ತಾದರೂ ಇವತ್ತಿಗೂ ಸಣ್ಣ ಹುಡುಗರಂತೆ ಕ್ರಿಕೆಟ್ ಮೋಹವಿರಿಸಿಕೊಂಡಿರುವ ಲತಾ ಮಂಗೇಶ್ಕರ್ ಸಂಗೀತವನ್ನೇ ಜೀವನವನ್ನಾಗಿಸಿಕೊಂಡ ಅಪರೂಪದ ಮಹಿಳೆ.


'ಕೊನೆವರೆಗೂ ಹಾಡುತ್ತಲೇ ಇರುತ್ತೇನೆ' ಎನ್ನುವ ಈ ಗಾನಕೋಗಿಲೆಯ ಕಂಠ-ಮನಸ್ಸು ಈ ಕ್ಷಣಕ್ಕೂ 'ಗಾತಾರಹೇ ಮೇರಾ ದಿಲ್' ಎಂದು ಹಾಡುತ್ತಲೇ ಇದೆ. ಅದು ಹೀಗೇ ಸಾಗಲಿ....

● ಅರುಣ್.ಜಿ

ನಿರ್ದೇಶಕ ಪರಾರಿ-ಹರಿಶ್ಚಂದ್ರ ಸಮಾಧಿ!



'ಮುಸ್ಸಂಜೆ ಗೆಳತಿ' ಕುಖ್ಯಾತಿಯ ಖಾರದ ಪುಡಿ ಸೀನ ಸಿಕ್ಕಸಿಕ್ಕವರ ಹಣೆಗೆಲ್ಲ ಬೂದಿ ಬಳಿದು ನಾಪತ್ತೆಯಾಗಿರುವ ಬೆನ್ನಲ್ಲೇ ಆತ ಇತ್ತೀಚೆಗೆ ಆರಂಭಿಸಿದ್ದ 'ಹರಿಶ್ಚಂದ್ರ ಘಾಟ್' ಚಿತ್ರದಿಂದ ಅದರ ನಾಯಕನಟ ಅಕ್ಷಯ್ ಹೊರಬಂದಿದ್ದಾನೆ. 'ಗಂಗಾ ಕಾವೇರಿ' ಚಿತ್ರದಲ್ಲಿ ನಟಿಸಿದ್ದ ಈ ಹುಡುಗನನ್ನು ಶ್ರೀನಿವಾಸ್ ತನ್ನ ಮಗಳೊಂದಿಗೆ ಹೀರೋ ಮಾಡಿದ್ದ. "ಶ್ರೀನಿವಾಸ್ ಇಷ್ಟು ಜನರಿಗೆ ಯಾಮಾರಿಸಿ ಪರಾರಿಯಾಗಿರುವುದನ್ನು ನೋಡಿದರೆ, ನನ್ನ ಮಗನ ಭವಿಷ್ಯವನ್ನು ಆತ ಹಾಳುಮಾಡುವುದರಲ್ಲಿ ಯಾವ ಅನುಮಾನವೂ ಇಲ್ಲ. ಹೀಗಾಗಿ ಅವಕಾಶವಿಲ್ಲದಿದ್ದರೂ ಸರಿ ಶ್ರೀನಿವಾಸನ ಸಿನಿಮಾದಲ್ಲಿ ಮಾತ್ರ ನನ್ನ ಮಗನನ್ನು ನಟಿಸಲು ಬಿಡುವುದಿಲ್ಲ" ಎಂದು ಅಕ್ಷಯ್‌ನ ತಂದೆ ನಿರ್ಮಾಪಕ ವೆಂಕಟಪ್ಪ ಶರಾವು ಹೊರಡಿಸಿದ್ದಾರೆ.



ಈಗಾಗಲೇ ಎರಡು ಮೂರು ದಿನ ಚಿತ್ರೀಕರಣವೂ ಆಗಿರುವ 'ಹರಿಶ್ಚಂದ್ರ ಘಾಟ್' ಪರ್ಮನೆಂಟಾಗಿ ಅಲ್ಲೇ ಸಮಾಧಿಯಾಗಲಿದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ?

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 14-10-2009 RNI No. KARKAN2005/14

ದೊಡ್ಡವರೆಲ್ಲ ಜಾಣರಲ್ಲ!

ತಾಳಿಕೋಟೆ ರಾಜು!



'ಮನಸಾರೆ' ಚಿತ್ರದ ಮುಖಾಂತರ ರಾಜು ತಾಳಿಕೋಟೆ ಎಂಬ ಹೊಸ ಪೋಷಕನಟ ಹೊರಹೊಮ್ಮಿದ್ದಾರೆ. ಈ ತಾಳಿಕೋಟೆ ಉತ್ತರ ಕರ್ನಾಟಕದಲ್ಲಿ ನಾಟಕಗಳ ಮುಖಾಂತರ ಈಗಾಗಲೇ ಜನಮನ ಗೆದ್ದ ಪ್ರತಿಭಾವಂತ. ಮುಖ್ಯವಾಗಿ 'ಕಲಿಯುಗದ ಕುಡುಕ' ಎಂಬ ನಾಟಕದಲ್ಲಿ ಈತನ ಪಾತ್ರವನ್ನು ನೋಡಿ ಹೊಟ್ಟೆ ತುಂಬಾ ನಗದವರೇ ಇಲ್ಲ, ಕಳೆದ ಹತ್ತಾರು ವರ್ಷಗಳಿಂದ ಉತ್ತರ ಕರ್ನಾಟಕದ ವೃತ್ತಿರಂಗಭೂಮಿ ಪ್ರೇಕ್ಷಕರಿಗೆ ಚಿರಪರಿಚಿತರಾಗಿರುವ ರಾಜು ತಾಳಿಕೋಟೆ ಈಗ 'ಮನಸಾರೆ' ಮುಖಾಂತರ ಕರ್ನಾಟಕದಾದ್ಯಂತ ಮನೆಮಾತಾಗಿದ್ದಾರೆ.

ಯಶವಂತ್ ಸರದೇಶಪಾಂಡೆಯಷ್ಟೇ ಪಾಪ್ಯುಲರ್ ಆಗಿರುವ ರಾಜು ತಾಳಿಕೋಟೆ ಮುಂಬರುವ ದಿನಗಳಲ್ಲಿ ಕನ್ನಡ ಚಿತ್ರಗಳಲ್ಲಿ ಹೆಚ್ಚು ಹೆಚ್ಚು ಅವಕಾಶ ಗಿಟ್ಟಿಸಿಕೊಳ್ಳುವ ಸಾಧ್ಯತೆ ಇದೆ. ಅದಕ್ಕೊಂದು ಕಾರಣವೂ ಇದೆ. ಪಕ್ಕನೇ ನೋಡಲು ರಂಗಾಯಣ ರಘು ತರಹ ಮೈಕಟ್ಟು ಹೊಂದಿರುವ ರಾಜು ತಾಳಿಕೋಟೆ ಪ್ರತಿಭೆಯಲ್ಲೂ ಕಡಿಮೆಯೇನೂ ಇಲ್ಲ, ರಂಗಾಯಣ ರಘು ಈಗ ದಿನವೊಂದಕ್ಕೆ ಒಂದು ಲಕ್ಷ ರೂ. ಸಂಭಾವನೆ ಹೇಳುವುದರಿಂದ ಅನೇಕ ನಿರ್ಮಾಪಕರ ಪಾಲಿಗೆ ಆತ ಕಬ್ಬಿಣದ ಕಡಲೆಯಾಗಿದ್ದ. ಅಂತಹ ಬಡ ನಿರ್ಮಾಪಕರ ಪಾಲಿಗೆ ಈ ರಾಜು ತಾಳಿಕೋಟೆ ಇನ್ಮುಂದೆ ಜೂನಿಯರ್ ರಂಗಾಯಣ ರಘು ತರಹ ಕಾಣಿಸಿದರೆ ಆಶ್ಚರ್ಯವೇನೂ ಇಲ್ಲ, ಅದೇನೇ ಇರಲಿ, ರಾಜು ತಾಳಿಕೋಟೆ ಎಂಬ ಬಿಜಾಪುರದ ಈ ಪ್ರತಿಭೆಗೆ ಉಜ್ವಲ ಭವಿಷ್ಯವಂತೂ ಇದ್ದೇಇದೆ.


ಪೂಜಾದಲ್ಲಿ ಮಜಾ!

ಬಾಲಿವುಡ್ ಸ್ಟಾರ್‌ಗಳಿಗೂ ಗಣೇಶ ಹಬ್ಬ ಮತ್ತು ದುರ್ಗಾ ಪೂಜೆಗಳಿಗೂ ಸಿಕ್ಕಾಪಟ್ಟೆ ಅಟ್ಯಾಚ್‌ಮೆಂಟು.

ಮೊನ್ನೆ ಮುಂಬೈನ ಸಾಂತಾ ಕ್ರೂಜ್‌ನಲ್ಲಿ ನಡೆದ ದುರ್ಗಾ ಪೂಜೆಗೆ ಬೆಂಗಾಳಿ ಬೆಡಗಿ ಬಿಪಾಶಾ ಬಸು ಮತ್ತಾಕೆಯ ಪ್ರಿಯತಮ ಜಾನ್ ಅಬ್ರಹಾಂ ಹಾಜರಾದರು. ಹೇಳಿಕೇಳಿ ದುರ್ಗಾ ಪೂಜೆ ಬೆಂಗಾಳಿಗಳಿಗೆ ಅಚ್ಚುಮೆಚ್ಚಿನ ಹಬ್ಬ. ಅಂದಹಾಗೆ, ಅಂದಿನ ಹಬ್ಬಾಚರಣೆಯನ್ನು ಮತ್ತೊರ್ವ ಬೆಂಗಾಳಿ ಮೂಲದ ನಟ ರಾಣಿ ಮುಖರ್ಜಿಯ ವಂಶದವರು ಏರ್ಪಡಿಸಿದ್ದರು.

ಆದರೆ ಬಿಪಾಶಾ ಎಂಬ ಬೆಂಗಾಳಿ ಬಾಂಬ್‌ಅನ್ನು ಕಂಡಕೂಡಲೆ ಜನಸಂದಣಿಯಲ್ಲಿದ್ದ ಪುಂಡನೊಬ್ಬ ನೇರವಾಗಿ ಬಿಪಾಶಾಳ ವಕ್ಷಸ್ಥಳಕ್ಕೇ ಕರಸೇವೆ ಮಾಡಿ ಓಡಿಹೋಗಿದ್ದಾನೆ. ಇದರಿಂದ ಸಹಜವಾಗಿಯೇ ಬಿಪಾಶಾ ಗಾಬರಿಗೊಂಡಳು. ಸಿನಿಮಾಗಳಲ್ಲಿ ಕಟ್ಟಡದಿಂದ ಕಟ್ಟಡಕ್ಕೆ ಹಾರುವ ಹೀರೋ ಜಾನ್ ಅಬ್ರಹಾಂ ಈ ದೃಶ್ಯವನ್ನು ನೋಡುತ್ತಾ ಅಸಹಾಯಕನಂತೆ ನಿಂತಿದ್ದ.

ಇದೆಲ್ಲದರಿಂದ ಬೇಸತ್ತ ಬಿಪಾಶಾ ಇನ್ನು ಮುಂದೆ ಸಾರ್ವಜನಿಕವಾಗಿ ಯಾವ ಪೂಜೆಯನ್ನೂ ಮಾಡುವುದಿಲ್ಲ, ಅದೇನಿದ್ದರೂ ಮನೆಯ ಗೋಡೆಗಳ ಮಧ್ಯೆ ಮಾತ್ರ! ಅದೂ ಜಾನ್ ಜೊತೆಗೆ ಮಾತ್ರ ಎಂದಿದ್ದಾಳಂತೆ.







"ಯೋಗರಾಜ್ ಭಟ್ ಕೂಡಾ ಬಿದ್ಬಿಟ್ರು'' – ಹೀಗಂತ ಗಾಂಧಿನಗರದ ಜನ ಅವರ ನಿರ್ದೇಶನದ 'ಮನಸಾರೆ' ಚಿತ್ರ ನೋಡಿದ ನಂತರ ಉದ್ಗರಿಸಿದ್ದಾರೆ.

ಈ ರೀತಿಯ ಉದ್ಗಾರ ಗಾಂಧಿನಗರದಲ್ಲಿ ಈ ವರ್ಷ ಅನೇಕ ಬಾರಿ ಕೇಳಿಬಂದಿದೆ. ಅದಕ್ಕೆ ಕಾರಣ ಇತ್ತೀಚೆಗೆ ಬಹಳ ನಿರೀಕ್ಷೆಯ ದೊಡ್ಡದೊಡ್ಡ ಚಿತ್ರಗಳು ಮುಗ್ಗರಿಸಿದ್ದು ಎಂದು ವಿಶೇಷವಾಗಿ ಹೇಳಬೇಕಿಲ್ಲ ತಾನೇ? ಸುಮ್ಮನೆ ಈ ವರ್ಷ ಬಂದುಹೋದ ಚಿತ್ರಗಳ ಕಡೆಗೆ ಕಣ್ಣು ಹಾಯಿಸಿದರೆ ಹೀಗೆ ಬಿದ್ದವರೇ ಹೆಚ್ಚು ಕಾಣಿಸುತ್ತಾರೆ. ದೊಡ್ಡವರೆಲ್ಲ ಜಾಣರಲ್ಲ ಎಂಬ ನಾಣ್ನುಡಿ ಕನ್ನಡ ಚಿತ್ರರಂಗದ ನಿರ್ದೇಶಕರ ಮಟ್ಟಿಗೆ ನಿಜವೆನಿಸುತ್ತದೆ.

ಯೋಗರಾಜ್ ಭಟ್‌ಗಿಂತ ಮೊದಲು ಈ ರೀತಿ ಜಾರಿಬಿದ್ದವರಲ್ಲಿ ನಾಗತಿಹಳ್ಳಿ ಚಂದ್ರಶೇಖರ್, 'ಜೋಗಿ' ಖ್ಯಾತಿಯ ಪ್ರೇಮ್, 'ತಾಜ್‌ಮಹಲ್' ಖ್ಯಾತಿಯ ಚಂದ್ರು, 'ಮುಸ್ಸಂಜೆ ಮಾತು' ಖ್ಯಾತಿಯ ಮಹೇಶ್ ಕೂಡ ಇದ್ದಾರೆ.

ಇತ್ತೀಚಿನ ವರ್ಷದಲ್ಲಿ ಇದ್ದಕ್ಕಿದ್ದಂತೆ ನಾಯಕ-ನಾಯಕಿಯರಿಗಿಂತಲೂ ನಿರ್ದೇಶಕರೇ ದೊಡ್ಡವರು ಎಂಬಂತೆ ಅನೇಕ ನಿರ್ದೇಶಕರು ಯಶಸ್ಸು ಕಂಡು ತಾರಾಮೌಲ್ಯವನ್ನು ಗಳಿಸಿದ್ದರು. ಉದಾಹರಣೆಗೆ, ಗಣೇಶ್‌ಗೆ 'ಮುಂಗಾರು ಮಳೆ'ಯಲ್ಲಿ ಯೋಗರಾಜ್ ಭಟ್ ಲೈಫ್ ಕೊಟ್ಟರೆ, 'ದುನಿಯಾ' ಮುಖಾಂತರ ವಿಜಯ್ ಎಂಬ ಕರಿಯನಿಗೆ ಸೂರಿ ನಾಯಕಪಟ್ಟ ದೊರಕಿಸಿಕೊಟ್ಟರು. ಗಾಂಧಿನಗರದವರ ಪಾಲಿಗೆ ನತದೃಷ್ಟ ಎನಿಸಿಕೊಂಡಿದ್ದ ಅಜಯ್‌ಗೆ ಹೀರೋ ಪಟ್ಟ ಗಳಿಸಿಕೊಟ್ಟಿದ್ದೇ ಮೊದಲ ಬಾರಿ 'ತಾಜ್‌ಮಹಲ್' ಎಂಬ ಚಿತ್ರ ನಿರ್ದೇಶಿಸಿದ ಚಂದ್ರು. ಈ ಎಲ್ಲ ಚಿತ್ರಗಳ ಯಶಸ್ಸು ನಿರ್ದೇಶಕರಿಗೆ ಸಿಕ್ಕಿದ್ದರಿಂದ ಇವರಿಗೆಲ್ಲ ಗಾಂಧಿನಗರದಲ್ಲಿ ಏಕ್‌ಧಂ ಡಿಮ್ಯಾಂಡ್ ಬಂತು. ಅಷ್ಟೇ ಅಲ್ಲ ನಾಯಕ-ನಾಯಕಿಯರಂತೆ ಇವರು ಕೂಡಾ ಲಕ್ಷಾಂತರ ರೂ.ಗಳ ಸಂಭಾವನೆ ಪಡೆಯಲಾರಂಭಿಸಿದರು.

ಹೀಗಾಗಿ ಯೋಗರಾಜ್ ಭಟ್, ಸೂರಿ, ಚಂದ್ರು, ಪ್ರೇಮ್ ಮೊದಲಾದವರ ಚಿತ್ರಗಳ ಬಗ್ಗೆ ಪ್ರೇಕ್ಷಕರಲ್ಲೂ ಮತ್ತು ಉದ್ಯಮದವರಲ್ಲೂ ಏಕಪ್ರಕಾರವಾದ ನಿರೀಕ್ಷೆ ಹುಟ್ಟಲಾರಂಭಿಸಿತು. ಆದರೆ ಈ ವರ್ಷ ಈ ಎಲ್ಲ ತಾರಾಮೌಲ್ಯವುಳ್ಳ ನಿರ್ದೇಶಕರು ಬಾಕ್ಸಾಫೀಸ್‌ನಲ್ಲಿ ಮುಗ್ಗರಿಸಿದ್ದಾರೆ.


ಪ್ರೇಮ್ ಮತ್ತು ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಕಾಂಬಿನೇಷನ್‌ನ 'ರಾಜ್' ಚಿತ್ರ ಗೆದ್ದೇ ಗೆಲ್ಲುತ್ತೆ ಎಂದು ಗಾಂಧಿನಗರದಲ್ಲಿ ಬಾಜಿ ಕಟ್ಟಿದ್ದರು. ಆದರೆ ಚಿತ್ರ ಥಿಯೇಟರ್‌ಗೆ ಬಂದು ಹೋಗಿದ್ದೇ ಗೊತ್ತಾಗಲಿಲ್ಲ, ಮುಖ್ಯವಾಗಿ ಕರಿಯ ಮತ್ತು ಎಕ್ಸ್‌ಕ್ಯೂಸ್‌ಮೀ ಚಿತ್ರಗಳಲ್ಲಿ ತೋರಿಸಿದ್ದ ಹೊಸತನವಾಗಲೀ ಅಥವಾ ಜೋಗಿಯಲ್ಲಿ ತೋರಿಸಿದ ದೃಶ್ಯ ವೈಭವವಾಗಲಿ ಇಲ್ಲಿ ತೋರಿಸಲು ಪ್ರೇಮ್‌ನಿಂದ ಸಾಧ್ಯವಾಗಿಲ್ಲವೆಂಬುದು ಮೇಲುನೋಟಕ್ಕೆ ಕಾಣಿಸುತ್ತದೆ.

ಪ್ರೇಮ್‌ಗಿಂತ ಮೊದಲು ಪ್ರೇಕ್ಷಕರ ತಿರಸ್ಕಾರಕ್ಕೊಳಗಾದ ನಿರ್ದೇಶಕ ಬುದ್ಧಿಜೀವಿ ನಾಗತಿಹಳ್ಳಿ ಚಂದ್ರಶೇಖರ್. 'ಅಮೆರಿಕಾ ಅಮೆರಿಕಾ', 'ನನ್ನ ಪ್ರೀತಿಯ ಹುಡುಗಿ', 'ಅಮೃತಧಾರೆ' ಮೊದಲಾದ ಯಶಸ್ವಿ ಚಿತ್ರಗಳನ್ನು ನೀಡಿರುವ ನಾಗತಿಹಳ್ಳಿ ಅನಂತರ ಸೋಲುಗಳನ್ನೇ ಕಾಣುತ್ತಿದ್ದಾರೆ. ಈ ವರ್ಷ 'ಒಲವೇ ಜೀವನ ಲೆಕ್ಕಾಚಾರ' ಚಿತ್ರವಾದರೂ ನಾಗತಿಹಳ್ಳಿಯನ್ನು ಸೋಲಿನ ಸರಪಳಿಯಿಂದ ಹೊರತರಬಹುದೆಂಬ ನಿರೀಕ್ಷೆ ಕೂಡಾ ಸುಳ್ಳಾಗಿದೆ.

ಈ ಮಧ್ಯೆ 'ರಾಜ್' ಚಿತ್ರಕ್ಕಾಗಿ ತನ್ನ ಚಿತ್ರದ ಬಿಡುಗಡೆಯನ್ನು ಮುಂದೂಡಿದ್ದ ನಿರ್ದೇಶಕ ಚಂದ್ರು ಎಲ್ಲರೂ ಬೆಚ್ಚಿಬೀಳುವಂತ 'ಪ್ರೇಮ್ ಕಹಾನಿ'ಯನ್ನು ನಿರ್ದೇಶಿಸಿದ್ದಾರೆ ಎಂಬ ಸುದ್ದಿ ಗಾಂಧಿನಗರದಲ್ಲಿ ಕೇಳಿಬಂತು. ಹೀಗಾಗಿ ಆ ಚಿತ್ರಕ್ಕೆ ಮಾಧ್ಯಮಗಳಲ್ಲಿ ಭಾರೀ ಪ್ರಚಾರ ಕೂಡ ಸಿಕ್ಕು ಪ್ರೇಕ್ಷಕರು 'ಪ್ರೇಮ್ ಕಹಾನಿ'ಗಾಗಿ ಕಾದು ಕುಳಿತರು. ಆದರೆ ಈ ಚಿತ್ರ ನೋಡಿದಾಗ ಆದ ನಿರಾಶೆ ಅಷ್ಟಿಷ್ಟಲ್ಲ, ಚಂದ್ರು ಎಂಬ ಈ ಹುಡುಗನ ಅತಿಯಾದ ಆತ್ಮವಿಶ್ವಾಸವೇ ಚಿತ್ರವನ್ನು ಕೆಡಿಸಿದೆ ಎಂದು ಹೇಳಬಹುದು. 'ಪ್ರೇಮ್‌ಕಹಾನಿ' ನೋಡಿ ಹೊರಬಂದ ನಂತರ ಇಂತಹ ಸಿನಿಮಾ ಮಾಡೋದಕ್ಕೆ ನಿರ್ದೇಶಕ ಬೇಕಿಲ್ಲ ಅನ್ನಿಸಿತ್ತು....



ಒಂದೆಡೆ ಬುದ್ಧಿಜೀವಿಗಳಾದ ನಾಗತಿಹಳ್ಳಿ ಮತ್ತು ಯೋಗರಾಜ್ ಭಟ್, ಇನ್ನೊಂದೆಡೆ ಗಿಮಿಕ್ ರಾಜರಾದ ಪ್ರೇಮ್ ಮತ್ತು ಚಂದ್ರು.. ಹೀಗೆ ಕ್ಲಾಸ್ ಮತ್ತು ಮತ್ತು ಮಾಸ್ ಎಂಬ ವಿಭಿನ್ನ ಸೂತ್ರಗಳ ನಿರ್ದೇಶಕರನ್ನು ಪ್ರೇಕ್ಷಕ ತಿರಸ್ಕರಿಸಿದ್ದಾನೆ. ಜೊತೆಗೆ 'ಮುಸ್ಸಂಜೆ ಮಾತು' ಚಿತ್ರದ ನಿರ್ದೇಶಕ ಮಹೇಶ್‌ರ ಹೊಸ ಚಿತ್ರ 'ಇನಿಯಾ'ವಾದರೂ ಗೆಲ್ಲಬಹುದೆಂಬ ನಿರೀಕ್ಷೆಯೂ ಸುಳ್ಳಾಯಿತು.



ಇವರೆಲ್ಲರ ಮಧ್ಯೆ ಸ್ವಲ್ಪಮಟ್ಟಿಗೆ ಯಶಸ್ಸು ಕಂಡವರೆಂದರೆ 'ದುನಿಯಾ' ಖ್ಯಾತಿಯ ಸೂರಿ ಮತ್ತು 'ಮಠ' ಖ್ಯಾತಿಯ ಗುರುಪ್ರಸಾದ್. 'ಇಂತಿ ನಿನ್ನ ಪ್ರೀತಿಯ' ಎಂಬ ಚಿತ್ರದಿಂದ ದೊಡ್ಡ ಪಾಠವನ್ನೇ ಕಲಿತ ಸೂರಿ, ಆ ಸೋಲಿನ ಹತಾಶೆ ಮತ್ತು ಸಿಟ್ಟನ್ನು ತೀರಿಸುವ ಕಾರಣಕ್ಕಾಗಿ ಪಕ್ಕಾ ಕಮರ್ಷಿಯಲ್ ಚಿತ್ರ 'ಜಂಗ್ಲಿ'ಯನ್ನು ನಿರ್ದೇಶಿಸಿದರು. 'ಪ್ರೀತಿಯ'ಲ್ಲಿ ಹೋದ ಮಾನ 'ಜಂಗ್ಲಿ'ಯಲ್ಲಿ ವಾಪಸ್ ಸಿಕ್ಕಿತ್ತು, ಹೀಗಾಗಿ ಸೂರಿ ಮತ್ತೆ ಚಾಲ್ತಿಗೆ ಬಂದರು. ಅದೇ ರೀತಿ 'ಮಠ' ಚಿತ್ರದ ಮಾದರಿಯಲ್ಲೇ 'ಎದ್ದೇಳು ಮಂಜುನಾಥ' ಎಂಬ 'ಟಾಕಿ' ಚಿತ್ರವನ್ನು ನಿರ್ದೇಶಿಸಿದ ಗುರುಪ್ರಸಾದ್ ಸೋಲಿನ ದವಡೆಯಿಂದ ಪಾರಾಗಿ ಬದುಕುಳಿದಿದ್ದಾರೆ ಎನ್ನಬಹುದು. ಏಕೆಂದರೆ ಇವರ ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಗೆದ್ದರೂ ನಿರ್ಮಾಪಕರಿಗೆ ಕಾಂಚಾಣದ ಥೈಲಿಯೇನೂ ತಂದುಕೊಡಲಿಲ್ಲ,

ಒಟ್ಟಾರೆಯಾಗಿ ಹೇಳುವುದಾದರೆ ಕನ್ನಡ ಚಿತ್ರಂಗದಲ್ಲಿ ಹೊಸತನವಿಲ್ಲದ, ಕ್ರಿಯಾಶೀಲತೆ ಇಲ್ಲದ ನಿರ್ದೇಶಕರೇ ಇರುವುದರಿಂದ ಕನ್ನಡ ಚಿತ್ರರಂಗ ದಿನದಿಂದ ದಿನಕ್ಕೆ ಬಡವಾಗುತ್ತಿದೆ....

● ಶೆಣೈ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44.